ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 36 ಸೆಪ್ಟೆಂಬರ್ 4, 1988 ಬೆಲೆ 1-00 ರೂ.

ಒಳಗಿನ ಪುಟಗಳಲ್ಲಿ

ಸೆಪ್ಟೆಂಬರ್ ಚಳುವಳಿ-ಬಿರುಸಿನ ಆರಂಭ

ದೇಶದ ರೈತ ಆಂದೋಲನದ ಇತಿಹಾಸದಲ್ಲಿಯೇ ವಿಶಿಷ್ಟವಾದ ಸೆಪ್ಟೆಂಬರ್ ಚಳುವಳಿ, ಎಡಪಕ್ಷಗಳ ನೇತೃತ್ವದ ರೈತ ಸಂಘಗಳು ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳ ಕರೆಯ ಮೇರೆಗೆ ಸೆಪ್ಟೆಂಬರ್ 1 ರಿಂದ ರೈತರ ಹಾಗೂ ಕೃಷಿ ಕಾರ್ಮಿಕರ ಬೃಹತ್ ಸಾಮೂಹಿಕ ಕಾರ್ಯಾಚರಣೆ ಆರಂಭವಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ 120 ತಾಲೂಕು ಕಚೇರಿಗಳ ಮುಂದೆ ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ನೇತೃತ್ವದ ರೈತ ಸಂಘ ಹಾಗೂ ಕೃಷಿ ಕಾರ್ಮಿಕರ ಸಂಘಗಳ ನೇತೃತ್ವದಲ್ಲಿ ಧರಣಿ ಕಾರ್ಯಕ್ರಮ ಯಶಸ್ವಿಯಾಗಿ ಆರಂಭವಾಗಿದೆ. ಈ ಬಗ್ಗೆ ರಾಜ್ಯದ ಎಲ್ಲಾ ಕಡೆಗಳಿಂದ ತಂತಿ ಸಂದೇಶಗಳ ಸುರಿಮಳೆ ಆರಂಭವಾಗಿದೆ. ಬಿಜಾಪುರ, ಸವದತ್ತಿ, ಕಲಬುರ್ಗಿ, ರಾಯಚೂರುಗಳಿಂದ ತಂತಿಗಳು ಬಂದಿವೆ. ಬೇರೆಡೆಗಳಿಂದಲೂ ಸುದ್ದಿಗಳು ಬರುತ್ತಿವೆ.

ಬಾಗೇಪಲ್ಲಿಯಲ್ಲಿ ಸೆಪ್ಟೆಂಬರ್ 1 ರಂದು ಧರಣಿ ನಡೆಸುತ್ತಿದ್ದ 320 ಸಂಗಾತಿಗಳನ್ನು ಹಾಗೂ ಸೆಪ್ಟೆಂಬರ್ 2 ರಂದು 191 ಸಂಗಾತಿಗಳನ್ನು ಬಂಧಿಸಲಾಗಿದೆ.

ಸೆಪ್ಟೆಂಬರ್ 1 ರಿಂದ 3 ರವರೆಗೆ ಧರಣಿ ಕಾರ್ಯಕ್ರಮದ ನಂತರ ಸೆಪ್ಟೆಂಬರ್ 4 ರಂದು ರಾಜ್ಯದ ಹಲವೆಡೆ ರಸ್ತೆ ತಡೆ, ರೈಲ್ ರೋಕೋ ಕಾರ್ಯಕ್ರಮಗಳು ನಡೆಯಲಿವೆ. ಮುಂದಿನ ಹಂತವಾಗಿ ಸೆಪ್ಟೆಂಬರ್ 5 ರಂದು ರಾಜ್ಯದ ಎಲ್ಲಾ ಕಡೆ ಕಾರ್ಯಕ್ರಮ. ಅಂದು ಎಡಪಕ್ಷಗಳ 6 ಜನ ಶಾಸಕರು, ಜಿಲ್ಲಾ ಪರಿಷತ್ ಹಾಗೂ ಮಂಡಲಗಳ ಸದಸ್ಯರು ಪುರಸಭೆ ಸದಸ್ಯರುಗಳೂ ಬಂಧನಕ್ಕೊಳಗಾಗಲಿದ್ದಾರೆ.

ದೇಶಾದ್ಯಂತ ಸುಮಾರು ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನರು ಬಂಧನಕ್ಕೊಳಗಾಗುವ ನಿರೀಕ್ಷೆ ಇರುವ ಈ ಆಂದೋಲನಕ್ಕೆ ಎಪ್ರಿಲ್ ತಿಂಗಳಲ್ಲಿ ಕರೆ ನೀಡಲಾಗಿತ್ತು. ಸಾಮೂಹಿಕ ಸಂಘಟನೆಗಳ ಕೇಂದ್ರ ಸಮನ್ವಯ ಸಮಿತಿ ರೂಪಿಸಿದ ಈ ಚಳವಳಿಯ ಬೇಡಿಕೆಗಳ ಪಟ್ಟಿಯನ್ನು ರೈತರನ್ನು ಸಂಘಟಿಸುತ್ತಿರುವ ಎಲ್ಲಾ ದೇಶದ ರಾಜಕೀಯ ಶಕ್ತಿಯನ್ನು ಅಧಿಕೃತವಾಗಿ ಸ್ವೀಕರಿಸಿ ಅನುಮೋದಿಸಿವೆ.

ವಿರೋಧ ಪಕ್ಷಗಳಿಂದ ಸಂಸತ್ ಅಧಿವೇಶನ ಬಹಿಷ್ಕಾರ

ಆಂಧ್ರ ಪ್ರದೇಶ ಬಂದ್‌ಗೆ ಕರೆ

ರಾಜ್ಯವೊಂದರ ಚುನಾಯಿತ ಪ್ರತಿನಿಧಿಗಳು, ಸಂಸತ್ ಸದಸ್ಯರು, ಶಾಸಕರು, ಜಿಲ್ಲಾ ಪರಿಷತ್ ಅಧ್ಯಕ್ಷರುಗಳು-ಅದರಲ್ಲಿಯೂ ಅನೇಕ ವಿರೋಧ ಪಕ್ಷಗಳ ಶಾಸಕರು ಭಾಗವಹಿಸಿದ, ದೇಶದ ಎಲ್ಲಾ ವಿರೋಧ ಪಕ್ಷಗಳಿಂದ ಬೆಂಬಲ ಪಡೆದ ಈ ಪ್ರತಿಭಟನಾ ನಿಯೋಗವನ್ನು ಭೇಟಿ ಮಾಡುವ ಸೌಜನ್ಯವೂ ನಮ್ಮ ದೇಶದ ಪ್ರಧಾನಿಗಿಲ್ಲ. ನಮ್ಮ ದೇಶದ 6 ಕೋಟಿ ಜನರ ಬೇಡಿಕೆಗಳ ಬಗ್ಗೆ ಈ ಜನರ ಬಹುಸಂಖ್ಯೆಯ ಪ್ರತಿನಿಧಿಗಳು ಮನವಿ ಅರ್ಪಿಸುವುದನ್ನು ಸ್ವೀಕರಿಸುವ ಸಣ್ಣ ಕೆಲಸವೂ ನಮ್ಮ ದೇಶದ ಪ್ರಧಾನ ಮಂತ್ರಿಯಿಂದ ಸಾಧ್ಯವಾಗದೇ ಹೋಯಿತು.

ಜನತೆಯ ಪ್ರತಿನಿಧಿಗಳಾಗಿ ತಮ್ಮ ಕೆಲಸವನ್ನು ನಿರ್ವಹಿಸಲ ಪ್ರಯತ್ನಿಸಿದ ಎಂ.ಪಿ., ಎಂ.ಎಲ್.ಎ.,ಗಳ ಮೇಲೆಯೇ ಅಶ್ರುವಾಯು ಪ್ರಯೋಗ, ಲಾಠಿಚಾರ್ಜ್‌ಗಳನ್ನು ಮಾಡುವುದೆಂದರೆ ದೇಶದ ಪ್ರಜಾಸತ್ತೆಯ ಮೇಲೆ ಗದಾ ಪ್ರಹಾರ ಮಾಡಿದಂತೆ.

ಲೋಕ ಸಭೆಯಲ್ಲಿ ಇದರ ಬಗ್ಗೆ ಪ್ರಶ್ನೆಯತ್ತಿದಾಗ ದೇಶದ ಸಂಸದೀಯ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ವಿರೋಧ ಪಕ್ಷದ ಸಂಸತ್ ಸದಸ್ಯರ ಮೇಲೆ ಧಾಳಿಯಾಗಿದೆ. ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗಿ ನಿಂತು ಈ ಬಗ್ಗೆ ಸರ್ಕಾರದ ಖಂಡನೆಯಾಗುವವರೆಗೂ ರಾಜೀವಗಾಂಧಿ ಕ್ಷಮಾರ್ಪಣೆ ಕೇಳುವವರೆಗೂ ಸಂಸತ್ತಿನ ಎರಡು ಸದನಗಳಲ್ಲಿ ಕಲಾಪಗಳೇ ನಡೆಯದಂತೆ ಮಾಡಿ ಪ್ರತಿಭಟಿಸಿದ್ದಾರೆ.

ಈ ಅಧಿವೇಶನ ನಡೆಯುವವರೆಗೂ ಲೋಕ ಸಭೆಯನ್ನು ಬಹಿಷ್ಕರಿಸಿದ್ದಾರೆ. ಅಲ್ಲದೆ ತೆಲುಗು ದೇಶಂ ಹಾಗೂ ಇತರ ವಿರೋಧಿ ಪಕ್ಷಗಳು ಆಂಧ್ರಪ್ರದೇಶ ಬಂದ್ ಮಾಡಲು ಕರೆ ನೀಡಿದ್ದಾರೆ.

ಈ ಎಲ್ಲಾ ಚಟುವಟಿಕೆಗಳ ಹಿಂದೆಯೂ ಪ. ಬಂಗಾಳದ ಜನ ಸಮೂಹಗಳನ್ನು ಚಳುವಳಿಗಿಳಿಸುವ ಮಾದರಿಯನ್ನು ಅನುಸರಿಸುರುವುದು ಕಂಡು ಬರುತ್ತದೆ.

ಪ. ಬಂಗಾಳ ಮಾದರಿ

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಆಗಸ್ಟ್ 12ರಂದು ಮುಖ್ಯ ಮಂತ್ರಿಯವರ ನೇತೃತ್ವದಲ್ಲಿ ಇದೇ ಎಡರಂಗ ಮಂತ್ರಿ ಮಂಡಲ, ಶಾಸಕರು, ಎಂಪಿಗಳು ಎಲ್ಲರೂ ಬೋಟ್ ಕ್ಲಬ್ ಆವರಣದಲ್ಲಿ ಧರಣಿ ಹೂಡಿದರು. 14ಜನರ ಪ್ರತಿನಿಧಿ ಮಂಡಲವೊಂದು ಪ್ರಧಾನಿಯನ್ನು ಭೇಟಿ ಮಾಡಿ ಮನವಿ ಅರ್ಪಿಸಿತು. ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ 28 ಮಂತ್ರಿಗಳು, 39 ಜನ ಸಂಸತ್ ಸದಸ್ಯರು, 169 ಜನ ಶಾಸಕರು ಇದರಲ್ಲಿ ಭಾಗವಹಿಸಿದ್ದರು. ಪ. ಬಂಗಾಳ ರಾಜ್ಯದ ಅಭಿವೃದ್ಧಿಯ ಪ್ರಶ್ನೆಯನ್ನು ಮಾತ್ರವೇ ಅಲ್ಲ ಇಡೀ ದೇಶಕ್ಕೆ ಸಂಬಂಧಿಸಿದ ನಿರುದ್ಯೋಗ, ಫ್ಯಾಕ್ಟರಿಗಳನ್ನು ಮುಚ್ಚುವುದು ಇತ್ಯಾದಿಗಳ ಬಗ್ಗೆ, ಸಂವಿಧಾನದ 59 ನೇ ತಿದ್ದುಪಡಿಯ

(8ನೇ ಪುಟ ನೋಡಿ)

ಪಕ್ಷದ 13ನೇ ಅಧಿವೇಶನ

—ಪಿ. ರಾಮಚಂದ್ರರಾವ್

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 13 ನೇ ಅಧಿವೇಶನವು ಕೇರಳದ ತಿರುವನಂತಪುರದಲ್ಲಿ 1988 ಡಿಸೆಂಬರ್ 27 ರಿಂದ 31 ರ ವರೆಗೆ ನಡೆಯುವುದು. ಜನವರಿ 1, 1989ರಂದು ಬಹಿರಂಗ ಅಧಿವೇಶನವು ನಡೆಯುವುದು.

ದೇಶದಲ್ಲಿ ಇಂದು ಎರಡು ರಾಜ್ಯಗಳಲ್ಲಿ-ಕೇರಳ ಮತ್ತು ಪಶ್ಚಿಮಬಂಗಾಳ, ಎಡ ಪ್ರಜಾಸತ್ತಾತ್ಮಕ ಪಕ್ಷಗಳ ಒಕ್ಕೂಟ ಮತ್ತು ಎಡರಂಗದ ಸರಕಾರಗಳು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತಿರುವುದನ್ನು, ಲೋಕಸಭಾ ಮತ್ತು ರಾಜ್ಯಸಭೆಗಳಲ್ಲಿ ಅದು ಒಂದು ಪ್ರಮುಖ ವಿರೋಧ ಪಕ್ಷವಾಗಿರುವುದನ್ನೂ, ಹಾಗೂ ದೇಶದ ರಾಜಕೀಯದಲ್ಲಿ ಒಂದು ಗಣ್ಯ ವಿರೋಧ ಪಕ್ಷವಾಗಿದ್ದು ಕಾಂಗ್ರೆಸ್ (ಐ)ಯ 42 ವರ್ಷದ ಜನವಿರೋಧಿ ಸರಕಾರಕ್ಕೆ ಪರ್ಯಾಯವಾಗಿ ಎಡ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ಸರಕಾರವೊಂದು ಪರ್ಯಾಯ ಕಾರ್ಯಕ್ರಮ ಆಧಾರದಲ್ಲಿ ಬೆಳೆದು ಬರುವುದಕ್ಕೆ ಎಡೆಬಿಡದೆ ಶ್ರಮಿಸುತ್ತಾ ಬರುತ್ತಿರುವ ಅತಿ ದೊಡ್ಡ ಎಡ ಪಕ್ಷವಾಗಿರುವುದನ್ನು ನಾವು ಪರಿಗಣಿಸಿದರೆ, ಪಕ್ಷದ ಈ 13 ನೇ ಅಧಿವೇಶನಕ್ಕೆ ಬಹಳಷ್ಟು ಪ್ರಾಮುಖ್ಯತೆ ಇದೆ. ಅದೂ ಕಾಂಗ್ರೆಸ್ (ಐ) ಪಕ್ಷವು ಕಳೆದ 16 ವರ್ಷಗಳಿಂದ ತನ್ನ ಪಕ್ಷದೊಳಗೆ ಚುನಾವಣೆಗಳನ್ನೇ ನಡೆಸದೆ ಪಕ್ಷದೊಳಗೂ ದೇಶದಲ್ಲೂ ತನ್ನ ಸರ್ವಾಧಿಕಾರಿ ಮನೋಭಿಪ್ರಾಯವನ್ನು ಪ್ರಕಟಿಸುತ್ತಾ ಬರುತ್ತಿರುವ ಹಿನ್ನೆಲೆಯಲ್ಲಿ, ಸಿ.ಪಿ.ಐ.(ಎಂ) ಪಕ್ಷ ಪ್ರತಿ 3 ವರ್ಷಗಳಿಗೊಮ್ಮೆ ಕೆಳಗಿನ ಶಾಖೆಯಂತ ಮೂಲ ಘಟಕಗಳಿಂದ ಹಿಡಿದು ಮೇಲಿನ ಕೇಂದ್ರ ಸಮಿತಿಯವರೆಗೆ ಸಮ್ಮೇಳನಗಳನ್ನು ನಡೆಸಿ ಪ್ರಜಾಪ್ರಭುತ್ವ ನಿಯಮಗಳಿಗನುಸಾರವಾಗಿ ನೇತೃತ್ವ ಸಮಿತಿಗಳನ್ನು ನವೀಕರಿಸುತ್ತಿದೆ ಎಂಬುದು ಬಹಳಷ್ಟು ಗಮನೀಯವಾಗಿದೆ.

ಇದೀಗ ಈ ಅಧಿವೇಶನಕ್ಕೆ ಪೂರ್ವಭಾವಿಯಾಗಿ ದೇಶದ ಎಲ್ಲಾ ರಾಜ್ಯಗಳಲ್ಲಿ ಶಾಖೆ, ಮಧ್ಯಂತರ ಸಮಿತಿಗಳು ಜಿಲ್ಲಾ ಸಮಿತಿಗಳು ಮತ್ತು ರಾಜ್ಯ ಸಮಿತಿಗಳು ನಡೆಸಲಿರುವ ಸಮ್ಮೇಳನಗಳಿಗೆ ಸಹಾಯಕವಾಗುವುದಕ್ಕೆ ಕೇಂದ್ರ ಸಮಿತಿಯು 15 ಅಂಶಗಳುಳ್ಳ ಒಂದು ವಿವರವಾದ ನಿರ್ದೇಶನ ಸೂತ್ರಗಳನ್ನು ಕಳುಹಿಸಿದೆ. ಈ ಸೂತ್ರಗಳ ಆಧಾರದಲ್ಲಿ ಆಯಾಯ ಮಟ್ಟಗಳಲ್ಲಿ ಕರಡು ವರದಿಗಳನ್ನು

(8ನೇ ಪುಟ ನೋಡಿ)

ರಾಷ್ಟ್ರೀಯ ರಂಗದ ಮುಖಂಡರು ಜಾಗರೂಕರಾಗಿರಬೇಕು

ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ತನ್ನ ಇತ್ತೀಚಿನ ಸಭೆಯಲ್ಲಿ ರಾಷ್ಟ್ರೀಯ ರಂಗದ ಸ್ಥಾಪನೆಯನ್ನು ಸ್ವಾಗತಿಸಿತ್ತು. 71 ಅಂಶಗಳ ಕಾರ್ಯಕ್ರಮ ಹಾಗೂ ಪ್ರಮುಖ ಜನತಾ ಮುಖಂಡರಾದ ಬಿಜುಪಟ್ನಾಯಕ್‌ರವರ ನೇತೃತ್ವದಲ್ಲಿ ಪ್ರಚಾರ ಸಮಿತಿಯ ನೇಮಕದಿಂದ ಇನ್ನಾದರೂ ತೊಂದರೆಗಳೆಲ್ಲಾ ನಿವಾರಣೆಯಾಗಿ ಸಂಬಂಧಪಟ್ಟ ಪಕ್ಷಗಳು ಜನಗಳ ಬಳಿಗೆ ಹೋಗಬಹುದೆಂಬ ನಿರೀಕ್ಷೆ ಅತಿಯಾಯಿತೇನೊ ಎಂದೆನಿಸುತ್ತಿದೆ.

ರಂಗದ ಸ್ಥಾಪನೆಯಿಂದ ಸರ್ವಸಾಮಾನ್ಯ ಕಾರ್ಯಕ್ರಮದ ಅಂಗೀಕಾರದಿಂದ ಉಂಟಾಗಿರುವ ಪರಿಣಾಮ ಕೆಲವು ಮುಖಂಡರು ರಂಗದಲ್ಲಿನ ಇತರ ಕೆಲವರ ವಿರುದ್ಧ ಬಳಸುತ್ತಿರುವ ಅಸ್ಪಷ್ಟ ವಿಶೇಷಣಗಳಿಂದಾಗಿ ಕರಗಿ ಹೋಗುತ್ತಿದೆ. ರಂಗದ ಇತರ ಮುಖಂಡರು ಪರಸ್ಪರ ಕಿತ್ತಾಡುವ ಈ ಕಾಯಕವನ್ನು ನಿಲ್ಲಿಸದಿದ್ದರೆ ರಂಗದ ವಿಶ್ವಾಸಾರ್ಹತೆ ಹಾಗೂ ಭವಿಷ್ಯಕ್ಕೆ ಕುಂದು ಬರುತ್ತದೆ.

ರಂಗ ಇದುವರೆಗೆ ಬಿ.ಜೆ.ಪಿ. ಯಂತಹ ಕೋಮುವಾದಿಗಳಿಂದ ದೂರವಿದ್ದರೂ.... ಒಂದೆಡೆ ಎಡಪಕ್ಷಗಳನ್ನು ಓಲಿಸಿಕೊಳ್ಳಲು ಪ್ರಯತ್ನಿಸುತ್ತಾ, ಇನ್ನೊಂದೆಡೆ ಕೋಮು ಹಾಗೂ ಪ್ರತ್ಯೇಕತಾವಾದಿಗಳಿಗೆ ಮನವಿ ಮಾಡಿಕೊಳ್ಳುವುದು ದೇಶದ ಐಕ್ಯತೆ ಮತ್ತು ಪ್ರಜಾಪ್ರಭುತ್ವಕ್ಕೆ ಹಾನಿಕಾರಕ ಎಂದು ಕೇಂದ್ರ ಸಮಿತಿ ಎಚ್ಚರಿಸಿತ್ತು.

ಈ ಎಚ್ಚರಿಕೆಯನ್ನು ಪುನರುಚ್ಚರಿಸಬೇಕಾಗುತ್ತದೇನೋ ಎಂದೆನಿಸುತ್ತಿದೆ. ರಂಗದ ಕೆಲವು

(8ನೇ ಪುಟ ನೋಡಿ)

ರಾಷ್ಟ್ರೀಯ ರಂಗದ ಮುಖಂಡರು ಬಹಳ ಸಮಯ ಕಳೆದು ಇತ್ತೀಚಿನ ಚುನಾವಣೆಗಳು ಹುಟ್ಟಿಸಿದ ಉತ್ಸಾಹವನ್ನೂ ವ್ಯರ್ಥಗೊಳಿಸಿದ್ದಾರೆ. ಆದರೂ ಸರಿಪಡಿಸಿಕೊಳ್ಳಲು ಇನ್ನೂ ಸಮಯವಿದೆ. ಡಿಸೆಂಬರ್ 9ರ ಪ್ರದರ್ಶನ, ಮಾರ್ಚ 15ರ ಬಂದ್ ನಂತರ ಈಗ ದೇಶಾದ್ಯಂತ ರೈತರ ಮತ್ತು ಕೃಷಿ ಕೂಲಿಕಾರರ ಸಾಮೂಹಿಕ ಕಾರ್ಯಾಚರಣೆಗಳ ಮೂಲಕ ಜನ ಸಮೂಹಗಳನ್ನು ಅಣಿನೆರೆಸುವಲ್ಲಿ ಎಡ ಪಕ್ಷಗಳು ಮೂರನೆ ಬಾರಿ ಮುಂದಡಿಯಿಟ್ಟಿವೆ. ಇದಕ್ಕೆ ಪೂರ್ಣ ಬೆಂಬಲ ನೀಡುವುದೇ ವಿಶ್ವಾಸಾರ್ಹ ರಂಗ ಕಟ್ಟುವಲ್ಲಿ ಬಿ.ಜೆ.ಪಿ. ಬೆದರಿಕೆಗೆ ತಲೆಬಾಗುವುದಕ್ಕಿಂತ ಎಷ್ಟೋ ಪಾಲು ಹೆಚ್ಚು ಪರಿಣಾಮಕಾರಿಯಾದ ಮಾರ್ಗ.

"ಪೀಪಲ್ಸ್ ಡೆಮಾಕ್ರಸಿ"ಯ ಸಂಪಾದಕೀಯ (ಆಗಸ್ಟ್ 28) ಮಾಡಿರುವ ಈ ವಿಶ್ಲೇಷಣೆಯ ಸಂಗ್ರಹಾನುವಾದ ಇಲ್ಲಿದೆ.

ಬೆಂಕಿಯನ್ನಾರಿಸಬೇಕು

—ಸು. ರಂ. ಎಕ್ಕುಂಡಿ

ನನ್ನ ಆಸೆ ಒಂದೇ. ಮೋಡಗಳು ಅಳಬೇಕು. ತಾಯಂದಿರುಳ್ಳ ಇಲ್ಲವೇ ಇಲ್ಲದ ಮಕ್ಕಳಲ್ಲಿ ಹೂವುಗಳು ಅರಳಬೇಕು. ಕಣ್ಣುಗಳಲ್ಲಿ ಬೆಂಕಿಗಳನ್ನಾರಿಸಬೇಕು." ಖ್ಯಾತ ಕವಿ ಅಖ್ತರ ಆಸೆ. ಬರಿಯ ಕನಸುಗಾರ ಕವಿಯ ಆಸೆಯೊಂದೇ ಅಲ್ಲ. ಸಮಾಜವಾದೀ ರಾಷ್ಟ್ರವೊಂದು ಹುಟ್ಟಿದಂದಿನಿಂದ ಇಂದಿನವರೆಗೂ ಇಟ್ಟುಕೊಂಡು, ಅದಕ್ಕಾಗಿಯೇ ಹೋರಾಡಿ ಶ್ರಮಿಸುತ್ತಿರುವ ರಶಿಯಾದ ಆಸೆಯೂ ಅದೇ ಆಗಿದೆ. ಪ್ರಪಂಚದ ಎಲ್ಲ ವಿವೇಕಿಗಳ ಮಾನವತಾವಾದಿಗಳ ಆಸೆಯೂ ಅದೇ ಆಗಿದೆ. 80 ವರ್ಷಗಳಲ್ಲಿ ಎರಡು ಮಹಾಯುದ್ಧಗಳನ್ನು ಅನುಭವಿಸಿ, ಮಿಲಿಯಾಂತರ ಜೀವಗಳನ್ನು ಮಣ್ಣುಗೂಡಿಸಿದ್ದನ್ನೂ ಕಣ್ಣಾರಳಿಸಿ ಕಂಡ ಪ್ರಪಂಚಕ್ಕೆ ಇರುವ ಆಸೆ ಸಹಜವಾಗಿಯೇ ಶಾಂತಿಯ ಆಸೆಯೊಂದೇ ಆಗಿದೆ.

ಈ ಆಸೆಯು ಕೇವಲ ಭಾವೋನ್ಮಾದಗಳಿಂದ ಇಲ್ಲವೇ ಕನಸುಗಾರರಿಂದ ಬಂದ ಯಾವುದೋ ಅವಾಸ್ತವ ಸಂಗತಿಯಾಗಿಲ್ಲ. ವಿಚಾರ ವಿವೇಕವುಳ್ಳ ಮನುಷ್ಯನೆಂಬ ಪ್ರತಿಯೊಬ್ಬನಿಗೂ ಇಂಥ ಆಲೋಚನೆ ಬರುವುದು ತೀರಾ ಸ್ವಾಭಾವಿಕವಾಗಿದೆ. ಶಾಂತಿಯು, ಈಗ ಪ್ರಪಂಚದ ಅವಶ್ಯಕತೆ ಅಷ್ಟೇ ಅಲ್ಲ. ಅನಿವಾರ್ಯವೂ ಆಗಿದೆ. ಅದರಲ್ಲೂ ಈಚಿನ ವೈಜ್ಞಾನಿಕ, ತಾಂತ್ರಿಕ ಹಾಗೂ ಸಾವಿನ ಉಪಕರಣಗಳಲ್ಲಿ ಮಾರಕ ಮುನ್ನಡೆಯನ್ನು ಗಮನಿಸಿದಾಗ ಮಾನವ ಜನಾಂಗಕ್ಕೆ ಶಾಂತಿಯೊಂದನ್ನುಳಿದು ಇನ್ನೊಂದು ದಾರಿಯೇ ಇಲ್ಲವೆಂದು ನಿಚ್ಚಳವಾಗುತ್ತದೆ.

ಮಾಸ್ಕೋದಲ್ಲಿ ಈಚೆಗೆ ರೇಗನ್ ಹಾಗೂ ಗೋರ್ಬಚೆವ್‌ರ ನಡುವಿನ ತಂಪಾದ ಮಾತುಕತೆಗಳು ಶಾಂತಿಯ ಅನಿವಾರ್ಯತೆಯನ್ನು ಇನ್ನಷ್ಟು ದೃಢಪಡಿಸುತ್ತಿವೆ. ಏಕೆಂದರೆ ಯುದ್ಧಗಳು ಮತ್ತು ಸಾವು ನೋವುಗಳ ಮೇಲೆಯೆ ಬದುಕು ವಿಜೃಂಭಿಸಿದೆ. ಸಾಮ್ರಾಜ್ಯವಾದಿಗಳು, ವಸಾಹತುವಾದಿಗಳು, ವರ್ಣದ್ವೇಷಿಗಳು, ಶೋಷಕರು ಯುದ್ಧಕೋರರು ಹಾಗೂ ಜನದ್ವೇಷಿಗಳು ಕೂಡ ಈಗ ಒಮ್ಮೆಲೆ ಶಾಂತಿಯಕುರಿತು ಆಲೋಚನೆ ಮಾಡುವುದಷ್ಟೆ ಅಲ್ಲ, ಅಂಥ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಅವರ 'ಹೃದಯ ಪರಿವರ್ತನೆ' ಆಗಿದೆಯೆಂಬ ಕಾರಣಕ್ಕಲ್ಲ ಆದರೆ ಪರಿಸ್ಥಿಯಲ್ಲಿ ಪರಿವರ್ತನೆ ಆದ ಕಾರಣಕ್ಕೆ. ದೇಶದ ಒಳಗೂ ಹೊರಗೂ ಶಾಂತಿಯ ಒತ್ತಡಗಳು ಎಷ್ಟು ಉಗ್ರವಾಗಿವೆ ತೀವ್ರವಾಗಿವೆಯೆಂದರೆ ಅವರು ಇಂಥ ಕಾರ್ಯಕ್ಕೆ ಮುಂದಾಗದೆ ಹೋದರೆ, ಕಾಲಿನ ಕಸದ ತೊಟ್ಟಿಯಲ್ಲಿ ಎಸೆಯುವ ಕೈಗಳೂ ತೀರ ಹತ್ತಿರಕ್ಕೆ ಬಂದಿವೆ. ಶಾಂತಿಯು ಇಲ್ಲದೆ ಹೋದರೆ ಈಗ 'ಸರ್ವ ನಾಶ' ವೊಂದೇ ಆಯ್ಕೆ. ಏಕೆಂದರ ಮತ್ತೊಂದು ಯುದ್ಧವಾದರೆ ಅದರಲ್ಲಿ 'ವಿಜಯಿ'ಗಳೆಂಬುವರು ಯಾರೂ ಇರುವುದೇ ಇಲ್ಲ. ಒಮ್ಮೆ ವಿಖ್ಯಾತ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೈನರಿಗೆ ಅಣುಬಾಂಬಿನ ಹಿರೋಶಿಮಾ ದುರಂತದ ನಂತರ ಪತ್ರಕರ್ತರೊಬ್ಬರು ಭೇಟಿ ಮಾಡಿ ಕೇಳಿದರು. 'ಯುದ್ಧ ಶಾಂತಿಗಳ ಕುರಿತು ಯೋಚಿಸಿದಾಗ-ನಿಮಗೆ ಏನೆನ್ನಿಸುತ್ತದೆ ? ಮತ್ತೊಂದು ಯುದ್ಧವಾಗಬಹುದೆ ? ಅದಕ್ಕೆ ಐನ್‌ಸ್ಟೀನ್‌ರು ಉತ್ತರಿಸಿದರು. "ಮೂರನೆಯ ಯುದ್ಧವೊಂದು ಆಗುವುದು ನನಗೆ ಸಂಶಯ. ಆದರೆ ನಾಲ್ಕನೆಯ ಯುದ್ಧ ಮಾತ್ರ ಖಂಡಿತ ಆಗದೆಂದು ನನಗೆ ಭರವಸೆ ಇದೆ. ಏಕೆಂದರೆ ಆಗ ಅಲ್ಲಿ ಹೋರಾಡಲು ಯಾರೂ ಇರುವುದೇ ಇಲ್ಲ !"

'ಹುಚ್ಚರಿಗೆ ಮಾತ್ರ ಯುದ್ಧಬೇಕು' ಎಂದು ಗ್ರೀಕ್ ಇತಿಹಾಸಕಾರ ಹೆರೋಡಟಸ್ ನುಡಿದದ್ದು ಐತಿಹಾಸಿಕ ಸತ್ಯವೂ ಆಗಿದೆ. ಮಿಖಾಯಿಲ್‌ಗೋರ್ಬಚೇವ್ ಒಮ್ಮೆ ಹೇಳಿದರು. 'ಇಂದು ಮಾನವ ಜನಾಂಗವು ಹಲವಾರು ಕಠಿಣವಾದ ಹಾಗೂ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಿದೆ. ರಾಷ್ಟ್ರೀಯ ಪ್ರಾದೇಶಿಕ ಹಾಗೂ ಜಾಗತಿಕ ನೆಲೆಗಳಲ್ಲಿ ಆದರೆ ಅವೆಲ್ಲವುಗಳಲ್ಲಿ ನ್ಯೂಕ್ಲಿಯರ್ ವಿನಾಶಕ್ಕಿಂತ ತುರ್ತಿನ ಸಮಸ್ಯೆ ಇನ್ನೊಂದಿಲ್ಲ. ಅದರ ಅಪಾಯವನ್ನು ತಡೆಯುವುದು, ಶಸ್ತ್ರಾಸ್ತ್ರ ಪೈಪೋಟಿ ನಿಲ್ಲಿಸುವುದು ಬಾಹ್ಯಾಕಾಶಕ್ಕೆ ಇದು ಅಬ್ಬರದಂತೆ ತಡೆಯುವುದು ಮತ್ತು ಇದರಿಂದ ಮಾನವಕುಲವನ್ನು ರಕ್ಷಿಸುವುದು" ಇದು ಅತ್ಯಂತ ಜರೂರಿನ ಕೆಲಸವಾಗಿದೆ. ಸಮಾಜವಾದಿ ರಾಷ್ಟ್ರವೊಂದರ ಮಾನವೀಯ ಕಾಳಜಿ ಹಾಗು ಶಾಂತಿ ಪ್ರೇಮಿಗಳಿಗೆ ಗೋರ್ಬಚೆವ್‌ರ ಮಾತು ಜ್ವಲಂತ ನಿದರ್ಶನವಾಗಿದೆ. ಸೋವಿಯತ್ ಒಕ್ಕೂಟವು ಈ ಅಪಾಯದ ಗಂಟೆ ಬಾರಿಸಲು ಮುಂದಾಗುತ್ತಿರುವುದಕ್ಕೆ ಸಾಕಷ್ಟು ಪ್ರಬಲ ಕಾರಣಗಳೂ ಇವೆ. 20 ಮಿಲಿಯ ಧೀರ ಯೋಧರನ್ನು ಬಲಿ ಕೊಟ್ಟು ಫ್ಯಾಸಿಸ್ಟ್ ದುರಾಕ್ರಮಣವನ್ನು ಹಿಮ್ಮೆಟ್ಟಿಸಿ ಪ್ರಪಂಚವನ್ನು ನಾಝೀ ರಾಕ್ಷಸರಿಂದಲೂ ಯುದ್ಧಕೋರರಿಂದಲೂ ಸಂರಕ್ಷಿಸಿ ಹೋರಾಡಿದ್ದು ಸೋವಿಯತ್ ಒಕ್ಕೂಟವೇ. ಅಸಂಖ್ಯ ಸಾವು ನೋವುಗಳನ್ನು ಅನುಭವಿಸಿ ಅಪಾರ ತ್ಯಾಗ ಹಾಗೂ ಬಲಿದಾನಗಳಿಂದ ಮಾನವ ಜನಾಂಗಕ್ಕೆ ಶಾಂತಿಯ ಭರವಸೆ ನೀಡಿ ಹೋರಾಡಿದ ರಾಷ್ಟ್ರವೂ ಸೋವಿಯತ್ ಒಕ್ಕೂಟವೇ. ಎರಡನೆ ಮಹಾಯುದ್ಧದ ಚರಿತ್ರೆ ಬಲ್ಲವರಿಗೆ ಸೋವಿಯತ್ ಒಕ್ಕೂಟವು ಸಮರದ ಹೊರೆ ಹಾಗೂ ಹೊಣೆಗಳನ್ನು ಎಷ್ಟು ಸಮರ್ಥವಾಗಿ ಏಕಾಂಗಿಯಾಗಿ ನಿರ್ವಹಿಸಿತು. ಹಾಗೂ ಪ್ರಪಂಚವನ್ನು ಕಬಳಿಸಲು ಹೊರಟ ದುರುಳ ಫ್ಯಾಸಿಸ್ಟರನ್ನು ಬರ್ಲಿನ್ನಿನವರೆಗೆ ಬೆನ್ನಟ್ಟಿಕೊಂಡು ನಾಶಪಡಿಸಿತು ಎಂಬುದು ರೋಮಾಂಚಕಾರಿ ಸಂಗತಿ ಆಗಿದೆ.

ಆರು ವರ್ಷಗಳವರೆಗೆ ಜರುಗಿದ ಈ ಮಹಾಯುದ್ಧದಲ್ಲಿ 61 ರಾಷ್ಟ್ರಗಳು ತೊಡಗಿಕೊಂಡಿದ್ದವು. ಪ್ರಪಂಚದ ಜನಸಂಖ್ಯೆಯ ಶೇ. 80 ರಷ್ಟು ಜನ ಅದರಲ್ಲಿ ಪಾಲುಗೊಂಡಿದ್ದರು. 40 ರಾಷ್ಟ್ರಗಳ ಪ್ರದೇಶದಲ್ಲಿ ಯುದ್ಧರಂಗ ವ್ಯಾಪಿಸಿತ್ತು. ಒಂದು ನೂರಹತ್ತು ಮಿಲಿಯ ಜನರನ್ನು ಹೋರಾಡಲು ಸಜ್ಜುಗೊಳಿಸಲಾಗಿತ್ತು. 3 ಮಿಲಿಯಕ್ಕಿಂತಲೂ ಹೆಚ್ಚು ಜನ ನಾಗರೀಕರು ಫ್ಯಾಸಿಸ್ಟ್ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರು. 50 ಮಿಲಿಯಕ್ಕಿಂತಲೂ ಹೆಚ್ಚುಜನ ಯುದ್ಧದಲ್ಲಿ ಮಡಿದರು. 'ಫ್ಯಾಸಿಸ್ಟ'ರ ನಾಜೀ ರಾಕ್ಷಸರು ಹೆಂಗಸರು, ಮಕ್ಕಳು ಎಂದು ಕೂಡ ನೋಡದೆ 12 ಮಿಲಿಯ ಜನರನ್ನು ಕೊಂದರು. 95 ಮಿಲಿಯಕ್ಕಿಂತ ಹೆಚ್ಚಿನ ಜನ ಅಂಗವಿಕಲರಾದರು. ಮಿಲಿಟರಿ ವೆಚ್ಚಕ್ಕೆಂದು ಯುದ್ಧದಲ್ಲಿ ಹೋರಾಡಿದ ರಾಷ್ಟ್ರಗಳು 1,117000 ಮಿಲಿಯ ಡಾಲರುಗಳನ್ನು ಬೂದಿ ಮಾಡಿದ್ದವು. ಈ ಯುದ್ಧದ ಅತ್ಯಂತ ಭಾರವಾದ ಹೊರೆಯನ್ನು ಸೋವಿಯತ್ ಒಕ್ಕೂಟ ಹೊತ್ತುಕೊಂಡಿತು. ಮಿತ್ರಪಕ್ಷಗಳೆಂದು ಸೇರಿಕೊಂಡ ಬ್ರಿಟನ್ ಅಮೇರಿಕಗಳು ಅಂಥಾ ಜಾಗತಿಕ ಸಂಕಟದಲ್ಲೂ ಒಮ್ಮೊಮ್ಮೆ ಹಿತಶತ್ರುಗಳಾಗಿ ವರ್ತಿಸಿದರು. ನಾಝಿಗಳ ಸೋಲು ಅವರಿಗೆಷ್ಟು ಸಂತೋಷ ಕೊಟ್ಟಿತೋ ತಿಳಿಯದು. ಆದರೆ ಸೋವಿಯತ್ ಒಕ್ಕೂಟದ ಗೆಲುವು ಮಾತ್ರ ಅವರಿಗೆ ತರಬೇಕಾದ ಸಂತೋಷ ತರಲಿಲ್ಲ. ಒಮ್ಮೊಮ್ಮೆ ಯುದ್ಧ ನಡೆದಾಗಲೂ ಒಳಗೊಳಗೆ ಫ್ಯಾಸಿಸ್ಟರುಗಳೊಂದಿಗೆ ಒಳಸಂಚಿಗೆ, ಸಂಧಾನಕ್ಕೆ ಮುನ್ನುಗ್ಗುತ್ತಿದ್ದ ಮಿಲಿಟರಿ ದಾಖಲೆಗಳೂ ಅವರ ಕುಟಿಲ ರಾಜಕೀಯಕ್ಕೆ ಕೈಗಂಬವಾಗಿದೆ. ಸೋವಿಯತ್ ಒಕ್ಕೂಟಕ್ಕೆ ಈ ಅಪಾಯದ ಪೂರ್ಣ ಅರಿವಿದ್ದುದರಿಂದಲೇ ಅವರು ಅತ್ಯುಗ್ರವಾಗಿ ಹೋರಾಡಿದರು. ಅವರ ಹೋರಾಟ ಅವರಿಗಾಗಿಯಷ್ಟೆ ಆಗಿದ್ದಲ್ಲ, ಮಾನವ ಜನಾಂಗಕ್ಕಾಗಿ ನಡೆಸಿದ ನ್ಯಾಯವಾದ ಹೋರಾಟವಾಗಿತ್ತು.

ಸೋವಿಯತ್ ಒಕ್ಕೂಟದ ಈ ಅಸಾಮಾನ್ಯ ವಿಜಯವನ್ನು ಅನೇಕ ಮಿಲಿಟರಿ ಚರಿತ್ರಕಾರರು ಅದ್ಭುತವೆಂದು ವರ್ಣಿಸಿದ್ದಾರೆ. ಅತ್ಯಂತ ಪ್ರಾಮಾಣಿಕ ಮಿತ್ರನೆಂದು ವರ್ತಿಸಿದ ರಶಿಯವು ಬ್ರಿಟನ್ ಅಮೇರಿಕಗಳಿಗೆ ಯುದ್ಧ ರಂಗದಲ್ಲಿ ನೆರವಾಗಿ, 1945, ಆಗಸ್ಟ್ 8 ರಂದು, ಯುದ್ಧಕೋರ ಜಪಾನಿನ ಮೇಲೆ ಯುದ್ಧ ಸಾರಿದರು. ಸಮರವನ್ನು ಶೀಘ್ರ ಮುಕ್ತಾಯಗೊಳಿಸುವಲ್ಲಿ, ರಶಿಯನ್ನರ ಈ ನೆರವು ಪ್ರಮುಖ ಅಂಶವಾಯಿತು. ಫೆಸಿಫಿಕ್‌ನಲ್ಲಿ ಬ್ರಿಟನ್ ಮತ್ತು ಅಮೆರಿಕಗಳು ನಡೆಸಿದ ಹೋರಾಟವನ್ನು ಯಶಸ್ವಿಗೊಳಿಸುವಲ್ಲಿ ಇದು ಸಫಲವಾಯಿತು.

ಹಿರೋಷಿಮಾ ಮತ್ತು ನಾಗಸಾಕಿಗಳಲ್ಲಿ, 1945 ಆಗಸ್ಟ್ 6 ಮತ್ತು 9 ರಂದು ಅಮೆರಿಕದ ವೈಮಾನಿಕರು ಎರಡು ಅಣುಬಾಂಬುಗಳನ್ನೆಸೆದರು. ಅದರಲ್ಲಿ 4 ಲಕ್ಷ 50 ಸಾವಿರ ಜನ ಹತರಾದರು, ಇಲ್ಲವೆ ಅಂಗವಿಕಲಗೊಂಡರು. ಅಣುವಿಕಿರಣದಿಂದ ಲಕ್ಷಾಂತರ ಜನರು ಈಗಲೂ ಬಳಲುತ್ತಿದ್ದಾರೆ. ಯಾವ ಮಿಲಿಟರಿ, ಅನಿವಾರ್ಯತೆಯೂ ಇಲ್ಲದೆ ಜಪಾನಿನ ನಾಗರಿಕ ಹತ್ಯೆಗೆ ಕಾರಣವಾದ ಈ ಅಣುಬಾಂಬಿನೆಸೆತವು ಅಮೆರಿಕದ ಯುದ್ಧಕೋರರ ಕ್ರೌರ್ಯಕ್ಕೆ ನಿದರ್ಶನವಾಗಿದೆ. ಇಂಥ ಕ್ರೂರ ಮಾರಕಾಸ್ತ್ರದಿಂದ ಮುಗ್ಧರ ಹತ್ಯೆಗೈಯ್ಯುವಲ್ಲಿ ಅಮೆರಿಕವು ಎರಡು ಉದ್ದೇಶಗಳನ್ನಿಟ್ಟುಕೊಂಡಿತ್ತು. 1. ತನ್ನಿಂದಲೆ ಎರಡನೇ ಯುದ್ಧ ಮುಗಿಯಿತೆಂಬ ಭ್ರಮೆ ಜನರಲ್ಲುಂಟಾಗಬೇಕು. 2. ಪ್ರಪಂಚದ ಎಲ್ಲ ಶಾಂತಿ ಪ್ರಿಯ ರಾಷ್ಟ್ರಗಳಿಗೂ ತನ್ನ ಪ್ರಚಂಡ ಶಸ್ತ್ರಬಲದಿಂದ ಹೆದರಿಸಿ ಇನ್ನಾರು ಅಮೆರಿಕದ ಎದುರು ಕಿರುಬೆರಳನ್ನು ಎತ್ತದಂತೆ ಮಾಡಬೇಕು,ಹಾಗೂ ಇದು ಮುಖ್ಯ ಸೋವಿಯತ್ ಒಕ್ಕೂಟವನ್ನು ಅಂಜಿಸಿ ಯುದ್ಧಾನಂತರ ತನಗೆ ಮನಸ್ಸಿಗೆ ಬಂದ ಸಂಧಾನದ ಶರತ್ತುಗಳನ್ನು ರಶಿಯಾದ ಮೇಲೂ ಪ್ರಪಂಚದ ಮೇಲೂ ಹೇರಬೇಕು.

ಇಷ್ಟೆಲ್ಲ ವಿನಾಶದ 4 ದಶಕಗಳ ನಂತರವೂ ಸಾಮ್ರಾಜ್ಯವಾದ ಯುದ್ಧಕೋರರು ಇನ್ನೂ ಮಾನವ ಜನಾಂಗ ವಿನಾಶದತ್ತ ಒಯ್ಯುವ ಪಿತೂರಿಗಳಲ್ಲೇ ಮುಳುಗಿದ್ದಾರೆ. 10 ವರ್ಷಗಳ ಹಿಂದೆ ಪ. ಜರ್ಮನಿಯಲ್ಲಿ ಅಮೇರಿಕ ನ್ಯೂಟ್ರಾನ್ ಬಾಂಬ್ ಒಂದು ಪ್ರಯೋಗ ನಡೆಸಿತು. ಆಗ ಅಮೇರಿಕದ ಪತ್ರಿಕೆಗಳು ಇದೊಂದು ಅಮಾನವೀಯ ಮಾರಕಾಸ್ತ್ರವೆಂದು ಪ್ರಚಾರ ನಡೆಸಿದರು. ಇದರಿಂದ ಮಿಲಿಯಾಂತರ ಜನರು ಹತರಾದರೂ, ಜನರ ಆಸ್ತಿಪಾಸ್ತಿ ಸುರಕ್ಷಿತವಾಗುಳಿಯುವುದೆಂದು ಬಣ್ಣಿಸಿದರು. ಇದನ್ನೊಂದು ವಾಣಿಜ್ಯ ಸರಕನ್ನಾಗಿಸಿಲಾಭ ಗಳಿಸಲು ಅಮೇರಿಕದ ಯುದ್ಧಾಸಕ್ತರು ಮುಂದಾದರು. ಪೆಂಟಗಾನಿನ ಈ ರಾಕ್ಷಸ ಸಂಶೋಧನೆಯ ಫಲವಾಗಿ ಹಿರೋಷಿಮಾಗಳು ಇನ್ನೂ 'ಸ್ವಚ್ಛ'ವಾಗಿ ಸಾಯುತ್ತವೆ. ಅಮೆರಿಕದ ಮಿಲಿಟರಿ ಉದ್ಯಮ ಸಂಕೀರ್ಣಗಳು ಅಪಾರ ಲಾಭ ಗಳಿಸಬಲ್ಲವು. ಅಮೆರಿಕದ ಆಸ್ತಿ, ಸಂಪತ್ತುಗಳ ಒಡೆಯರಿಗಂತೂ ಹೇರಳವಾದ ಸಂಪಾದನೆ ! ಆದರೆ ಈ ಬಾಂಬು ಯಾರಿಗಾಗಿ ತಯಾರಾಗುತ್ತಿರಬಹುದು ? ಇದನ್ನು ಯಾರಿಗೆ ನಿರ್ಯಾತ ಮಾಡುತ್ತಿರಬಹುದು ? ಉತ್ತರ ಸುಲಭವಾಗಿಯೇ ಇದೆ. ವಸಾಹತುವಾದಿಗಳು ಯುದ್ಧಕೋರರು, ಲಾಭ ಬಡುಕರು, ವರ್ಣದ್ವೇಷಿಗಳು ಹಾಗೂ ಶೋಷಕರು, ತಮ್ಮ ಶತ್ರುಗಳೆಂದು ಭಾವಿಸುವ ಸಮಾಜವಾದಿ ರಾಷ್ಟ್ರಗಳ ವಿರುದ್ಧ ಮುಖ್ಯವಾಗಿ ಸೋವಿಯತ್ ಒಕ್ಕೂಟದ ವಿರುದ್ಧ ಇದನ್ನು ತಯಾರಿಸುತ್ತಿದ್ದಾರೆ. ತನ್ನಂಥ ಪಾತಕಿಗಳಿಗೂ ಇದನ್ನು ನಿರ್ಯಾತ ಮಾಡತೊಡಗಿದ್ದಾರೆ.

ಈ ನ್ಯೂಟ್ರಾನ್ ಬಾಂಬಿಗಿಂತ ದೊಡ್ಡ ಕುಹಕ ಇನ್ನೊಂದಿರಲಾರದು. ಈ ನ್ಯೂಟ್ರಾನ್ ಬಾಂಬಿನಿಂದ ಸೃಷ್ಟಿಯ ಕಿರೀಟವೆಂಬ ಬೈಬಲ್ ಬಣ್ಣಿಸಿದ ಮನುಷ್ಯನು ಅಣುವಿಕಿರಣ, ರಕ್ತಸ್ರಾವ ಹಾಗೂ ಯಾವುದೇ ಯಾತನೆಯಿಲ್ಲದೆ ಸಾಯಲಿಲ್ಲ. ಅಂದ ಹಾಗೆ ರೇಗನ್ ಈ ಪವಿತ್ರ ಬೈಬಲ್ ಮುಟ್ಟಿಯೇ ರಾಷ್ಟ್ರಾಧ್ಯಕ್ಷನೆಂದು ಪ್ರಮಾಣವಚನ ಸ್ವೀಕರಿಸಿದ್ದು ಇಲ್ಲಿ ಅಪ್ರಸ್ತುತವೇನಲ್ಲ. ಅಮೇರಿಕದ ಪತ್ರಿಕೆಗಳು ಈ ಬಾಂಬಿಗೆ ಅಪಾರ ಲಾಭ ಹಾಗೂ ಪ್ರಯೋಜನಗಳನ್ನು ಹಾಡಿಹೊಗಳಿದ್ದು ಇನ್ನೊಂದುಕಾರಣಕ್ಕಾಗಿ. ದಾಳಿಕೋರರಿಗೆ ಈ ಬಾಂಬು ಸುರಕ್ಷಿತವಾಗಿದೆ. ಅಣುಬಾಂಬು ಹೈಡ್ರೋಜನ್ ಬಾಂಬುಗಳಿಂದ ಸಾವು, ಹಾನಿ ಹಾಗೂ ವಿನಾಶಗಳು ಅಪಾರವಾಗುತ್ತವೆ. ಅಣುಬಾಂಬುಗಳು ದಾಳಿಕೋರನಿಗೂ ಅಪಾಯವೊಡ್ಡುತ್ತವೆ.

ಈ ಅಪಾಯವನ್ನು ಮನಗಂಡು ಪ್ರಪಂಚದ ಎಲ್ಲ ಶಾಂತಿಪ್ರಿಯರೂ ಕಾರಖಾನೆಗಳಲ್ಲಿ, ಹೊಲಗಳಲ್ಲಿ, ಶಾಲೆ ಕಾಲೇಜುಗಳಲ್ಲಿ, ನಗರಗಳಲ್ಲಿ ಪ್ರತಿಭಟನಾ ರ್‍ಯಾಲಿಗಳನ್ನೂ ಸಭೆಗಳನ್ನೂ ನಡೆಸಿದ್ದಾರೆ. ಎಲ್ಲ ಬಗೆಯ ಮಾರಕಾಸ್ತ್ರಗಳಿಗೂ ತಡೆಹಾಕಿ ಜಗತ್ತಿನ ಶಾಂತಿಸುಖಗಳ ಭರವಸೆಗೆ ಒತ್ತಾಯಿಸುತ್ತಿದ್ದಾರೆ. ವಿಶ್ವಸಭೆಯ ಒಳಗೂ ಹೊರಗೂ ಯುದ್ಧಗಳಿಲ್ಲದ ಪ್ರಪಂಚವನ್ನು ನಿರ್ಮಿಸಲು ಹೋರಾಡುತ್ತಿದ್ದಾರೆ. ಶಾಂತಿ ನೆಮ್ಮದಿಗಳಿಂದ ಬದುಕುವ ಎಲ್ಲ ರಾಷ್ಟ್ರಗಳ ಹಕ್ಕುಗಳನ್ನು ಪ್ರಸ್ತಾಪಿಸಿ ಚಳುವಳಿ ನಡೆಸಿದ್ದಾರೆ. ಈಗ ಕೆಲ ದಿನಗಳ ಹಿಂದೆ ಜಪಾನಿನ ಒಕಿನೋವಾ, ಟೋಕಿಯೋಗಳಲ್ಲಿ 'ಮಾನವ ಸರಪಳಿ'ಯ ಪ್ರತಿಭಟನೆ ನಡೆಸಿ ಇನ್ನೆಂದಿಗೂ ಮತ್ತೆ ಹಿರೋಷಿಮಾ, ನಾಗಸಾಕಿ ದುರಂತಗಳು ಮರುಕಳಿಸಕೂಡದೆಂದು ಎಚ್ಚರಿಸಿದ್ದರೆ, 'ಸ್ವಚ್ಛ ಬಾಂಬು'ಗಳನ್ನು ತಯಾರಿಸಿ 'ಶಾಂತಿ'ಯ ಮಾತಾಡುವ ಈ 'ಅಮಾನುಷ' ಮಾನತರ ಪಿತೂರಿಗಳನ್ನು ಹೊರಗೆಡಹಿದ್ದಾರೆ. ನಾಝಿ ಯುದ್ಧಕೋರರು ವಸಾಹತುವಾದಿಗಳು ಕುಲವಾದಿಗಳು, ನಾಶಪಡಿಸಿದ ಸಾವಿರಾರು ನಗರಗಳು, ಸುಟ್ಟುಹಾಕಿದ ಲಕ್ಷಾಂತರ ಗ್ರಾಮಗಳು ಹಾಗೂ ಸಂಹರಿಸಿದ ಮಿಲಿಯಾಂತರ ಜನರ ದುರಂತವನ್ನು ಮತ್ತೆ ನೆನಪು ಮಾಡಿಕೊಟ್ಟು ಇನ್ನೆಂದಿಗೂ ಇದು ಹೀಗಾಗಲು ಅವಕಾಶ ಮಾಡುವುದಿಲ್ಲವೆಂದು ಎಚ್ಚರಿಸಿದ್ದಾರೆ.

ಈ ಶಾಂತಿ ಪ್ರಗತಿಗಳ ಧ್ಯೇಯವೇ ಬದುಕಿನ ದಾರಿಯೆಂದು ತಿಳಿಸುತ್ತಲೆ ಜರ್ಮನ್ ಗಣರಾಜ್ಯದ ವಿದೇಶ ಮಂತ್ರಿ ಓಸ್ಕರ್ ಫಿಶರ್ ಒಮ್ಮೆ ಹೇಳಿದರು. ಸಮಾಜವಾದಿ ಹೋರಾಟವನ್ನು ಒಂದು ತಾತ್ಪೂರ್ತಿಕ ವ್ಯವಸಾಯವೆಂದು ಭಾವಿಸಿಲ್ಲ, ಶಾಂತಿಯನ್ನು ಪಾಲಿಸುವುದು ನಮ್ಮ ಜೀವನದ ಧ್ಯೇಯವಾಗಿಯೆ ಇದೆ ಮತ್ತು ಎಂದೆಂದಿಗೂ ಇರುವುದು. ಆದ್ದರಿಂದ ಈ ತುರ್ತಿನ ಮಹತ್ವದ ಶಾಂತಿಯ ಹೋರಾಟದಲ್ಲಿ ಇದಕ್ಕಾಗಿ ಶ್ರಮಿಸುವ ಎಲ್ಲ ಶಕ್ತಿಗಳೊಂದಿಗೂ ನಾವು ಶ್ರಮಿಸುತ್ತೇವೆ.

ಮಾನವ ಜನಾಂಗದ ಅನುಭವ ಕೂಡ ಶಾಂತಿಯನ್ನೇ ಬಲಪಡಿಸುತ್ತದೆ. ಜನಾಂಗಗಳ ಧ್ವನಿಯೂ ಮಿಲಿಯಾಂತರ ಜನರ ಹೋರಾಟವೂ ಯುದ್ಧದ ಅಪಾಯವನ್ನು ತೊಡೆದುಹಾಕಿಶಾಂತಿಯ ಕನಸನ್ನು ನನಸಾಗಿಸುತ್ತದೆ. ಹೊಣೆಗಾರಿಕೆಯಿಂದ ವರ್ತಿಸುವುದೆಂದರೆ, ವಾಸ್ತವವನ್ನು ಗಮನಿಸಬೇಕೆಂದರ್ಥ. ವಾಸ್ತವ ತೀರ್ಮಾನ ಕೈಗೊಳ್ಳುವುದೆಂಬ ಅರಿವು ಮೂಡಿಸುವುದಾಗಿದೆ. ಶಾಂತಿಯನ್ನು ಶಸ್ತ್ರಾಸ್ತ್ರಗಳ ಸಂಗ್ರಹದಿಂದ ಹೊಂದುವುದು ಅಸಾಧ್ಯ.

ಶಾಂತಿಯ ಆಸೆಯೆಂದರೆ ಬದುಕಿನ ಆಸೆ. ಆಸೆ ಮಾನವ ಜನಾಂಗದ ಪ್ರಗತಿ ಹಾಗೂ ಸುಖಗಳ ಆಸೆ. ಆದರೆ ಇಂಥ ಆಸೆ ಪೂರ್ಣವಾಗಲು, ದಾರಿಯೆಂದರೆ ಕವಿ ರಸೂಲರರು ಹೇಳಿದಂತೆ, 'ಹಗೆತನದ ಅಪನಂಬಿಕೆಯ, ವಿದೇಷಿ ಪಿತೂರಿಗಳ, ಬೆಂಕಿಗಳನ್ನಾರಿಸಬೇಕು, ಹೊರತು ಜನರ ಶಾಂತಿಯ ಆಸೆಗಳನ್ನಲ್ಲ.'

(ಕೃಪೆ : ಪ್ರಜಾವಾಣಿ)

ಬ್ರೆಕ್ಟ್ ಕವನಗಳು

ಫರ್ ಮರಗಳು

ಬೆಳಗಿನ ಹೊತ್ತಲ್ಲಿ
ಫರ್ ಮರಗಳೆಂದರೆ ತಾಮ್ರ,
ಅರ್ಧ ಶತಮಾನದ ಹಿಂದೆ
ಎರಡು ಜಾಗತಿಕ ಯುದ್ಧಗಳಿಗಿಂತ
ಮೊದಲು
ನನ್ನ ಪುಟ್ಟ ಕಣ್ಣುಗಳಿಗೆ
ಅವು ಕಂಡದ್ದು ಹಾಗೆ.

ಈ ಬೇಸಿಗೆಯ ಆಕಾಶ

ಸರೋವರದ ಮೇಲೆ, ತೀರ ಎತ್ತರದಲ್ಲಿ
ಸಿಡಿಗುಂಡಿನ ವಿಮಾನ ಹಾರುತ್ತದೆ.
ಹುಟ್ಟು ಹಾಕುತ್ತಿರುವ ದೋಣಿಗಳಲ್ಲಿ
ಮಕ್ಕಳು, ಮಹಿಳೆಯರು, ಮುದುಕ
ನೊಬ್ಬ
ಕತ್ತೆತ್ತಿ ನೋಡುತ್ತಾರೆ.
ದೂರಕ್ಕೆ ಅವರು
ಆಹಾರಕ್ಕೆಂದು ಇಷ್ಟಗಲ ಕೊಕ್ಕು ತೆರೆದ
ಪುಟ್ಟ ಮೈನಾಗಳಂತೆ ಕಾಣುತ್ತಾರೆ.

ಜನರಲ್....

ಜನರಲ್
ನಿನ್ನ ಟ್ಯಾಂಕಿನದು ಭೀಮಬಲ
ಅದು ಕಾಡ ಕೊಲ್ಲುವುದು ನೂರಾರು
ಜನರ ಜಜ್ಜುವುದು
ಆದರೆ ಅದರಲ್ಲೊಂದು ಕೆಡುಕಿದೆ:
ಅದಕ್ಕೊಬ್ಬ ಬೇಕು ಡ್ರೈವರ್

ಜನರಲ್
ನಿನ್ನ ಬಾಂಬರ್ ಭಾರಿ ಶಕ್ತಿಯುದು
ಚಂಡಮಾರುತಕ್ಕಿಂತಲು ಮಿಗಿಲುವೇಗದಲ್ಲಿ
ಆನೆಗಿಂತಲು ಮಿಗಿಲು ಭಾರ ಹೊರುವಲ್ಲಿ
ಆದರೆ ಅದರಲ್ಲೊಂದು ಕೆಡುಕಿದೆ;
ಅದಕೊಬ್ಬ ಬೇಕು ಮೆಕ್ಯಾನಿಕ್.

ಜನರಲ್
ಮನುಷ್ಯ ಬಹಳ ಉಪಯುಕ್ತ ಪ್ರಾಣಿ
ಅವನು ಹಾರಾಡಬಲ್ಲ ಕೊಲ್ಲಬಲ್ಲ
ಆದರೆ ಅವನಲ್ಲೊಂದು ಕೆಡುಕಿದೆ:
ಅವನು ಮಾಡಬಲ್ಲ ಚಿಂತನೆ.

ಸಿ. ಪಿ. ಐ. (ಎಂ.) ಸಮ್ಮೇಳನಗಳು

ಹೊಸಪೇಟೆ

ಸಿ.ಪಿ.ಐ.(ಎಂ) ಹೊಸಪೇಟೆ ನಗರ ಸಮ್ಮೇಳನ ಆಗಸ್ಟ್ 10 ರಂದು ಕಾ|| ಭೀಮಸೇನಾಚಾರ್‌ರವರ ಉದ್ಘಾಟನೆಯೊಂದಿಗೆ ಆರಂಭವಾಯಿತು. ಕಾ|| ಪಿ. ಆರ್. ವೆಂಕಟೇಶ್ ತಾಲ್ಲೂಕಿನ ಆರ್ಥಿಕ ರಾಜಕೀಯ ಪರಿಸ್ಥಿತಿ ಕುರಿತು ಮಾತನಾಡಿದರು. ಹೊಸಪೇಟೆ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ, ನೂರು ಹಾಸಿಗೆ ಆಸ್ಪತ್ರೆ, ಪದವಿ ಕಾಲೇಜ್ ಹಾಗೂ ಹಾಸ್ಟೆಲ್ ಸೌಕರ್ಯಗಳ ಕುರಿತು ಕಾ|| ಮಂಜುನಾಥ್ ನಿರ್ಣಯ ಮಂಡಿಸಿದರು.

ಕಾ|| ಸುಂದರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕಾ|| ಜಂಬಯ್ಯನಾಯ್ಕ ಸ್ವಾಗತಿಸಿ ಕಾ|| ವೀರಸಂಗಯ್ಯನವರುಗಳು ಮಾತನಾಡಿದರು. ಕೊನೆಗೆ ಕಾ|| ಭರ್ಮನಗೌಡ ವಂದಿಸಿದರು.

ಮಲಪನಗುಡಿ ಶಾಖೆ

ಹೊಸಪೇಟೆಯ ಅನಂತಶಯನ ಗುಡಿ ಸಿ.ಪಿ.ಐ.(ಎಂ) ಪಕ್ಷದ ಶಾಖಾ ಸಮ್ಮೇಳನ ಆಗಸ್ಟ್ 14 ರಂದು ನಡೆಯಿತು. ಕಾ|| ಭೀಮಸೇನಾಚಾರ್ ಸಮ್ಮೇನವನ್ನು ಉದ್ಘಾಟಿಸಿದರು. ಮಲಪನ ಗುಡಿ ಮಂಡಲ್‌ಗೆ ಪ್ರೌಢಶಾಲೆ ಹಾಗೂ ಹಾಸ್ಟೆಲ್ ಮಂಜೂರಾಗಿದ್ದು ಅವುಗಳು ಕೂಡಲೇ ಆರಂಭಗೊಳ್ಳಬೇಕು, ವಸತಿಹೀನ ಬಡವರಿಗೆ ನಿವೇಶನ ಒದಗಿಸಬೇಕು ನಿವೇಶನದಾರರಿಗೆ ಹಕ್ಕುಪತ್ರ ನೀಡಬೇಕು, ರಸ್ತೆಗಳ ದುರಸ್ತಿ ಮಾಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಸಾರ್ವಜನಿಕ ದವಾಖಾನೆ ನಿರ್ಮಿಸಬೇಕೆಂಬ ಜನತೆಯ ಸಮಸ್ಯೆಗಳ ಕುರಿತು ನಿರ್ಣಯ ಸ್ವೀಕರಿಸಲಾಯಿತು.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ|| ಭೀಮಸೇನಾಚಾರ್, ಕಾ|| ವೀರಸಂಗಯ್ಯ, ಪಾಂಡುರಂಗರವರುಗಳು ಮಾತನಾಡಿದರು. ಕಾ|| ಭರಮಪ್ಪ ಅಧ್ಯಕ್ಷತೆ ವಹಿಸಿ ಕಾ|| ಅಮೀರ್ ಸ್ವಾಗತಿಸಿ ಕಾ|| ಕಾಶೀಂ ಅಲಿ ವಂದಿಸಿದರು.

ಸೆಪ್ಟೆಂಬರ್ 26, 27 ರಂದು ಬಳ್ಳಾರಿ ಜಿಲ್ಲಾ ಸಮ್ಮೇಳನ ಹೊಸಪೇಟೆಯಲ್ಲಿ ನಡೆಸಲು ನಿರ್ಧರಿಸಲಾಗಿದ್ದು ಸಮ್ಮೇಳನದ ಯಶಸ್ವಿಗೆ ಸಿದ್ಧತಾ ಸಮಿತಿಯೊಂದನ್ನು ರಚಿಸಲಾಗಿದೆ. ಅಧ್ಯಕ್ಷರಾಗಿ ಕಾ|| ಭೀಮಸೇನಾ ಚಾರ್, ಕಾರ್ಯದರ್ಶಿಯಾಗಿ ಕಾ|| ಎಲ್. ಮಂಜುನಾಥ್, ಖಜಾಂಚಿಯಾಗಿ ಕಾ|| ಎಂ.ಜೆ. ನಾಯಕ್ ಸೇರಿದಂತೆ 12 ಜನರ ಸಮಿತಿ ರಚಿಸಲಾಗಿದೆ.

ವಿರಾಜಪೇಟೆ

ನಮ್ಮ ಪಕ್ಷದ ಘನತೆ ಗೌರವ ಇಂದು ದೇಶದಾದ್ಯಂತ ಹೆಚ್ಚುತ್ತಿದೆ. ದೇಶದಲ್ಲಿ ಸರ್ವಾಧಿಕಾರಿ ಕಾಂಗ್ರೆಸ್‌ಗೆ ಎದುರಾಗಿ ಎಡ–ಪ್ರಜಾಪ್ರಭುತ್ವ ಚಳುವಳಿಯನ್ನು ಇನ್ನಷ್ಟು ಬಲಿಷ್ಟಗೊಳಿಸಲು ಶ್ರಮಿಸುವಂತೆ ಪಕ್ಷದ ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ|| ಸಿ. ನಂಜುಂಡಪ್ಪನವರು ಕರೆನೀಡಿದರು. ಅವರು ಆಗಸ್ಟ್ 19 ರಂದು ಕೊಡಗಿನ ವಿರಾಜಪೇಟೆ ಶಾಖೆ ಸಮ್ಮೇಳನನನ್ನು ಉದ್ಘಾಟಿಸಿ ಮಾತನಾಡಿದರು.

ಹರಪನಹಳ್ಳಿ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಪಕ್ಷದ ಸಮ್ಮೇಳನ ಆಗಸ್ಟ್ 9 ರಂದು ನಡೆಯಿತು. ಕಾ|| ಎಸ್. ಎಸ್. ಹಿರೇಮಠರವರು ಸಮ್ಮೇಳನ ಉದ್ಘಾಟಿಸಿದರು. ರಾಷ್ಟ್ರೀಯ–ಅಂತರರಾಷ್ಟ್ರೀಯವಾಗಿ ಪಕ್ಷದ ಗೌರವವು ಉನ್ನತ ಮಟ್ಟದಲ್ಲಿ ಬೆಳೆದಿದ್ದು ಪಕ್ಷವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಿಷ್ಠವಾಗಿ ಕಟ್ಟಿ ಬೆಳೆಸಬೇಕೆಂದು ಕರೆ ನೀಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾ|| ಮಂಜಪ್ಪ ವಹಿಸಿದ್ದರು. ಮೂರು ವರ್ಷದ ವರದಿಯನ್ನು ಕಾ|| ಪರಶುರಾಮರವರು ಮಂಡಿಸಿದರು. ಕಾ|| ಬಾಲಪ್ಪ ಸಮಾರೋಪ ಭಾಷಣ ಮಾಡಿದರು. ಎಸ್. ಎಸ್. ಯೋಗಿತಾಬಾಯಿ ವಂದಿಸಿದರು. ಬಳ್ಳಾರಿ ಜಿಲ್ಲಾ ಸಮ್ಮೇಳನಕ್ಕೆ ತಾಲ್ಲೂಕಿನಿಂದ 11 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಅಭಿವೃದ್ಧಿ ಯೋಜನೆಗಳ ಜಾರಿಗೆ ಉಡುಪಿ ಸಮ್ಮೇಳನದ ಒತ್ತಾಯ

ಪಕ್ಷವನ್ನು ಮತ್ತು ಸಾಮೂಹಿಕ ಸಂಘಟನೆಗಳನ್ನು ಬಲಿಷ್ಠವಾಗಿ ಕಟ್ಟುವ ಮೂಲಕ ಗ್ರಾಮಾಂತರ ಜನತೆಯ ಮಧ್ಯೆ ವಿಶಾಲವಾದ ಐಕ್ಯವನ್ನು ಬೆಳೆಸುವ ಮೂಲಕ ದೇಶದಲ್ಲಿ ಜಾತೀಯ, ಮತೀಯ, ಛಿದ್ರಕಾರಿ ಶಕ್ತಿಗಳ ಪಿತೂರಿಗಳನ್ನು ಸೋಲಿಸಲು ತನ್ಮೂಲಕ ದೇಶದ ಐಕ್ಯತೆ–ಸಮಗ್ರತೆ ಎತ್ತಿ ಹಿಡಿಯಬೇಕೆಂದು ಕಾ|| ಕೆ. ಆರ್. ಶ್ರೀಯಾನ್, ಅಬ್ರಹಾಂ ಕರ್ಕಡ ಮತ್ತು ಕೆ. ಶಂಕರ್‌ರವರು ತಿಳಿಸಿದರು. ಅವರುಗಳು ಆಗಸ್ಟ್ 24 ರಂದು ಉಡುಪಿಯ ಪ್ರವಾಸಿಮಂದಿರದಲ್ಲಿ ನಡೆದ ಉಡುಪಿ ತಾಲ್ಲೂಕು ಪಕ್ಷದ ಸಮ್ಮೇಳನದಲ್ಲಿ ಮಾತನಾಡುತ್ತಿದ್ದರು.

ಕಾ|| ಡೇವಿಡ್–ಎ. ಕರ್ಕಡರವರು ಕಳೆದ 3 ವರ್ಷದ ವರದಿ ಮಂಡಿಸಿದರು. ಮಂಗಳೂರು ತೈಲಾಗಾರ, ಕರಾವಳಿ ಕೊಂಕಣ ರೈಲ್ವೆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು, ವಿಜಯನಗರ ಉಕ್ಕಿನ ಕೈಗಾರಿಕೆ ಸ್ಥಾಪಿಸಬೇಕು. ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಿ ಕನಿಷ್ಠವೇತನ ನೀಡಬೇಕು, ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಕಬ್ಬು ಬೆಳೆಗಾರರಿಗೆ ಬಾಕಿ ಹಣ ನೀಡಬೇಕು, ನೇಯ್ಗೆ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಬೇಡಿಕೆಗಳ ಕುರಿತು ಸಮ್ಮೇಳನ ನಿರ್ಣಯ ಸ್ವೀಕರಿಸಿತು.

ಸೆಪ್ಟೆಂಬರ್ 1 ರಿಂದ 15 ರವರೆವಿಗೆ ನಡೆಯುವ ರೈತ ಚಳುವಳಿಗೆ ಬೆಂಬಲ ನೀಡುವ ಠರಾವು ಅಂಗೀಕರಿಸಲಾಯಿತು. ಅಕ್ಟೋಬರ್ 17, 18, 19 ರಂದು ನಡೆಯುವ ದ.ಕ. ಜಿಲ್ಲಾ ಸಮ್ಮೇಳನಕ್ಕೆ 13 ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾ|| ವಿಶ್ವನಾಥ ವಹಿಸಿದ್ದರು. ಕಾ|| ಸಂಜೀವ ನಾಯ್ಕ ಪ್ರಾರಂಭದಲ್ಲಿ ಸ್ವಾಗತಿಸಿ ಕಾ|| ಡೇವಿಡ್ ಎ. ಕರ್ಕಡ ಧನ್ಯವಾದ ಅರ್ಪಿಸಿದರು.

ಪಡಿತರ ಕಡಿತ ವಿರುದ್ಧ ಧರಣಿ

ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲೋಕು ಸಮಿತಿ ಆಶ್ರಯದಲ್ಲಿ ಜುಲೈ 6ರಿಂದ8ರವರೆಗೆ ತಾಲೋಕು ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿ ಮಂಗಳೂರಿನ ಸಹಾಯಕ ಕಮೀಶನರ್ ಶ್ರೀ ಸಿ. ಸೋಮಶೇಖರ್‌ರವರ ಮುಖಾಂತರ ರಾಜ್ಯದ ಮುಖ್ಯಮಂತ್ರಿಯವರಿಗೆ ಮನವಿ ಅರ್ಪಿಸಲಾಗಿದೆ.

ಕೇಂದ್ರದ ರಾಜೀವ್ ಗಾಂಧಿ ಸರ್ಕಾರ ಕಾಂಗ್ರೆಯೇತರ ಸರ್ಕಾರಗಳಿರುವ ರಾಜ್ಯಗಳಿಗೆ ಆಹಾರ ಧಾನ್ಯ ವಿತರಣೆಯಲ್ಲಿ ಕಡಿತವನ್ನುಂಟುಮಾಡುತ್ತಿರುವ ನೀತಿಯನ್ನು ಮನವಿಯಲ್ಲಿ ಖಂಡಿಸಲಾಗಿದೆ. ಈ ಅನ್ಯಾಯದ ವಿರುದ್ಧ ರಾಜ್ಯದ ಆಳುವ ಜನತಾ ಪಕ್ಷ ಜನತೆಯನ್ನು ಸಂಘಟಿಸಿ ರಚನಾತ್ಮಕ ಚಳುವಳಿಯೊಂದನ್ನು ನಡೆಸಬೇಕೆಂದು ಕರೆನೀಡಿದೆ. ಅದೇ ರೀತಿಯಲ್ಲಿ ರಾಜ್ಯ ಸರ್ಕಾರ ತನ್ನ ಹೊಣೆಯನ್ನು ನಿರ್ವಹಿಸಲು ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿಯನ್ನು ಖರೀದಿಸಿಯಾದರೂ ಮೊದಲಿನಷ್ಟೆ ಪ್ರಮಾಣದಲ್ಲಿ ಅಕ್ಕಿ ಒದಗಿಸಬೇಕೆಂದು ಒತ್ತಾಯಿಸಿದೆ.

ಧರಣಿಯ ನೇತೃತ್ವವನ್ನು ಕಾ|| ಬಿ. ವಾಸುಗಟ್ಟಿ, ಬಿ. ನಾರಾಯಣ, ಬಿ. ಹೂವಯ್ಯಬಂಗೇರ, ಬಿ. ಸಂಜೀವ ಬಂಗೇರ, ಚಂದ್ರಪ್ಪನಾಯ್ಕ, ಬಿ. ಶೀನ ಬಂಗೇರ, ಹಾಗೂ ಶ್ರೀಮತಿ ಗಿರಿಜ ಮತ್ತು ವಿಮಲ ರವರು ವಹಿಸಿದ್ದರು.

ರೇಷನ್ ಕಡಿತ ವಿರೋಧಿಸಿ ಧರಣಿ

ಪಡಿತರ ಅಕ್ಕಿ ಕಡಿತಗೊಳಿಸಿರುವುದನ್ನು ವಿರೋಧಿಸಿ ಉಡುಪಿ ತಾಲ್ಲೂಕು ಕಛೇರಿ ಮುಂದೆ ಜುಲೈ 6, 7, 8 ರಂದು 3 ದಿನಗಳು ನಿರಂತರವಾಗಿ ಸತ್ಯಾಗ್ರಹ ನಡೆಸಲಾಗಿದೆ. ಜುಲೈ 6 ರಂದು ಮಲ್ಪೆ ಬೀಡಿ ಕೆಲಸಗಾರರ ಸಂಘ ಹಾಗೂ ಪಕ್ಷದ ಶಾಖೆಗಳು ಕಾ|| ದೊಗು ಸುವರ್ಣ, ಕೆ. ಬಾಬು, ಎಂ, ಶೇಷಪ್ಪ, ರಾಮಶೆಟ್ಟಿಗಾರ, ರಮೇಶ ರವರು ನೇತೃತ್ವ ವಹಿಸಿದ್ದರು. ಜುಲೈ 7 ರಂದು ಉಡುಪಿ ಬೀಡಿ ಮತ್ತು ಟೊಬೆಕೊ ಲೇಬರ್ ಯೂನಿಯನ್ ಮತ್ತು ಮಠದಬೆಟ್ಟು, ಸಿಟ್ಟೂರು, ಹನುಮಂತನಗರ, ಕುಂಚಿಬೆಟ್ಟುವಿನ ಪಕ್ಷದ ಶಾಖೆಗಳು ಕಾ|| ಎನ್.ಸಾಧುಅಮನ್, ಗುರುವಪೂಜಾರಿ, ಕೆ. ರಾಘವ ಪೂಜಾರಿ, ಗುರುರಾಜ ಶೆಟ್ಟಿಗಾರ ಹಾಗೂ ಶ್ರೀಮತಿ ಬೇಬಿಗಿರಿಜ ರವರು ನೇತೃತ್ವ ವಹಿಸಿದ್ದರು. ಜುಲೈ 8 ರಂದು ಉಡುಪಿ ಪಕ್ಷದ ಕಛೇರಿಯಿಂದ 300 ಮಂದಿ ಮೆರವಣಿಗೆ ಹೊರಟು ಸತ್ಯಾಗ್ರಹ ನಡೆಸಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಯೊಂದನ್ನು ಅರ್ಪಿಸಲಾಯಿತು.

ತ್ರಿಪುರಾ ಸರ್ಕಾರದ ವಿರುದ್ಧ 'ಗಣಶಕ್ತಿ'ಗೆ ಗೆಲುವು

ತ್ರಿಪುರಾದಲ್ಲಿ ಕಾಂಗ್ರೆಸ(ಐ) ನೇತೃತ್ವದ ಸರ್ಕಾರ ಬಂದ ಕೂಡಲೇ 'ಗಣಶಕ್ತಿ'ಯನ್ನು ರಾಜ್ಯದ ಸರ್ಕಾರಿ. ಅರೆಸರ್ಕಾರಿ ಹಾಗೂ ವಾಚನಾಲಯಗಳಿಗೆ ಒದಗಿಸುವುದನ್ನು ನಿಲ್ಲಿಸಬೇಕೆಂದು ಆಜ್ಞೆ ಹೊರಡಿಸಿತು. 'ಗಣಶಕ್ತಿ'ಗೆ ಜಾಹಿರಾತುಗಳನ್ನು ನಿಲ್ಲಿಸಲಾಯಿತು. ಇದರ ವಿರುದ್ಧ ಪತ್ರಿಕೆಯ ಸಂಪಾದಕ ಕಾಮ್ರೇಡ್ ಅನಿಲ್ ಬಿಸ್ವಾಸ್ ಕಲ್ಕತ್ತಾ ಹೈಕೋರ್ಟಿನಲ್ಲಿ ದಾವೆ ಸಲ್ಲಿಸಿದ್ದರು.

ಹೈಕೋರ್ಟು ನೀಡಿದ ಮಹತ್ವದ ತೀರ್ಪು ತ್ರಿಪುರಾ ಸರ್ಕಾರದ ಆಜ್ಞೆಯನ್ನು ರದ್ದುಪಡಿಸಿ, ಪ್ರಜಾಪ್ರಭುತ್ವ ದೇಶವೊಂದರಲ್ಲಿ ವಿರೋಧ ಪಕ್ಷಗಳ ದೃಷ್ಟಿಕೋನಗಳಿಗೂ ಮನ್ನಣೆ ಇರಬೇಕು, ಆದ್ದರಿಂದ ಸರ್ಕಾರದ ಆಜ್ಞೆ ಪ್ರಜಾಪ್ರಭುತ್ವ ನೀತಿಗಳಿಗೆ ವಿರುದ್ಧವಾಗಿದೆ ಎಂದು ಹೇಳಿತು.

ಸಾರ್ವತ್ರಿಕ ಮುಷ್ಕರ ಯಶಸ್ವಿಗೆ ಅಭಿನಂದನೆ

ಪಡಿತರ ಅಕ್ಕಿ ವಿತರಣೆಯಲ್ಲಿ ಕಡಿತ ಮತ್ತು ಬೆಲೆ ಏರಿಕೆಯನ್ನು ಪ್ರತಿಭಟಿಸಿ ಸಿ.ಪಿ.ಐ.(ಎಂ), ಸಿ.ಪಿ.ಐ. ಪಕ್ಷಗಳು ಜಂಟಿಯಾಗಿ ಆಗಸ್ಟ್ 23 ರಂದು ದ.ಕ. ಜಿಲ್ಲೆಯಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ನೀಡಿದ ಕರೆಯಂತೆ ಸಂಪೂರ್ಣ ಯಶಸ್ವಿಗೊಳಿಸಿದ ಕಾರ್ಯಕರ್ತರನ್ನು ಹಾಗೂ ಜನತೆಯನ್ನು ಸಿ.ಪಿ.ಐ.(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ|| ಕೆ.ಆರ್. ಶ್ರೀಯಾನ್‌ರವರು ಅಭಿನಂದಿಸಿದ್ದಾರೆ.

ರಾಜ್ಯಕ್ಕೆ ನೀಡುತ್ತಿದ್ದ ಅಕ್ಕಿ ಕೋಟಾದಲ್ಲಿ ಕಡಿತವನ್ನುಂಟು ಮಾಡಿದ ಕೇಂದ್ರದ ರಾಜೀವ್ ಗಾಂಧಿ ಸರ್ಕಾರದ ಮಲತಾಯಿ ಧೋರಣೆ ಪ್ರತಿಭಟಿಸಿ ನಡೆದ ಈ ಸಾರ್ವತ್ರಿಕ ಮುಷ್ಕರದಲ್ಲಿ ಜಿಲ್ಲೆಯ ಖಾಸಗಿ ಬಸ್‌ಗಳು, ಹಂಚು, ಮುದ್ರಣ, ಗೇರುಬೀಜ, ಬೀಡಿ, ಅಡಿಕೆ, ನೇಯ್ಗೆ, ಇಂಜಿನಿಯರಿಂಗ್ ಮುಂತಾದ ಕೈಗಾರಿಕೆಗಳ ಕಾರ್ಮಿಕರು ಭಾಗವಹಿಸಿ ಅಭೂತಪೂರ್ವ ಯಶಸ್ವಿಗೊಳಿಸಿದ್ದಾರೆ.

ಜನಸಾಮಾನ್ಯರ ಜೀವನಾವಶ್ಯಕ ಬೇಡಿಕೆಯನ್ನು ಈಡೇರಿಸಲು ಕೇಂದ್ರ–ರಾಜ್ಯ ಸರ್ಕಾರಗಳು ತುರ್ತು ಕ್ರಮವಹಿಸಬೇಕೆಂದು ಒತ್ತಾಯಿಸಿದ್ದಾರೆ. ಸರ್ಕಾರಗಳು ಇದೇ ರೀತಿಯ ಅಸಡ್ಡೆ ಮನೋಭಾವ ಮುಂದುವರಿಸಿದೆ ಆದರೆ ದ.ಕ. ಜಿಲ್ಲೆಯ ಕಾರ್ಮಿಕವರ್ಗ ಹಾಗೂ ಜನತೆ ಇನ್ನಷ್ಟು ತೀವ್ರವಾದ ಹೋರಾಟಗಳಿಗೆ ಇಳಿಯ ಬೇಕಾಗುತ್ತದೆಂದು ಕಾ|| ಕೆ. ಆರ್. ಶ್ರೀಯಾನ್ ರವರುಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸಾಮೂಹಿಕ ಸಂಘಟನೆಗಳು ಜಿಲ್ಲೆಯ ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಕಾಲ್ನಡಿಗೆ ಸೈಕಲ್ ಜಾಥ ಮುಂತಾದವುಗಳ ಮೂಲಕ ನಡೆಸಿದ ಪ್ರಚಾರ ಸಭೆ, ಪ್ರದರ್ಶನದ ಮೂಲಕ ಈ ಚಳುವಳಿ ಕುರಿತು ತಿಳಿಸಿ, ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಶ್ರಮಿಸಿದ ಕಾರ್ಯಕರ್ತರನ್ನು ವಿಶೇಷವಾಗಿ ಅವರು ಅಭಿನಂದಿಸಿದ್ದಾರೆ.

ಬಂಟ್ವಾಳದಲ್ಲಿ ಮುಷ್ಕರ ಯಶಸ್ವಿ

ತಾಲೋಕಿನ ಎಲ್ಲಾ ಬೀಡಿ ಡಿಪೋಗಳು ಸಂಪೂರ್ಣ ಮುಚ್ಚಿದ್ದವು. ರಿಕ್ಷಾ, ಮೆಟಾಡಾರ್, ಟೆಂಪೋಗಳು ಸ್ಥಗಿತಗೊಂಡಿದ್ದವು. ಬಂಟ್ವಾಳಕ್ಕೆ ಬರುವ ಹಾಗೂ ಹೋಗುವ ಎಲ್ಲಾ ಖಾಸಗಿ ಬಸ್ಸುಗಳ ನೌಕರರು ಮುಷ್ಕರದಲ್ಲಿ ಪಾಲ್ಗೊಂಡು ಬಸ್ ಸಂಚಾರ ಸಂಪೂರ್ಣ ನಿಂತಿತ್ತು. ಬಂಟ್ವಾಳದ ಜನಜೀವನ ಮುಷ್ಕರದಿಂದ ಅಸ್ತವ್ಯಸ್ತವಾಗಿತ್ತು. ಮುಷ್ಕರ ಯಶಸ್ವಿಗೊಳಿಸಿದ ಬಂಟ್ವಾಳ ಜನತೆಗೆ ಪಕ್ಷದ ಕಾರ್ಯದರ್ಶಿ ಕಾ|| ಬಿ. ವಾಸುಗಟ್ಟಿ ಯವರು ಅಭಿನಂದಿಸಿದ್ದಾರೆ.

ಆಂಧ್ರ: ನಿರುದ್ಯೋಗದ ವಿರುದ್ಧ ಬೃಹತ್ ಪ್ರದರ್ಶನ

ಆಗಸ್ಟ್ 23 ರಂದು ಹೈದರಾಬಾದಿನಲ್ಲಿ ನಿರುದ್ಯೋಗದ ವಿರುದ್ಧ ನಡೆದ ಪ್ರದರ್ಶನವನ್ನು ಸ್ಥಳೀಯ ಪತ್ರಿಕೆಗಳು ಮುಕ್ತಕಂಠದಿಂದ ಪ್ರಶಂಸಿಸಿವೆ. ಈ ಅಭೂತಪೂರ್ವ ಪ್ರದರ್ಶನವನ್ನು ಸಿ.ಐ.ಟಿ.ಯು, ಡಿ. ವೈ. ಎಫ್.ಐ. ಮತ್ತು ಎಸ್.ಎಫ್.ಐ. ಸಂಯುಕ್ತವಾಗಿ ವ್ಯವಸ್ಥೆಗೊಳಿಸಿದ್ದವು. ಆಗಸ್ಟ್ 22 ರಿಂದಲೇ ಹೈದರಾಬಾದ್ ನಗರದತ್ತ ಯುವ ಜನರ, ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ಪ್ರವಾಹ ಹರಿದು ಬರತೊಡಗಿತು. ರಾಜ್ಯದ ಪ್ರತಿಯೊಂದು ಜಿಲ್ಲೆಯಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಬಾಲಕಿಯರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಭೆ ನಡೆಯುವ ಸ್ಥಳವಾದ ಇಂದಿರಾ ಪಾರ್ಕನತ್ತ ಬ್ಯಾನರು ಬಾವುಟಗಳನ್ನು ಹಿಡಿದು ಪ್ರದರ್ಶನಕಾರರ ತಂಡಗಳು ಇಡೀ ದಿನವೆಲ್ಲಾ ಸಾಗುತ್ತಲೆ ಇದ್ದವು. ರಾಜ್ಯದ ಎಲ್ಲಾ ಭಾಗಗಳಿಂದಲೂ ಎಲ್ಲಾ ರೀತಿಯ ವಾಹನಗಳಲ್ಲಿ ವಿದ್ಯಾರ್ಥಿ ಯುವಜನರು ರಾಜಧಾನಿಯತ್ತ ಧಾವಿಸುತ್ತಿದ್ದರು.

ಹೈದರಾಬಾದ್‌ನ ಕಲಾವಿದರು ಸರ್ಕಾರದ ದಿವಾಳಿಕೋರ ನೀತಿಯನ್ನು ಬಿಂಬಿಸುವ ಬೃಹತ್ ಗಾತ್ರದ ವ್ಯಂಗ್ಯಚಿತ್ರಗಳನ್ನು ತಯಾರಿಸಿದ್ದರು. ಪ್ರಜಾ ನಾಟ್ಯ ಮಂಡಳಿಯ ಕಲಾವಿದರು ಪ್ರದರ್ಶನದ ಸ್ಥಳದಲ್ಲಿ ಪ್ರಹಸನ ನಾಟಕಗಳನ್ನು ಏರ್ಪಡಿಸಿದ್ದರು. ಈ ಕಲಾ ಪ್ರದರ್ಶನಕ್ಕೆ ಪ್ರೇಕ್ಷಕರು ಅಪಾರ ಪ್ರೋತ್ಸಾಹ ತೋರಿದರು.

ಮೆರವಣಿಗೆಯ ಮುಂಭಾಗದಲ್ಲಿ ಹತ್ತು ಮಂದಿ ಯುವಕರು ಹತ್ತು ಅಕ್ಷರಗಳನ್ನು ಒಳಗೊಂಡ 'ವಿ ವಾಂಟ್ ಜಾಬ್ಸ್' ಎಂದು ಕಾಣುವ ರೀತಿಯಲ್ಲಿ ತಲಾ ಒಂದೊಂದು ಅಕ್ಷರವನ್ನು ತಮ್ಮ ಎದೆಗಳ ಮೇಲೆ ಹಾಕಿಕೊಂಡು ನಡೆಯುತ್ತಿದ್ದ ದೃಶ್ಯ ಜನರ ಮೆಚ್ಚುಗೆ ಗಳಿಸಿತು. ಅದೇ ರೀತಿಯಲ್ಲಿ 'ಇಪ್ಪತ್ತೊಂದನೇ ಶತಮಾನಕ್ಕೆ ಪಯಣ' ಎಂಬ ಬೃಹತ್ ಕಟ್‌ಔಟ್ ಅನ್ನು ಕಂಪ್ಯೂಟರ್‌ನ ಚಿತ್ರದೊಂದಿಗೆ ಎತ್ತಿನ ಬಂಡಿಯಲ್ಲಿ ಒಯ್ಯುತ್ತಿದ್ದುದು ವ್ಯಾಪಕ ಪ್ರಚಾರ ಪಡೆದುಕೊಂಡಿತು.

ಒಂದು ಬಿಂದುವನ್ನು ದಾಟಲು ಮೆರವಣಿಗೆ 80–90 ನಿಮಿಷಗಳನ್ನು ತೆಗೆದುಕೊಂಡಿತು. ನಗರದ ನಿವಾಸಿಗಳು ಐದು ಕಿಲೋಮೀಟರ್ ಹಾದಿಯುದ್ದಕ್ಕೂ ಮೆರವಣಿಗೆಯನ್ನು ವೀಕ್ಷಿಸಿದರು. ಮೆರವಣಿಗೆಯು 'ಬುದ್ಧ ಪೂರ್ಣಿಮಾ' ದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಸಿ.ಐ.ಟಿ.ಯು ನ ರಾಜ್ಯ ಅಧ್ಯಕ್ಷ ಕಾ|| ಪಾರ್ಸ ಸತ್ಯನಾರಾಯಣ, ಡಿ.ವೈ.ಎಫ್.ಐ ರಾಜ್ಯ ಅಧ್ಯಕ್ಷ ಕಾ|| ಸುಬ್ಬರಾವ್ ಮತ್ತು ಎಸ್.ಎಫ್.ಐ. ನ ಸಹ ಕಾರ್ಯದರ್ಶಿ ಕಾ|| ವೆಂಕಟೇಶ್ವರ ರಾವ್ ಸಭೆಯ ಕಲಾಪಗಳನ್ನು ನಡೆಸಿಕೊಟ್ಟರು. ಕಾ|| ಬಿ.ಟಿ. ರಣದಿವೆ ಮತ್ತು ಕಾ|| ಎಂ.ಎ. ಬೇಬಿ ಮುಖ್ಯ ಭಾಷಣಕಾರರಾಗಿದ್ದರು.

ಕಾ|| ಬಿ. ಟಿ. ರಣದಿವೆಯವರು ಮಾತನಾಡುತ್ತಾ, ನಮ್ಮ ದೇಶದ ಜನಜೀವನದಿಂದ ನಿರುದ್ಯೋಗವೆಂಬ ಶಾಪವನ್ನು ಪೂರ್ಣವಾಗಿ ತೊಡೆದು ಹಾಕುವವರೆಗೂ ನಿರುದ್ಯೋಗದ ವಿರುದ್ಧ ಸತತವಾದ ಮತ್ತು ಶಕ್ತಿಶಾಲಿಯಾದ ಹೋರಾಟ ಮುಂದುವರೆಸಬೇಕೆಂದು ಕರೆ ನೀಡಿದರು.

ರಾಜೀವ್ ಗಾಂಧಿಯವರ ಹೊಸ ಭೂ ಬಳಕೆ ನೀತಿ

ಭಾರೀ ಬಂಡವಾಳಶಾಹಿಗಳಿಗೆ ಸಾವಿರಾರು ಎಕರೆ ಭೂಮಿ ದಾನ

—ಕಾ. ಪಿ. ಕೆ. ಟಂಡನ್

ಕೇವಲ 40 ವರ್ಷಗಳಿಂದ ಆಹಾರ ಧಾನ್ಯಗಳನ್ನು ಹೇರಳವಾಗಿ ಬೆಳೆದು, ಹಸಿರು ಕ್ರಾಂತಿಯು ದೇಶದ ಭೂಮಿಯನ್ನೆಲ್ಲಾ ಹಸಿರು ಮಾಡುವ ತನ್ನ 'ಪ್ರಯತ್ನವನ್ನು' ಸಾಕಷ್ಟು ನಡೆಸಿತು. ಅದರ ಭಾಗವಾಗಿ ಬಂದ ರಾಜೀವ್‌ಗಾಂಧಿಯವರ ಈ 'ಹೊಸ ಭೂ ಬಳಕೆ ನೀತಿ' ಏನನ್ನು ಮಾಡಿದೆ ? ಎಂದು ನೋಡೋಣ. ದೇಶದ ಒಟ್ಟು ಭೂಮಿ 329 ಮಿ. ಹೆ. ನಲ್ಲಿ (1ಹೆ. ಗೆ ಎರಡೂವರೆ ಎಕರೆ) 175 ಮಿ. ಹೆ. ಜಮೀನು ಕೆಲಸಕ್ಕೆ ಬಾರದ ನಿರುಪಯುಕ್ತ, 'ಡಿ' ವರ್ಗದ ಜಮೀನಾಗಿದೆ. ಈ ಜಮೀನಿನಲ್ಲಿ 85 ಮಿ.ಹೆ. ಭೂಮಿಯನ್ನು ಬಡ ರೈತರು ಸಾಗುವಳಿ ಮಾಡುತ್ತಿದ್ದಾರೆ. 40 ಮಿ.ಹೆ. ಜಮೀನು ಅರಣ್ಯ ಇಲಾಖೆಯದು. ಈ 'ಅರಣ್ಯ' ಜಮೀನಿನಲ್ಲಿ 35 ಮಿ.ಹೆ. ಭೂಮಿಯಲ್ಲಿ ಯಾವುದೇ ಗಿಡಗಳಿರಲಿಲ್ಲ. ಉಳಿದ 10 ಮಿ. ಹೆ. ಭೂಮಿಯಲ್ಲಿ ಸಣ್ಣ ಪುಟ್ಟ ಕುರುಚಲು ಗಿಡಗಳಿವೆ. ಪ್ರತಿ ವರ್ಷ 1.5 ಮಿ.ಹೆ. ಕೃಷಿಯೋಗ್ಯ ಭೂಮಿ ಮಾಯವಾಗುತ್ತಿದೆ.

ಹಳೆಯ ಹಾಗೂ ಹೊಸ ಭೂಮಾಲಿಕರ ಮತ್ತು ಶ್ರೀಮಂತ ರೈತರ ಹಿತಾಸಕ್ತಿಗಳ ರಕ್ಷಣೆಗಾಗಿ ಹುಟ್ಟಿಕೊಂಡ ಹಸಿರು ಕ್ರಾಂತಿಯಾಗಲಿ, ಹೊಸ ಭೂಬಳಕೆ ನೀತಿಯಾಗಲೀ ಈ ಬಡವರಿಗೆ ಏನನ್ನೂ ಮಾಡಲಿಲ್ಲ. ಈಗ ಈ ಕಡುಬಡವರು ಮತ್ತು ಬುಡಕಟ್ಟು ಕುಟುಂಬಗಳು ಭೂಮಿಯಿಂದ ಹೊರತಳ್ಳಲ್ಪಟ್ಟಿದ್ದಾರೆ. ಈ ಭೂವಂಚಿತ ಜನರು ಕಟ್ಟಿಗೆ ಮಾರಿ ಜೀವನ ನಿರ್ವಹಿಸುತ್ತಿದ್ದಾರೆ. ಈ ನಿರುಪಯುಕ್ತ 'ಡಿ' ವರ್ಗದ ಜಮೀನನ್ನು ಮೂರು ಭಾಗಗಳಾಗಿ ಮಾಡಬಹುದು. 1) ಅರಣ್ಯ ಇಲಾಖೆ ಹಿಡಿತದಲ್ಲಿರುವ ಭೂಮಿ 2) ಗ್ರಾಮ ಪಂಚಾಯ್ತಿಗಳ ಆಡಳಿತಕ್ಕೆ ಒಳಪಟ್ಟ ಭೂಮಿ 3) ಬಡರೈತರು ಉಳಿಮೆ ಮಾಡಿದ ಭೂಮಿ.

1970 ರಲ್ಲಿ ಕಾಂಗ್ರೆಸ್ (ಐ) ಕೇಂದ್ರ ಸರ್ಕಾರವು ಭೂ ಹಾಳಾಗುವಿಕೆಯನ್ನು ಗುರುತಿಸಿ ಈ ಬಗೆಗೆ ಯೋಜನೆಗಳನ್ನು ಮಾಹಿತಿಗಳನ್ನು ನೀಡಬೇಕೆಂದು ಅರಣ್ಯ ಇಲಾಖೆಗಳಿಗೆ ಆದೇಶ ನೀಡಿತ್ತು. ಸಂಜಯ ಗಾಂಧಿ ತಮ್ಮ ಐದು ಅಂಶದ ಕಾರ್ಯಕ್ರಮದಲ್ಲಿ 'ಗಿಡ ನೆಡುವ' ಕಾರ್ಯಕ್ರಮವನ್ನು ಸೇರಿಸಿದರು. ನಂತರ ತುರ್ತುಪರಿಸ್ಥಿತಿ ಹುಟ್ಟು ಹಾಕಿದ 20 ಅಂಶಗಳ ಕಾರ್ಯಕ್ರಮದಲ್ಲಿ ಸೇರ್ಪಡೆಯಾಯ್ತು. ರೈತರು ಯಾರು ತಮ್ಮ ಹೊಲಗಳಲ್ಲಿ ಮರಗಳನ್ನು ನೆಡುತ್ತಾರೋ ಅಂತಹ ರೈತರಿಗೆ ಪುಕ್ಕಟೆಯಾಗಿ ಸಸಿ ಮತ್ತು ಬೀಜಗಳನ್ನು ಕೊಡುವಂತೆ ಅರಣ್ಯ ಇಲಾಖೆಗೆ ಸೂಚನೆಗಳನ್ನು ನೀಡಲಾಯ್ತು.

1980 ರಲ್ಲಿ ಅರಣ್ಯ ರಕ್ಷಣಾ ಕಾನೂನು ಜಾರಿಗೆ ಬಂದಿತು. ಇದರ ಪ್ರಕಾರ ಕೇಂದ್ರ ಸರ್ಕಾರದ ಪರವಾನಿಗೆ ಇಲ್ಲದೆ ರಾಜ್ಯ ಸರ್ಕಾರಗಳು ಅರಣ್ಯ ಇಲಾಖೆಯ ಯಾವುದೇ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಉಪಯೋಗವನ್ನು ಮಾಡಬಾರದೆಂದು ಆದೇಶ ನೀಡಲಾಯ್ತು ಮತ್ತು ಹಸಿರು ಗಿಡದ ಒಂದು ಟೊಂಗೆಯನ್ನು ಕಡಿಯುವುದನ್ನೂ ಮಹಾಪರಾಧವೆಂದು ಪರಿಗಣಿಸಲಾಯ್ತು. ಆದರೆ ಈ ಕಾನೂನು ಜಾರಿಗೆ ಬರುವಲ್ಲಿ ವಿಫಲವಾಯ್ತು. ಅರಣ್ಯಾಧಿಕಾರಿಗಳು ಕಾಂಟ್ರಾಕ್ಟರ್‌ಗಳೊಂದಿಗೆ ಶಾಮೀಲಾಗಿ ಮರಗಳನ್ನು ಕಡಿದರು. ಹೀಗಾಗಿ ಬೆಳಸಬೇಕಾದ ಎರಡರಷ್ಟನ್ನು ಉರುಳಿಸಲಾಯ್ತು. ಅರಣ್ಯ ಪುನರುಜ್ಜೀವನದ ಬದಲು ಅರಣ್ಯ ನಾಶ ಪ್ರಾರಂಭವಾಯ್ತು. 1980 ರ ಕಾನೂನು ಯಶಸ್ವಿಯಾಗಲಿಲ್ಲ. 1985 ರಲ್ಲಿ ರಾಷ್ಟ್ರೀಯ ನಿರುಪಯೋಗಿ ಭೂ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂತು. ಈ ಮಂಡಳಿ ರಾಷ್ಟ್ರೀಯ ಭೂಬಳಕೆ ಹಾಗೂ 'ಡಿ' ವರ್ಗದ ನಿರುಪಯೋಗಿ ಭೂ ಅಭಿವೃದ್ಧಿ ಸಮಿತಿಯನ್ನು ರಚಿಸಿತು. ಈ ಸಮಿತಿಗೆ ಈಗಿನ ಪ್ರಧಾನಿ ರಾಜೀವ್ ಗಾಂಧಿಯವರೇ ಅಧ್ಯಕ್ಷರಾದರಲ್ಲದೆ 15 ಜನ ಮುಖ್ಯಮಂತ್ರಿಗಳು ಸದಸ್ಯರಾದರು. ಫೆಬ್ರವರಿ 6, 1986 ರಂದು ಈ ಸಮಿತಿಯ ಪ್ರಥಮ ಸಭೆ ನಡೆಯಿತು. ಈ ಸಭೆಯ ಪ್ರಮುಖ ನಿರ್ದೇಶನಗಳೆಂದರೆ :—

1·7 ನೇ ಪಂಚವಾರ್ಷಿಕ ಯೋಜನೆಯ ಹೊತ್ತಿಗೆ ಎಲ್ಲಾ ರಾಜ್ಯ ಸರ್ಕಾರಗಳೂ ಶೇ. 20 ರಷ್ಟು ನಿರುಪಯುಕ್ತ ಭೂಮಿಯನ್ನು ಗುರುತಿಸಬೇಕು. 1987-88 ನೇ ಸಾಲಿಗೆ ಕನಿಷ್ಟ ಶೇ. 5 ರಷ್ಟನ್ನಾದರೂ ಗುರುತಿಸಬೇಕು.

2. ವಾಣಿಜ್ಯ ಬೆಳೆಗಳ ಬೀಜ, ಮೇವುಗಳ ಬೀಜ ಹಾಗೂ ವಿತರಣೆ ಹೆಚ್ಚಿಸುವಂತೆ ಪ್ರತಿರಾಜ್ಯದ ಬೀಜ ನಿಗಮಗಳನ್ನು ಚುರುಕುಗೊಳಿಸುವತ್ತ ಗಮನ ನೀಡಬೇಕು.

3. ಅರಣ್ಯ ಹಾಗೂ ಅರಣ್ಯೇತರ ಜಮೀನುಗಳನ್ನು ಹಳ್ಳಿಯ ಬಡವರಿಗೆ ಹಾಗೂ ಕೈಗಾರಿಕೋದ್ಯಮಿಗಳಿಗೆ ಗುತ್ತಿಗೆ ಕೊಡುವ ವಿಷಯದಲ್ಲಿ ರಾಜ್ಯ ಸರ್ಕಾರಗಳು ಸ್ಪಷ್ಟವಾದ ಮಾರ್ಗದರ್ಶನಗಳನ್ನು ಅನುಸರಿಸಬೇಕು.

4. ದೇಶಾದ್ಯಂತ ಪ್ರತಿವರ್ಷ ಕನಿಷ್ಟಪಕ್ಷ 1 ಮಿ.ಹೆ. ಜಮೀನಿನಲ್ಲಿ ಅರಣ್ಯ ಬೆಳೆಸಲು ರಾಜ್ಯ ಅರಣ್ಯ ಇಲಾಖೆ ಯೋಜನೆಗಳನ್ನು ತಯಾರಿಸಬೇಕು.

5. ಉಳಿದ 30 ಮಿ.ಹೆ. ಜಮೀನಿನಲ್ಲಿ ಸ್ಥಳೀಯ ಜನ ಸಮುದಾಯಕ್ಕೆ ಉರವಲು ಕಟ್ಟಿಗೆ ಒದಗಿಸುವಂತಾಗಬೇಕು.

6. ಅರಣ್ಯಾವಲಂಬಿತಕೈಗಾರಿಕೋದ್ಯಮಿಗಳಿಗೆ ಜಮೀನನ್ನು ಗುತ್ತಿಗೆ ಕೊಡುವಾಗ ಆ ಉದ್ಯಮಿಗಳು 100 ಹೆ. ಜಮೀನಿನಲ್ಲಿ ಸುಧಾರಿತ ತಳಿಗಳ ಸಂಶೋಧನೆ ನಡೆಸಲು ಉರುವಲು ಕಟ್ಟಿಗೆ ಮೇವು ಬೆಳೆಸಲು ಆದ್ಯತೆ ನೀಡುವಂತೆ ರಾಜ್ಯ ಸರ್ಕಾರವು ಕರಾರುಗಳನ್ನು ಮಾಡಬೇಕು.

ಎನ್.ಸಿ.ಎಲ್.ಡಿ.ಬಿ. ನ ಸಭೆಯಾದ ತಕ್ಷಣ 1986-87 ನೇ ಸಾಲಿನಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ಸಂಸ್ಥೆಗಳು 400 ಹೆ. ಜಮೀನಿನಲ್ಲಿ ಅರಣ್ಯ ಪುನರುಜ್ಜೀವನಗೊಳಿಸಲು ಮುಂದೆ ಬಂದು ನಬಾರ್ಡ್‌ನಿಂದ ಸಾಕಷ್ಟು ಹಣಕಾಸಿನ ನೆರವು ನೀಡಬೇಕೆಂದು ಬೇಡಿಕೆಯಿತ್ತರು. ಕೇಂದ್ರಾಡಳಿತ ಪ್ರದೇಶಗಳ 24 ರಾಜ್ಯಗಳ 147 ಜಿಲ್ಲೆಗಳಲ್ಲಿ 30 ಮಿ. ಹೆ. ನಿರುಪಯುಕ್ತ ('ಡಿ' ವರ್ಗ) ಭೂಮಿಯನ್ನು ಗುರುತಿಸಲು ಡಿಸೆಂಬರ್ 1986 ರಂದು ನಿರುಪಯುಕ್ತ ಭೂ ಅಭಿವೃದ್ಧಿ ನಿಗಮವು 304 ಕೋ. ರೂ. ವೆಚ್ಚದ ಯೋಜನೆಯನ್ನು ತಯಾರಿಸಿತು. ಭಾರತದ ಸರ್ವೆ ಸಂಸ್ಥೆ ಇದಕ್ಕೆ ಸಹಾಯ ಮಾಡಿತು. ಈ ಸಂಸ್ಥೆಯು ನಿರ್ದಿಷ್ಟ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಗ್ರಾಮವಾರು ನಕಾಶೆಗಳನ್ನು ತಯಾರಿಸಿತು. ಮತ್ತು ಹೊಸ ತಂತ್ರಗಾರಿಕೆಯ ನವೀನ ಮಾದರಿಗಳು ಜಾರಿಗೆ ಬಂದವು.

1986-87 ನೇ ಸಾಲಿನಲ್ಲಿ ನಿಗದಿಪಡಿಸಿದ ಸಾಧನೆಯನ್ನು ಮಾಡುವುದರಲ್ಲಿ ಸರಕಾರವು ಹಿಂದೆ ಬಿದ್ದಿತು. ನಿಗದಿತ ಯೋಜನೆಯ 1/3 ಅಂಶದಷ್ಟು ಗುರಿಯನ್ನು ತಲುಪಲಾಯ್ತು. ಒಟ್ಟು 5 ಮಿ.ಹೆ. ಜಮೀನಿನಲ್ಲಿ ಅರಣ್ಯ ಪುನರುಜ್ಜೀವನ ಪ್ರಾರಂಭವಾಯ್ತು. ಆದರೆ ಕೇಂದ್ರ ಮಂತ್ರಿಮಂಡಲದ ಭಾಗವಾಗಿರುವ ಈ ಇಲಾಖೆಯು ಬಡವರಿಗೆ ಭೂಮಿ ಮತ್ತು ಆ ಭೂಮಿಗೆ ಪಟ್ಟಾಕೊಡಲು ತಯಾರಿಲ್ಲ. ಅಲ್ಲದೆ ಕೈಗಾರಿಕೋದ್ಯಮಿಗಳಿಗೆ ಈ ಭೂಮಿಯ ಬಳಕೆ ಬರಲು ಪರವಾನಿಗೆ ನೀಡುವ ಇಚ್ಛೆಯನ್ನು ತೋರಲಿಲ್ಲ. ಕಾಂಗ್ರೆಸ್ ಆಳ್ವಿಕೆಯಿರುವ ಅನೇಕ ರಾಜ್ಯಗಳಲ್ಲಿ ಪಂಚಾಯತ್ ಚುನಾವಣೆಗಳೇ ನಡೆದಿಲ್ಲವಾದ್ದರಿಂದ ಪಂಚಾಯತ್‌ಗೆ ಸಂಬಂಧಿಸಿದ ಭೂ ವಿವರ ತಿಳಿದಿಲ್ಲ. ಮಾಹಿತಿಯನ್ನು ಪಡೆಯುವುದೇ ಪ್ರಶ್ನೆಯಾಗುಳಿಯಿತು.

ಈ ವಿಷಯವನ್ನು ಕುರಿತು 14 ನೇ ಏಪ್ರಿಲ್ 1987ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಈ ರೀತಿ ಹೇಳಿದೆ. ಈ ಇಲಾಖೆಗೆ ಸಂಬಂಧಪಟ್ಟ ಪ್ರಮುಖ ಕಾರ್ಯದರ್ಶಿಗಳು ಬಡವರಿಗೆ ಭೂಮಿ ಕೊಡುವ ವಿಷಯದಲ್ಲಿ ವೈಯಕ್ತಿಕವಾಗಿ ಹಾಗೂ ತಾತ್ವಿಕವಾಗಿ ವಿರೋಧವಿದ್ದಾರೆ. ಅವರು ಕೊಡುವ ಕಾರಣಗಳೆಂದರೆ :

1. ಈ ಕೆಲಸವನ್ನು ನಿರ್ವಹಿಸಲು ಸಾಕಷ್ಟು ನುರಿತ ಆಡಳಿತ ಯಂತ್ರದ ಕೊರತೆ.

2. ಒಂದು ವೇಳೆ ಬಡವರಿಗೆ ಭೂಮಿಯನ್ನು ಕೊಟ್ಟರೆ ಅವರು ಗಿಡ ಬೆಳೆಯುವ ಬದಲು ಆಹಾರ ಧಾನ್ಯ ಬೆಳೆಯುತ್ತಾರೆ. ಅಥವಾ ಶ್ರೀಮಂತರು ಬಡವರ ಭೂಮಿಯನ್ನು ಕಸಿಯುತ್ತಾರೆ.

ಮಧ್ಯಪ್ರದೇಶದ ಬಸ್ತಾರ ಜಿಲ್ಲೆಯ ಬುಡಕಟ್ಟು ಜನರನ್ನು ಹಾಗೂ ರಾಜಸ್ಥಾನದ ಬಡರೈತರನ್ನು ಭೇಟಿ ಮಾಡಿದ ಅದೇ ಪತ್ರಿಕೆಯ ಪ್ರತಿನಿಧಿಗಳು ತಮ್ಮ ಅನುಭವಗಳನ್ನು ಹೀಗೆ ಹೇಳುತ್ತಾರೆ.

'ಗ್ರಾಮೀಣ ಪ್ರದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಎಷ್ಟರಮಟ್ಟಿಗಿದೆ ಎಂಬುದು ಗ್ರಾಮೀಣ ಪ್ರದೇಶದ ಜಮೀನುದಾರರ ಹಾಗೂ ಅರಣ್ಯಾಧಿಕಾರಿಗಳ ನಡುವೆ ಇರುವ ಶಾಮೀಲುತನ, ಅರಣ್ಯ ಅಧಿಕಾರಿಗಳಲ್ಲಿ ಇರುವಂತಹ ಅಸಹ್ಯ ಹೇಡಿತನವನ್ನು ಪ್ರತಿಬಿಂಬಿಸುತ್ತದೆ.

ಮಹಾರಾಷ್ಟ್ರ, ಗುಜರಾತ್ ಕರ್ನಾಟಕ ಹರಿಯಾಣ ಮತ್ತು ಉ.ಪ್ರದೇಶ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶ ರಾಜ್ಯಗಳಿಂದ ದೊಡ್ಡ ಕೈಗಾರಿಕೋದ್ಯಮಿಗಳು ಪೆಂಡಿಗಟ್ಟಲೆ ಮನವಿಗಳನ್ನು ಮಾಡಿಕೊಂಡಿದ್ದಾರೆ. ಈ ಮನವಿಗಳಲ್ಲಿ ಅಡಕವಾಗಿರುವ ಅಂಶಗಳೆಂದರೆ :

1. ಅರಣ್ಯಾವಲಂಬಿ ಕಾರ್ಖಾನೆಗಳಿಗೆ ಬೇಕಾಗುವಂತಹ ಕಚ್ಚಾಮಾಲನ್ನು ಬೆಳೆಯಲು ಹಾಗೂ ಭಾರಿ ವಾಣಿಜ್ಯ ಮರಗಳನ್ನು ನವೀನ ರೀತಿಯಲ್ಲಿ ಬೆಳೆಯಲು ಭೂಮಿಯನ್ನು ಕೊಡಬೇಕೆಂದು ಕೇಳಲಾಗಿದೆ.

2. ಅರಣ್ಯ ಇಲಾಖೆಯ ಹಾಗೂ ಕಂದಾಯ ಇಲಾಖೆಯ ಅಡಿಯಲ್ಲಿರುವ ಈ ನಿರುಪಯುಕ್ತ (ಡಿ ವರ್ಗದ) ಜಮೀನಿನಲ್ಲಿ ಈ ಕೈಗಾರಿಕೋದ್ಯಮಿಗಳು ಉರುವಲು ಕಟ್ಟಿಗೆ ಮತ್ತು ಮೇವು ಬೆಳೆಯುವ ಹಿತಾಸಕ್ತಿಯನ್ನು ಹೊಂದಿಲ್ಲ. ಬದಲಾಗಿ ಭಾರಿ ವಾಣಿಜ್ಯದ ಸಸಿಗಳನ್ನು ನೆಡಲು ನಿತ್ಯ ಹರಿದ್ವರ್ಣ ಉತ್ತಮ ಗುಣ ಮಟ್ಟದ ಭೂಮಿಯನ್ನು ಕೇಳುತ್ತಿದ್ದಾರೆ.

ಉದಾ : ಟಾಟಾ ಮತ್ತು ಹಿಂದೂ ಲೀವರ್ ಕಂಪೆನಿಗಳು ಅಂಡಮಾನ್ ಮತ್ತು ನಿಕೋಬಾರ್ ದೊಡ್ಡ ಅರಣ್ಯ ಭೂಮಿಯನ್ನು ಪಾಮ್ ಎಣ್ಣೆ ಸಸಿಗಳನ್ನು ಬೆಳೆಯಲು ಕೇಳುತ್ತಿದ್ದಾರೆ. ಇದು ನಿರುಪಯುಕ್ತ ಭೂಅಭಿವೃದ್ಧಿ ನಿಗಮದ ನೀತಿಗೆ ವಿರುದ್ಧವಾಗಿದೆ.

3. ಹೀಗೆ ತೆಗೆದುಕೊಂಡ ಭೂಮಿಗೆ ಭೂಮಿತಿ ಶಾಸನ ಅಳವಡಿಸಬಾರದೆಂದೂ ಇದಕ್ಕೆ ತಗಲುವ ಖರ್ಚನ್ನು ಆದಾಯ ತೆರಿಗೆಯಲ್ಲಿ ಕಳೆಯಬೇಕೆಂದೂ ಈ ಉದ್ಯಮದಿಂದ ಬರುವ ಅಧಿಕ ಲಾಭವನ್ನು ಕೈಗಾರಿಕಾ ಆದಾಯವೆಂದು ಪರಿಗಣಿಸದೆ ಕೃಷಿ ಆದಾಯವೆಂದು ಪರಿಗಣಿಸಿ. ತತ್‌ಸಂಬಂಧವಾಗಿ ಬರುವ ಆದಾಯ ತೆರಿಗೆಯನ್ನು ಸಂಪೂರ್ಣ ರದ್ದು ಮಾಡಬೇಕೆಂಬ ಕಟ್ಟು ನಿಟ್ಟಿನ ಶರತ್ತುಗಳನ್ನು ಹಾಕಿದ್ದಾರೆ.

ಈ ಮೇಲಿನ ಶರತ್ತುಗಳೆಲ್ಲವೂ ಪ್ರಧಾನಿ ರಾಜೀವ್‌ಗಾಂಧಿಯವರ ಅಧ್ಯಕ್ಷತೆಯಲ್ಲಿ 15 ಜನ ಮುಖ್ಯಮಂತ್ರಿಗಳ ಸದಸ್ಯತ್ವದಎನ್.ಸಿ.ಎಲ್.ಡಿ.ಬಿ.ಯ ನೀತಿಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ಆದರೆ ನಮ್ಮ ಅನುಭವಕ್ಕೆ ಬಂದಿರುವುದೆಂದರೆ ; ಈ ಸಂಸ್ಥೆಯು ತನ್ನ ನೀತಿಯನ್ನು ಗಾಳಿಗೆ ತೂರಿ ಕೈಗಾರಿಕೋದ್ಯಮಿಗಳ ಶರತ್ತುಗಳಿಗೆ ತಲೆಬಾಗಿ ಹೇರಳವಾದ ಭೂಮಿಯನ್ನು ಈಗಾಗಲೆ ಅವರಿಗೆ ಬಿಟ್ಟುಕೊಟ್ಟಿದ್ದಾರೆಂಬುದು ಬೆಳಕಿಗಿಂತ ಸತ್ಯವಾದ ಸಂಗತಿಯಾಗಿದೆ.

ರಾಜೀವ್‌ಗಾಂಧಿಯವರ ಈ ಹೊಸ ಭೂ ಬಳಕೆ ನೀತಿ ಬಗೆಗೆ ಸಾಕಷ್ಟು ಟೀಕೆಗಳು ಬಂದಿವೆ. ಈ ನೀತಿಯು ಅರಣ್ಯ ಪುನರುಜ್ಜೀವನಗೊಳಿಸುವ ಬಡವರಿಗೆ ಭೂಮಿಕೊಡುವ ಉದ್ದೇಶ ಹೊಂದಿಲ್ಲ ಬದಲಾಗಿ ಮನೆಗೊಂದು ಮರ ಊರಿಗೊಂದು ವನ ಎಂಬ ಊಹಾಪೋಹ ಘೋಷಣೆಯೊಂದಿಗೆ ಗಿಡ ನೆಡುವ ಜನತಾ ಚಳುವಳಿಯನ್ನು ಮಾಡುತ್ತಿದೆ. ಅಲ್ಲದೆ ತನ್ನ ಈ ಅವೈಜ್ಞಾನಿಕ ಹುಚ್ಚು ನೀತಿಯನ್ನು ಮುಚ್ಚಿಡಲು ಕಾಂಗ್ರೆಸ್ (ಐ) ಯೂ ಪ್ರಕೃತಿ ವಿಕೋಪಗಳನ್ನು ತಡೆಗಟ್ಟಲು ಮತ್ತು ಪ್ರಾಕೃತಿಕ ಸಮತೋಲನ ಕಾಪಾಡಲು ಮುಂದಾಗಿದ್ದೇವೆಂದು ಹೊರದೇಶಗಳಿಗೆ ಡಂಗುರ ಸಾರುತ್ತಿದೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಹಸಿರು ಕ್ರಾಂತಿಯ ಬಸುರಿಗೆ ಬಡವರ ಕೈಕೆಸರಾಯ್ತು, ಭೂಮಾಲೀಕರ ಬಾಯಿ ಮೊಸರಾಯ್ತು. ಪ್ರಗತಿಪರ ಭೂಸುಧಾರಣೆಯಿಲ್ಲದೆ ಕೃಷಿ ಉತ್ಪಾದನೆ ಹೆಚ್ಚು ಮಾಡಲು ಸಾಧ್ಯವಿಲ್ಲವೆಂಬುದು 40 ವರ್ಷಗಳಿಂದ ಆಳ್ವಿಕೆ ನಡೆಸುತ್ತಾ ಬಂದಿರುವ ಕಾಂಗ್ರೆಸ್-ಐಗೆ ಅನುಭವಕ್ಕೆ ಬಾರದಿರುವುದು ವಿಷಾದನೀಯ.

(ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಯಲ್ಲಿ ಪ್ರಕಟವಾದ ಪಿ. ಕೆ. ಟಂಡನ್ ಅವರ ಲೇಖನದ ಭಾವಾನುವಾದ)

—ಕಾ. ಪಿ. ಆರ್. ವೆಂಕಟೇಶ್

ಪಾಳು ಬಿದ್ದ ಭೂಮಿಯ ಅಭಿವೃದ್ಧಿ, ಹಸಿರುವನ, ಹಸಿರು ವಲಯ ಎಂಬ ಘೋಷಣೆಗಳು ಎಲ್ಲಾ ಕಡೆ ಕೇಳಿ ಬರುತ್ತಿವೆ. ಈ ಘೋಷಣೆಗಳ ನಿಜವಾದ ಹುರುಳೇನು ?

ಸರ್ಕಾರಿ ಭೂಮಿ, ನಬಾರ್ಡ್ ಹಣದಲ್ಲಿ ನೀಲಗಿರಿ, ಪಾಮ್‌ಆಯಿಲ್ ಉತ್ಪಾದಿಸುವ ಬಿರ್ಲಾ, ಟಾಟಾಗಳಿಗೆ ರಾಜೀವಗಾಂಧಿಯವರ ಕುಮ್ಮಕ್ಕು.

ಸೆಪ್ಟೆಂಬರ್ ಚಳವಳಿಯತ್ತ ರೈತ ಸಂಘ....

ಸೆಪ್ಟೆಂಬರ್ 1 ರಿಂದ 15 ರ ವರೆವಿಗೆ ಅಖಿಲ ಭಾರತ ಮಟ್ಟದಲ್ಲಿ ಎಡಪಕ್ಷಗಳ ರೈತ ಸಂಘಟನೆಗಳು ಜಂಟಿಯಾಗಿ ನಡೆಸುವ ಜೈಲ್‌ಬರೋ ಚಳುವಳಿಯನ್ನು ಯಶಸ್ವಿಗೊಳಿಸಲು ಕರ್ನಾಟ ಪ್ರಾಂತ ರೈತ ಸಂಘದ ಮಂಗಳೂರು ತಾಲ್ಲೋಕು ಸಮಿತಿ ಕಾರ್ಯದರ್ಶಿ ಕಾ|| ಶ್ರೀರಾಮಚಂದ್ರ ಉಚ್ಚಿಲ್‌ರವರು ತಾಲ್ಲೋಕಿನ ರೈತರಿಗೆ ಕರೆ ನೀಡಿದ್ದಾರೆ.

ಭೂ ನ್ಯಾಯ ಮಂಡಳಿಯಿಂದ ತೀರ್ಪಾದ ಭೂಮಿಯ ಒಡೆತನದ ಹಕ್ಕು ನೀಡಬೇಕು. ದರ್ಖಾಸ್ತುದಾರರ ಸಮಸ್ಯೆ ಪರಿಹರಿಸಬೇಕು. ರೈತರು ಬೆಳೆದ ಬೆಳೆಗೆ ನ್ಯಾಯ ಬೆಲೆ ನಿಗದಿ ಪಡಿಸಬೇಕು. ಹರಿಯುವ ನದಿಯಲ್ಲಿ ಮಣ್ಣು ತುಂಬಿ ಉಂಟಾಗಿರುವ ಅಡ್ಡಿ ಹಾಗೂ ಆಗಾಗ್ಗೆ ಬರುವ ನೆರೆ ಹಾವಳಿ ಸರ್ಕಾರಿ ಭೂಮಿಯಲ್ಲಿ ಮನೆಕಟ್ಟಿದ ರೈತರಿಗೆ ನಿವೇಶನದ ಹಕ್ಕು ಪತ್ರ, ಸಹಕಾರಿ ಸಂಘಗಳ ಮೂಲಕ ಪಡೆದ ಸಾಲಗಳ ಬಡ್ಡಿ ರಿಯಾಯಿತಿಯಲ್ಲಿ ನಡೆಯುವ ತಾರತಮ್ಯ ನಿಲ್ಲಬೇಕು ಮುಂತಾದ ಬೇಡಿಕೆಗಳನ್ನು ಸೆಪ್ಟೆಂಬರ್ ಚಳುವಳಿಯಲ್ಲಿ ಮುಂದಿಟ್ಟು ಪಿಕೆಟಿಂಗ್ ನಡೆಸಲಾಗುವುದೆಂದು ರೈತ ಸಂಘ ಹೇಳಿದೆ.

ಸ್ಟಾಲಿನಿಸಂನ್ನು ಪೂರ್ತಿಯಾಗಿ ತೊರೆಯಲು

ಪ್ರಶ್ನೆ :

ಕಮ್ಯುನಿಸ್ಟ್ ಚಳುವಳಿಯನ್ನು ಆವರಿಸಿರುವ ಮಹಾನ್ ಶಾಪ ಸ್ಟಾಲಿನಿಸಂ ಆಗಿದೆ. ಪ್ರಯೋಗದಲ್ಲಿ 'ಸ್ಟಾಲಿನಿಸಂ' ಮತ್ತು 'ಫ್ಯಾಸಿಸಂ' ಸಮವಾಗಿದೆ. ಸ್ಟಾಲಿನಿಸಂನ್ನು ಪೂರ್ತಿಯಾಗಿ ತೊರೆಯಲು ಕಮ್ಯುನಿಸ್ಟ್ ಚಳುವಳಿಗೆ ಸಾಧ್ಯವಿದೆಯೇ ? ಈ ಪ್ರಶ್ನೆ ಬಗ್ಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದ) ಹೇಗೆ ವಿಶ್ಲೇಷಿಸುತ್ತದೆ.

ಉತ್ತರ: ಸ್ಟಾಲಿನಿಸಂ ಫ್ಯಾಸಿಸಂ ಪ್ರಯೋಗದಲ್ಲಿ ಒಂದೇ ಆಗಿದೆ ಎಂಬ ಪ್ರಶ್ನೆಕಾರರ ತಿಳುವಳಿಕೆ ಮೇಲಿನಿಂದ ಕೆಳಗಿನವರೆಗೆ ತಪ್ಪಾಗಿದೆ. ಸ್ಟಾಲಿನಿಸಂ ಮತ್ತು ಫ್ಯಾಸಿಸಂ ಪರಸ್ಪರ ವಿರುದ್ಧವಾಗಿರುವ ಪ್ರವೃತ್ತಿಗಳು. ಎರಡೂ ಒಂದೇ ಎಂದು ವಾದಿಸಲು ಪ್ರಯತ್ನಿಸುವುದು ಫ್ಯಾಸಿಸಂ ಆರಾಧಕರಿಗೆ ಅಗತ್ಯವಾಗಿದೆ. ಆ ತೆರನಾದ ಪ್ರಚಾರವನ್ನು ಮಾಡುತ್ತಲೇ ಇರುತ್ತಾರೆ. ಇದಕ್ಕೆ ಪ್ರಶ್ನಕಾರರೂ ಒಳಪಟ್ಟಿದ್ದಾರೆ.

ಲೆನಿನ್ ಪ್ರತಿಪಾದಿಸಿರುವ ಹಾಗೆ ಆಡಳಿತವೆನ್ನುವುದು ಶಕ್ತಿ ಪ್ರಯೋಗದ ಯಂತ್ರವಾಗಿದೆ. ಅದನ್ನು ಉಪಯೋಗಿಸುವವರು ಬೂರ್ಜ್ವಾ ವರ್ಗವಾಗಿದ್ದಲ್ಲಿ ಫ್ಯಾಸಿಸಂಗೆ ಸೇರಿದ ಯಾವುದಾದರೂ ಒಂದು ರೀತಿಯ ಬೂರ್ಜ್ವಾ ಸ್ವಭಾವ ಆಡಳಿತ ವರ್ಗದ್ದಾಗಿರುತ್ತದೆ. ಕಾರ್ಮಿಕ ವರ್ಗದ ಸರ್ವಾಧಿಕಾರ ಎಂದು ಮಾರ್ಕ್ಸ್-ಎಂಗೆಲ್ಸ್-ಲೆನಿನ್ ಕರೆದ ಸಮಾಜವಾದಿ ಆಡಳಿವೂ ಬಲಪ್ರಯೋಗದ ಯಂತ್ರವೇ ಆಗಿದೆ.

ಬೂರ್ಜ್ವಾ ಆಡಳಿತವು ಅಲ್ಪಸಂಖ್ಯಾತವಾಗಿದ್ದು ಶೋಷಣೆಗೆ ಒಳಗಾಗಿರುವ ಬಹುಪಾಲು ಜನರಿಗೆದುರಾಗಿ ನಡೆಸುತ್ತಿರುವ ಬಲಪ್ರಯೋಗವಾಗಿದ್ದಲ್ಲಿ, ಕಾರ್ಮಿಕ ವರ್ಗದ ಸರ್ವಾಧಿಕಾರ ಬಹುಪಾಲು ಜನತೆ ಅಲ್ಪಸಂಖ್ಯಾತ ಜನರೆದುರು ನಡೆಸುವ ಬಲಪ್ರಯೋಗವಾಗಿದೆ. ಆದರೆ, ಕಾರ್ಮಿಕ ವರ್ಗದ ಸರ್ವಾಧಿಕಾರವು ಬಹುಜನ ವರ್ಗದ ಆಡಳಿತವಾಗಿರುವುದರಿಂದ ಅದು ಕೇವಲ ಬಲಪ್ರಯೋಗವಲ್ಲ. ಬಂಡವಾಳಶಾಹಿಗಳ ಸಾಮೂಹಿಕ ಅಂತರಿಕ್ಷದಲ್ಲಿ ಜೀವಿಸುವ ಅವರದ್ದೇ ಆದ ಸಾಮೂಹಿಕ ಚಿಂತನೆ ಒಳಗೊಂಡ ಜನರನ್ನು ಸಮಾಜವಾದಿ ಪರಿವರ್ತನೆಗಳಿಗೆ ಅವಶ್ಯಕವಾದ ಚಿಂತನೆ ಉಳ್ಳವರನ್ನಾಗಿ ಮಾಡುವ ಕೆಲಸವನ್ನು ಕೂಡ ಕಾರ್ಮಿಕ ವರ್ಗದ ಸರ್ವಾಧಿಕಾರ ನಿರ್ವಹಿಸಲಿದೆ.

ಒಂದು ಕಡೆ (ಅಲ್ಪಸಂಖ್ಯಾತವಾಗಿರುವ ಹಿಂದಿನ ಆಡಳಿತ ವರ್ಗಗಳ ಅವಶೇಷಗಳಿಗೆದುರಾಗಿ) ಬಲಪ್ರಯೋಗ ನಡೆಸುವಾಗಲೇ ಬಹುಪಾಲು ಜನರನ್ನು ಹೊಸ ವಿದ್ಯಾಭ್ಯಾಸಕ್ಕೆ ಅಳವಡಿಸುವುದೂ ಕೂಡ ಕಾರ್ಮಿಕ ವರ್ಗದ ಆಡಳಿತದ ಕರ್ತವ್ಯವಾಗಿದೆ. ಈ ಎರಡೂ ಕೆಲಸವನ್ನು ಮಾಡುವುದು ಹೇಗೆ ಎಂಬ ಪ್ರಶ್ನೆಗೆ ಲೆನಿನ್ ತೃಪ್ತಿಕರವಾದ ಉತ್ತರವನ್ನು ನೀಡಿದ್ದಾರೆ. ಅಕ್ಟೋಬರ್ ಕ್ರಾಂತಿಗಿಂತ ಮೊದಲು ತಾವು ರಚಿಸಿದ ಕೃತಿಗಳಲ್ಲಿ ಮತ್ತು ಅವರು ನಿಧನರಾಗುವವರೆಗೆ ಸೋವಿಯತ್ ಆಡಳಿತಕ್ಕೆ ನಾಯಕತ್ವ ನೀಡಿ, ಕಾರ್ಮಿಕ ವರ್ಗದಲ್ಲಿ ಹಿಂದುಳಿದವರನ್ನು ಕಾರ್ಮಿಕ ವರ್ಗದಲ್ಲೇ ಹಿಂದುಳಿದಿರುವ ವಿಭಾಗ-ಅದರ ರೀತಿಯಲ್ಲೇ ಹಿಂದುಳಿದಿರುವ ರೈತ ಜನಸಾಮಾನ್ಯ, ಹಿಂದಿನ ಆಡಳಿತ ವರ್ಗಕ್ಕೆ ಸೇರಿದವರೂ, ಕ್ರಾಂತಿಗೆ ಮುನ್ನ ಮತ್ತು ನಂತರ ಸೋವಿಯೆತ್‌ಗಳಿಗೆ ಅನುಕೂಲಕರವಾದ ನಿಲುವು ತೆಗೆದುಕೊಂಡ ಜನಸಾಮಾನ್ಯರು ಇವರೆಲ್ಲರನ್ನೂ ಒಂದುಗೂಡಿಸಿ ತೆಗೆದುಕೊಂಡು ಹೋಗುವಲ್ಲಿ ಕಾರ್ಮಿಕ ವರ್ಗದ ನಾಯಕತ್ವ ಎನ್ನುವ ನೆಲೆಯಲ್ಲಿ ಪಕ್ಷ ಹೇಗೆ ನಾಯಕತ್ವ ನೀಡಬಹುದೆಂದು ತಾತ್ವಿಕವಾಗಿ ಹಾಗೂ ಪ್ರಾಯೋಗಿಕವಾಗಿ ಕೆಲಸದ ಮೂಲಕ ಮುಂದಿನ ತಲೆಮಾರುಗಳಿಗೆ ಲೆನಿನ್ ತೋರಿಸಿ ಕೊಟ್ಟಿದ್ದಾರೆ.

ಲೆನಿನ್‌ರವರಿಗೆ ತಾನು ಸಾವಿನ ಅಂಚಿನಲ್ಲಿದ್ದೇನೆ ಎಂದು ಮನಸ್ಸಿಗೆ ಅರಿವುಂಟಾದಾಗ ತನ್ನ ನಾಯಕತ್ವದಲ್ಲಿ ಬೆಳೆದು ಬಂದ ಪಕ್ಷ ಮತ್ತು ಸರಕಾರದ ಸ್ಥಿತಿ ಹೇಗಾಗಬಹುದೆಂದು ಆಶಂಕಿಸಿತ್ತು.

ಸಕ್ರಿಯ ಕೆಲಸದಿಂದ ಬಿಡುಗಡೆ ಹೊಂದಿ, ಅನಾರೋಗ್ಯದಿಂದ ಹಾಸಿಗೆ ಹಿಡಿದ ಕಾಲದಲ್ಲಿ ಈ ಪ್ರಶ್ನೆಗೆ ಸಂಬಂಧಿಸಿ ತನಗಿರುವ ಅಭಿಪ್ರಾಯವನ್ನು ಮುಂದಿನ ಪಕ್ಷದ ಅಧಿವೇಶನಕ್ಕೆ ಪತ್ರವೆಂಬ ರೂಪದಲ್ಲಿ ಅವರು ಬರೆದರು. ಅದನ್ನು ಅವರ ಸಹಕಾರ್ಯಕರ್ತೆ ಹಾಗೂ ತನ್ನ ಬಾಳಸಂಗಾತಿ (ಕ್ರುಪ್ಸ್ಕಯಾಯಿ) ರವರ ಬಳಿ ಕೊಟ್ಟರು. ಪಕ್ಷದ ಅಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ಆ ಪತ್ರವನ್ನು ನೀಡಲಾಯಿತಾದರೂ, ಆ ಪತ್ರವನ್ನು ಬಹಳಷ್ಟು ಕಾಲ ರಹಸ್ಯವಾಗಿಡಲಾಯಿತು. ಮುಂದೆ ಸೋವಿಯತ್ ಪಕ್ಷದಲ್ಲಿ ನಂತರ ನಡೆದ ಘಟನೆಗಳಿಗೆ ಬೆಳಕು ಚೆಲ್ಲುವ ಸುದೀರ್ಘವಾದ ಒಂದು ರೇಖೆಯಾಗಿತ್ತು ಆ ಪತ್ರ.

ಅಂದಿನ ಕೇಂದ್ರ ಸಮಿತಿಯ ಉನ್ನತ ಸ್ಥಾನದಲ್ಲಿರುವ ಎಲ್ಲಾ ಸಂಗಾತಿಗಳ ಬಗ್ಗೆ ಲೆನಿನ್‌ರವರಿಗೆ ತಿಳಿದಿತ್ತು. ಅವರು ಒಬ್ಬೊಬ್ಬರ ಸಾಮರ್ಥ್ಯ ಹಾಗೂ ನ್ಯೂನತೆ ಸ್ಪಷ್ಟವಾಗಿ ತಿಳಿದುಕೊಂಡಿದ್ದ ಅವರು ಕಡಿಮೆ ಮಾತಿನಲ್ಲಿಯೇ ತನ್ನ ಅಭಿಪ್ರಾಯಗಳನ್ನು ಪ್ರಕಟಿಸಿದ್ದರು. ಅಂದೇ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿದ್ದ ಸ್ಟಾಲಿನ್ ಬಗ್ಗೆ ಅವರು ವಿಮರ್ಶಿಸಿದರು, ಪಕ್ಷದ ಪ್ರಧಾನ ಕಾರ್ಯದರ್ಶಿಗಿರಬೇಕಾದ ಒಟ್ಟಾರೆ ಸಾಮರ್ಥ್ಯ ಇದ್ದಾಗ್ಯೂ ಕೂಡ, ಅಂತಹ ವ್ಯಕ್ತಿಗಳಲ್ಲಿರಬಾರದ ಕೆಲವು ನ್ಯೂನತೆಗಳೂ ಸ್ಟಾಲಿನ್‌ರವರಲ್ಲಿ ಇವೆಯೆಂದು ಎತ್ತಿ ತೋರಿಸಿದರು. ಸ್ಟಾಲಿನ್‌ರವರಲ್ಲಿರುವ ಎಲ್ಲಾ ಗುಣಗಳಿರುವ—ನ್ಯೂನತೆಗಳಿಲ್ಲದ ವ್ಯಕ್ತಿಯೋರ್ವನನ್ನು ಪ್ರಧಾನ ಕಾರ್ಯದರ್ಶಿ ಮಾಡುವುದೇ ಒಳ್ಳೆಯದು ! ಎಂದು ಅವರು ಅಭಿಪ್ರಾಯ ಪಟ್ಟರು. ಇಂತಹ ವ್ಯಕ್ತಿಯೋರ್ವರು ಆಗ ಇರಲಿಲ್ಲವೆಂದು ಅವರಿಗೆ ಅಭಿಪ್ರಾಯವಿದ್ದಾಗ್ಯೂ ಕೂಡ-ಇವರನ್ನೇ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಬೇಕೆಂದು ಲೆನಿನ್ ಅಭಿಪ್ರಾಯ ಪಟ್ಟಿಲ್ಲ.

ಈ ಪತ್ರ ಪಕ್ಷದ ಅಧಿವೇಶನಕ್ಕೆ ಬಂದಿರುವ ಪ್ರತಿನಿಧಿಗಳೆಲ್ಲರಿಗೂ ಓದಲಿಕ್ಕೆ ಸಮಯವನ್ನು ಕೊಡಲಾಯಿತು. ತನಗೆದುರಾಗಿ ಲೆನಿನ್ ನಡೆಸಿದ ವಿಮರ್ಶೆ ಅಂಗೀಕರಿಸಿ, ಕೇಂದ್ರ ಸಮಿತಿ ಹಾಗೂ ಪಕ್ಷದ ಸಹಾಯದಿಂದ ಸರಿಪಡಿಸಲು ಶ್ರಮಿಸುತ್ತೇನೆಂದು ವಾಗ್ದಾನಮಾಡಿ ಸ್ಟಾಲಿನ್ ಮಾತನಾಡಿದರು. ಆ ಆಧಾರದಲ್ಲಿ ಅವರನ್ನು ಪ್ರಧಾನಕಾರ್ಯದರ್ಶಿಯನ್ನಾಗಿ ಮುಂದುವರಿಸಲು ಪಕ್ಷ ನಿರ್ಧರಿಸಿತು.

ಇದಾದ ಹತ್ತಾರು ವರ್ಷಗಳ ಕಾಲ ಈ ಮಾತನ್ನು ಪಾಲಿಸಿಯೇ ಸ್ಟಾಲಿನ್ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿದ್ದರು. ಆ ಕಾಲದಲ್ಲಿ ಪಕ್ಷದ ಹಾಗೂ ಸಮಾಜವಾದಿ ನಿರ್ಮಾಣದ ಬೆಳವಣಿಗೆಗೆ ಸಹಕಾರಿಯಾದ ಹಲವಾರು ಕೆಲಸಗಳನ್ನು ಸ್ಟಾಲಿನ್ ಮಾಡಿದರು. ಜನಗಳ ನಡುವೆ ಅವರಿಗಿರುವ ಗೌರವ ಸಹಜವಾಗೇ ಹೆಚ್ಚಾಯಿತು.

ಆದರೆ 1934 ರಲ್ಲಿ ನಡೆದ ಪಕ್ಷದ ಅಧಿವೇಶನದೊಂದಿಗೆ ಅವರ ನಾಯಕತ್ವದಲ್ಲಿರುವ ಕೆಲಸಕಾರ್ಯಗಳಲ್ಲೂ ಸರ್ವಾಧಿಕಾರಿ ಪ್ರವೃತ್ತಿ ವ್ಯಕ್ತವಾಗಲು ಆರಂಭವಾಯಿತು. ಆ ಬಗ್ಗೆ ಪಕ್ಷದ ಒಳಗಡೆ ವಿರೋಧ ಬೆಳೆದು ಬರಲು ಆರಂಭಿಸಿದ ಕಾರಣ– ಪಕ್ಷದೊಳಗಡೆ ಮಾತ್ರವೇ ಅಲ್ಲದೆ ಸರಕಾರಿ ನೆಲೆಯಲ್ಲೂ ಈ ವಿರೋಧಕ್ಕೆ ಎದುರಾಗಿ ಮರ್ಧನ ನಡವಳಿಕೆಗಳು ಆರಂಭಗೊಳ್ಳಲ್ಪಟ್ಟಿತು. ಇದನ್ನೇ 1956 ರ 20 ನೇ ಅಧಿವೇಶನದಿಂದ ಆರಂಭಗೊಂಡು ಸೋವಿಯತ್ ಪಕ್ಷ ನಿರಂತರವಾಗಿ ವಿಮರ್ಶೆ ಮಾಡಿತು.

ಇದೇ ಪ್ರವೃತ್ತಿ ಪ್ರಾರಂಭವಾದ ನಂತರ ಸೋವಿಯತ್ ಯೂನಿಯನ್ನಿನ ರಕ್ಷಣೆಗಾಗಿ ಫಲಪ್ರದವಾದ ನಡವಳಿಕೆ ರೂಪಿರಿಗೆದುರಾಗಿ ಉಪಯೋಗಿಸಲಾಯಿತು. ಆಡಳಿತ ಯಂತ್ರ ಕೂಡ ಅದಕ್ಕನುಗುಣವಾಗಿ ಪುನರ್‌ಸಂಘಟಿಸಲ್ಪಟ್ಟಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕಾರ್ಮಿಕ ವರ್ಗದ ಸರ್ವಾಧಿಕಾರ ಪಕ್ಷದ ಸರ್ವಾಧಿಕಾರವಾಗಿಯೂ, ಪಕ್ಷದ ಒಳಗಡೆ ಮರುಮಾತಿಲ್ಲದಂತಹ ಸ್ಥಿತಿಯಾಗಿ ಅಧಃಪತನಕ್ಕಿಳಿಯಿತು. ಇದನ್ನೇ ಕ್ರುಶ್ಚೋವ್ ಮೊದಲ್ಗೊಂಡು ಬ್ರೆಜ್ನೇವ್ ವರೆಗೆ ಇರುವ ಪಕ್ಷದ ಮುಖಂಡರುಗಳು ತೆರೆದು ತೋರಿಸಿರುವುದು.

ಆದರೆ ಲೆನಿನ್ ಎತ್ತಿತೋರಿಸಿದ ನಂತರ 1934 ರಿಂದ ಸ್ಟಾಲಿನ್ ಮರಣ ಹೊಂದುವವರೆಗ ಅವರ ಕೆಲಸದಲ್ಲಿ ಇದು ಪ್ರಕಟವಾಗಿದೆ. ಅದರ ಅನುಭವ, ಸೋವಿಯತ್ ಯೂನಿಯನ್ನಿನಲ್ಲೋ ಮತ್ತಾವುದಾದರೂ ರಾಷ್ಟ್ರದಲ್ಲೋ, ಪುನರಾವರ್ತಿಸಬಾರದೆಂಬ ಆಗ್ರಹದಲ್ಲಿ ಸ್ಟಾಲಿನ್ ವ್ಯಕ್ತಿ ಪ್ರಭಾವ-ಸಿದ್ಧಾಂತಕ್ಕೆ ಎದುರಾಗಿ 20 ನೇ ಪಕ್ಷದ ಸಮ್ಮೇಳನ ನಡೆಸಿದ ಸಂದರ್ಭದಲ್ಲಿ ವಿಶದವಾದ ವಿಮರ್ಶೆಯನ್ನು ಅಂದಿನ ಭಾರತದ ಅವಿಭಜಿತ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಜಗತ್ತಿನ ಎಲ್ಲಾ ಕಡೆ ಇರುವ ಕಮ್ಯುನಿಸ್ಟ್ ಪಕ್ಷಗಳು ಒಪ್ಪಿಗೆ ನೀಡಿದ್ದು ಕಾರ್ಮಿಕ ವರ್ಗದ ಸರ್ವಾಧಿಕಾರದ ಎರಡು ಪ್ರಧಾನ ಪ್ರಶ್ನೆಗಳಲ್ಲಿ ಒಂದಾದ ಬಹುಪಾಲು ಜನರ ಪುನರ್‌ವಿದ್ಯಾಭ್ಯಾಸವನ್ನು ಬಹಳಷ್ಟು ಕಡೆಗಣಿಸಿ ಇನ್ನೊಂದು ಆವಶ್ಯವಾದ ಬಲಪ್ರಯೋಗ ಮಾತ್ರ ಕಾರ್ಯಗತಗೊಳಿಸಿ, ಅದನ್ನು ಮಾತ್ರ ವರ್ಗಶತ್ರುಗಳಿಗೆದುರಾಗಿ ತಿರುಗಿಸಿಬಿಡುವ ಬದಲು ಸ್ವಂತ ವರ್ಗಕ್ಕೆದುರಾಗಿಯೇ

ಸ್ಟಾಲಿನ್‌ರವರ ದೋಷಗಳಂತೆ ಗುಣಗಳನ್ನು ಎತ್ತಿ ಹೇಳುವುದಾಗಿ ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾಸ್ಕೋದಲ್ಲಿ ನಡೆಸಿದ ಭಾಷಣದಲ್ಲಿ ಗೋರ್ಬಚೆವ್ ಹೇಳಿದ್ದಾರೆ.

ಇಂದಿನ ನಾಯಕತ್ವದ ಅಡಿಯಲ್ಲಿ ಈ ಅಭಿಪ್ರಾಯಗಳಿಗೆ ಎದುರಾಗಿ ಭಯವುಂಟುಮಾಡುವ ಹಲವಾರು ವಿಮರ್ಶೆಗಳು ಸೋವಿಯತ್ ಪತ್ರಿಕೆಗಳಲ್ಲಿ ಈಗ ಬರುತ್ತಿದೆ. ಲೆನಿನ್ ನಂತರ ಸೋವಿಯತ್ ಯೂನಿಯನ್ನಿನಲ್ಲೂ, ಸೋವಿಯತ್ ಪಕ್ಷದಲ್ಲೂ ನಡೆದದ್ದೆಲ್ಲವೂ ತಪ್ಪೆಂದು, ಅಲ್ಲಿ ನಡೆಯುತ್ತಿರುವುದು ಸಮಾಜವಾದವೇ ಅಲ್ಲವೆಂದು ಜನರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಹಲವು ಸೋವಿಯತ್ ಪತ್ರಿಕೆಗಳು ಬರೆಯುತ್ತಿವೆ. ಅದನ್ನು ಹಾಗೆಯೇ ನೋಡಿದರೆ ಫ್ಯಾಸಿಸಂ ರೀತಿಯಲ್ಲಿಯೇ ಸಮಾಜವಾದವೂ ಕೂಡ ಮರ್ಧನಕಾರಿಯಾದುದೆಂದು ಭಯ ಬೀಳಬಹುದು.

ಆದರೆ ಇದು ಸೋವಿಯತ್ ಪಕ್ಷದ ಅಭಿಪ್ರಾಯವಲ್ಲ, ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳ ಅಭಿಪ್ರಾಯವೂ ಅಲ್ಲ. 70 ವರ್ಷಗಳ ಕಾಲ ಯಶಸ್ವಿಯಾಗಿ ನಡೆದ ಸಮಾಜವಾದಿ ನಿರ್ಮಾಣ ಅಭಿವೃದ್ಧಿಯಾಗಬೇಕಾಗಿದ್ದಲ್ಲಿ ಸ್ಟಾಲಿನ್ ನಾಯಕತ್ವದಲ್ಲಿ ನಡೆದ ದೋಷಗಳನ್ನು ಹೊರತುಪಡಿಸಿ ಹೆಚ್ಚು ಸಮಾಜವಾದಕ್ಕಾಗಿ ಹೆಚ್ಚು ಪ್ರಜಾಪ್ರಭುತ್ವ ಸ್ಥಾಪಿಸಬೇಕಾಗಿದೆಯೆಂದು ಸೋವಿಯತ್ ಪಕ್ಷ ಎತ್ತಿ ತೋರಿಸುತ್ತದೆ.

ಕಮ್ಯುನಿಸ್ಟ್ ಚಳುವಳಿಗೆ ಸಾಧ್ಯವಿದೆಯೆ ?

ಸಲು ಸ್ಟಾಲಿನ್ ತಾನೇ ನೇತೃತ್ವ ನೀಡಿದ್ದರು. ನಾಝಿ ಜರ್ಮನಿಯನ್ನು ಒಂಟಿಯಾಗಿ ಎದುರಿಸಲು ಸೋವಿಯತ್ ಯೂನಿಯನನ್ನು ನಿರ್ಭಂದಿಸುವ ತಂತ್ರ ಬ್ರಿಟನ್ ಸೇರಿದಂತೆ ಸಾಮ್ರಾಜ್ಯಶಾಹಿಗಳು ಆವಿಷ್ಕರಿಸಿದಾಗ ಅದನ್ನು ಮುರಿಯುವ ಜರ್ಮನಿ ಸೋವಿಯತ್ ಯೂನಿಯನ್‌ಗೆ ಎದುರಾಗಿ ಎರಗಿದಾಗ ಕೆಲವು ಪ್ರಮುಖ ಬಂಡವಾಳಶಾಹಿ ದೇಶಗಳೂ ಸೇರಿ ಸೋವಿಯತ್ ಯೂನಿಯನ್‌ನೊಂದಿಗೆ ಹೊಂದಾಣಿಕೆ ಉಂಟುಮಾಡುವ ಪರಿಸ್ಥಿತಿ ನಿರ್ಮಿಸುವ-ಈ ಎಲ್ಲಾ ಶಕ್ತಿಗಳ ಸರ್ಕಾರದೊಂದಿಗೆ ಸೋವಿಯತ್ ಜನತೆ ಫ್ಯಾಸಿಸ್ಟ್ ವಿರುದ್ಧ ಯುದ್ಧದಲ್ಲಿ ಭಾಗವಹಿಸುವಂತಹ ಉಜ್ವಲವಾದ ನಾಯಕತ್ವ ಕೊಡುವ-ಇದೆಲ್ಲ ಸ್ಟಾಲಿನ್‌ರವರ ಕಾಣಿಕೆ ಎಂದು ಸೋವಿಯತ್ ಯೂನಿಯನ್ ನಾಯಕತ್ವ ಅಂಗೀಕರಿಸುತ್ತದೆ. (ಗೋರ್ಬಚೆವ್‌ರವರ ವರದಿಯಲ್ಲಿ ಕೂಡ ಇದನ್ನು ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ.)

ಇದೆಲ್ಲ ಇದ್ದರೂ ಕೂಡ ಕೊನೆಯ ವರ್ಷಗಳಲ್ಲಿ ಸ್ಟಾಲಿನ್ ಏರ್ಪಡಿಸಿದ ಆಡಳಿತ ವ್ಯವಸ್ಥೆ, ಪಕ್ಷದ ಸಂಘಟನೆ ಒಳಗಡೆ ಅವರು ಸೃಷ್ಟಿಸಿದ ಕೆಲಸದ ಶೈಲಿ ಮೊದಲಾದವು ಲೆನಿನಿಸಂಗೆ ವಿರೋಧವಾಗಿತ್ತು. ಕಾರ್ಮಿಕ ವರ್ಗದ ಸರ್ವಾಧಿಕಾರವು ಬಹುಪಾಲು ಜನರ ಪ್ರಭುತ್ವವಾಗಿದೆ, ಶೋಷಕ ವರ್ಗಗಳ ಧೋರಣೆಗಳಿಗೆದುರಾಗಿ ಶಕ್ತಿ ಪ್ರಯೋಗವಾಗಿರುತ್ತದೆ ಎಂಬ ನೆಲೆಯಲ್ಲಿ ಆಡಳಿತದಲ್ಲೂ, ಪಕ್ಷದೊಳಗೂ ವ್ಯಾಪಕವಾದ ಪ್ರಜಾಪ್ರಭುತ್ವ ಬೆಳೆಸಲು ಸ್ಟಾಲಿನ್ ಪ್ರಯತ್ನಿಸಲಿಲ್ಲ.

ಎದುರಾಗಿ-ವರ್ಗಶತ್ರುಗಳಿಗೆ ವಿರುದ್ಧ ತಿರುಗಿಸಬೇಕಾಗಿದ್ದ ಮರ್ಧನಯಂತ್ರ ಪಕ್ಷದೊಳಗಡೆ ಭಿನ್ನಾಭಿಪ್ರಾಯವಿರುವವರ ತಿರುಗಿಸಿ ಹೊಡೆಯಲು ಉಪಯೋಗಿಸುವುದು–ಇದು ಸ್ಟಾಲಿನ್ ಮುಖಂಡತ್ವ ಕಾಲದಲ್ಲಿ ಮೊದಲಿನ ಹತ್ತಾರು ವರ್ಷ ಬಿಟ್ಟು ಉಳಿದ ಕಾಲಘಟ್ಟದಲ್ಲಿ ಮಾಡಿದ್ದು.

ಈ ಸತ್ಯವನ್ನು ಬಹಿರಂಗವಾಗಿ ಹೇಳುವುದರ ಅರ್ಥ ಸೋವಿಯತ್ ಪಕ್ಷಕ್ಕೂ ಹಾಗೂ ಜನತೆಗೆ, ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಕೂಡ ಸ್ಟಾಲಿನ್ ನೀಡಿದ್ದ ಕಾಣಿಕೆಗಳು ಕಡೆಗಣಿಸುವಂತಹುದಲ್ಲ. ಸ್ಪಷ್ಟವಾಗಿ, ಒಂದು ರಾಷ್ಟ್ರದಲ್ಲಿ ಮಾತ್ರ ಸಾಧ್ಯವಿಲ್ಲವೆಂಬ ಟ್ರಾಟಸ್ಕಿ ವಾದವನ್ನು ಪ್ರಾಯೋಗಿಕ ಜೀವನದಲ್ಲಿ ಬಯಲುಗೊಳಿಸಿ ಸೋವಿಯತ್ ಯೂನಿಯನ್ನಿನಲ್ಲೇ ಸಮಾಜವಾದ ನಿರ್ಮಾಣ ಮಾಡಿ ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಎಲ್ಲಾ ಬೆಲೆಯುಳ್ಳ ಪಾಠ ಸ್ಟಾಲಿನ್ ನೇತೃತ್ವದಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷ ನೀಡಿದೆ. ಜಗತ್ತಿನ ಪ್ರಥಮ ಸಮಾಜವಾದಿ ರಾಷ್ಟ್ರವನ್ನು ನಾಶಪಡಿಸಲು ಹಿಟ್ಲರ್ ಆರಂಭಿಸಿದ ಯುದ್ಧ—ಅದಕ್ಕಿಂತ ಮೊದಲು ಹಾಗೂ ಅದು ಆರಂಭವಾದ ಮೇಲೆ ಆಂಗ್ಲೋ ಅಮೆರಿಕಾ ಸಾಮ್ರಾಜ್ಯಶಾಹಿಗಳನ್ನೊಳಗೊಂಡ ಸೋವಿಯತ್ ವಿರೋಧಿ ತಂತ್ರಗಳು ಹಾಗೂ ಇವುಗಳಲ್ಲೊಂದನ್ನು ಯಶಸ್ವಿಯಾಗಿ ಎದುರಿಸಿ ಸೋವಿಯತ್ ಯೂನಿಯನ್‌ನ್ನು ಜಗತ್ತಿನ ಎರಡು ಪ್ರಮುಖ ಶಕ್ತಿಗಳಲ್ಲಿ ಒಂದಾಗಿ ರೂಪಿಸುವಲ್ಲಿ ಸ್ಟಾಲಿನ್ ಪಾತ್ರ ಮಹತ್ತರದ್ದಾಗಿದೆ. ಈ ಗುಣಗಳನ್ನು ಕಾಣದೆ ಸ್ಟಾಲಿನ್ ಮುಖಂಡತ್ವದ ದೋಷವನ್ನು ಮಾತ್ರ ಎತ್ತಿ ಹೇಳುವುದು ಸರಿಯಲ್ಲವೆಂದು ಕ್ರುಶ್ಚೋವ್‌ಗೆದುರಾಗಿ ಭಾರತದ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ವಿಮರ್ಶೆ ಮಾಡಿತು.

ಗೋರ್ಬಚೇವ್‌ರವರ ವಿಮರ್ಶೆಗೆ ಈ ವಿಮರ್ಶೆಯು ಬಾಧಕವಾಗುವುದಿಲ್ಲ.

ಈ ವಾಸ್ತವ ತಿಳಿಯದೆ ಸ್ಟಾಲಿನ್ ನಾಯಕತ್ವದಲ್ಲಿ ನಡೆದ ದೋಷಗಳನ್ನು ಫ್ಯಾಸಿಸಂನ ಸಹಜವಾದ ದೋಷಗಳೊಂದಿಗೆ ಸಮೀಕರಿಸುತ್ತಿರುವುದನ್ನು ಪ್ರಶ್ನಕಾರನಲ್ಲಿ ಗುರುತಿಸಬಹುದಾಗಿದೆ.

(ಚಿಂತಾ ಕೃಪೆ)

—ಇ. ಕೆ. ಎನ್. ರಾಜನ್
ಕುಮಾರ್ ಕುಂದಾಪುರ

ಕಾಲರಾದಿಂದ ಜನರ ಪ್ರಾಣ ರಕ್ಷಿಸಿ

ದೆಹಲಿಯಲ್ಲಿ ಕಾಣಿಸಿಕೊಂಡ ಕಾಲರಾ 30 ಮಂದಿ ಬಲಿ ತೆಗೆದುಕೊಂಡಿರುವ ಸುದ್ದಿಯನ್ನು ನಾವು ಓದಿದ್ದೇವೆ. ಇದೇ ರೀತಿಯಲ್ಲಿ ಕರ್ನಾಟಕದ ರಾಯಚೂರಿನಲ್ಲಿ ಇತ್ತೀಚೆಗೆ ಸುಮಾರು 20 ಮಂದಿ ಈ ರೋಗಕ್ಕೆ ಬಲಿಯಾಗಿದ್ದಾರೆ. ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಯಚೂರು ಜಿಲ್ಲಾ ಸಮಿತಿ ಈ ಕುರಿತು ಕೂಡಲೇ ಆರೋಗ್ಯ ಇಲಾಖೆಯು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಜಿಲ್ಲೆಯಾದ್ಯಂತ ಕೊಳಚೆ ಪ್ರದೇಶಗಳಲ್ಲಿ ನೈರ್ಮಲ್ಯ ಕಾಪಾಡಲು ಕ್ರಮ ವಹಿಸಬೇಕು, ಕಾಲರಾ ಚುಚ್ಚುಮದ್ದನ್ನು ಕೊಡಬೇಕು. ಚರಂಡಿ, ಕಾಲವೆ ಒಳಚರಂಡಿಗಳನ್ನು ಕಟ್ಟಬೇಕು. ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ ಸ್ತ್ರೀ-ಪುರುಷರಿಗೆ ಶೌಚಾಲಯ ವ್ಯವಸ್ಥೆ ಮಾಡಬೇಕು ಮುಂತಾದ ನಾಗರೀಕ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಸಂಘಟನೆ ಸರ್ಕಾರವನ್ನು ಒತ್ತಾಯಿಸಿದೆ.

ಧರಣಿ, ಪಿಕೆಟಿಂಗ್, ಜೈಲ್‌ಬರೋದತ್ತ ರೈತ ಸಂಘ

ಬೆಂಗಳೂರು

1987ರ ಡಿಸೆಂಬರ್ 9ರ 10 ಲಕ್ಷ ರೈತರ ದೆಹಲಿ ಚಲೋ ಮಾರ್ಚ್ 15ರ ಭಾರತ್ ಬಂದ್‌ನ ಹೋರಾಟದ ಮುನ್ನಡೆಯಾಗಿ ದೇಶದ ನಾಲ್ಕು ಎಡಪಕ್ಷಗಳ ರೈತ ಸಂಘಟನೆಗಳು ಸೆಪ್ಟೆಂಬರ್ 1 ರಿಂದ 15ರ ವರೆವಿಗೆ ನಡೆಸಲು ಕರೆ ನೀಡಿರುವ ಜೈಲ್ ಬರೋ ಚಳುವಳಿಯನ್ನು ಬೆಂಗಳೂರು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕರ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ರಾಜ್ಯ ಕೃಷಿ ಕಾರ್ಮಿಕರ ಸಂಘಗಳು ಜಂಟಿಯಾಗಿ ನಿರ್ಧರಿಸಿವೆ.

ಬಗರ್ ಹುಕುಂ ಸಾಗುವಳಿ ಮಾಡಿದ ಭೂಮಿ ಬಡವರಿಗೆ ಸಿಗಲಿ ಪ್ರಗತಿ ಪರ ಭೂಸುಧಾರಣೆ ಜಾರಿಗೆ ಬರಲಿ, ನಿವೇಶನ ರಹಿತರಿಗೆ ಮನೆ ಸಿಗಲಿ ಕೃಷಿ ಕಾರ್ಮಿಕರಿಗೆ ಕೇಂದ್ರ-ರಾಜ್ಯ ಮಟ್ಟದಲ್ಲಿ ಟ್ರೇಡ್ ಯೂನಿಯನ್ ಹಕ್ಕು ಸಿಗಲಿ, ರೈತರಿಂದ ಬಿ.ಡಿ.ಎ. ವಶಪಡಿಸಿಕೊಂಡಿರುವ ಜಮೀನಿಗೆ ಯೋಗ್ಯ ಬೆಲೆ ಸಿಗಲಿ, ಕೃಷಿ ಸಲಕರಣೆ ಗೊಬ್ಬರ ಕ್ರಿಮಿ ನಾಶಕ ಮತ್ತಿತರ ರೈತರ ಬಳಕೆ ವಸ್ತುಗಳು ಕಡಿಮೆ ದರದಲ್ಲಿ ಸಿಗಲಿ, ದಲಿತರ ಮೇಲಿನ ದೌರ್ಜನ್ಯ ನಿಲ್ಲಲಿ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಸೆಪ್ಟೆಂಬರ್ 1 ರಿಂದ 3 ರ ವರೆವಿಗೆ ಎಲ್ಲಾ ತಾಲೋಕು ಕಛೇರಿಗಳ ಮುಂದೆ ನಗರ ಜಿಲ್ಲೆಯ ರೈತ-ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸುವರು. ಸೆಪ್ಟೆಂಬರ್ 5 ರಂದು ಬೆಳಿಗ್ಗೆ 11-30 ಕ್ಕೆ ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ಹೊರಟು ತಾಲೋಕು ಕಛೇರಿ ಪಿಕೆಟಿಂಗ್ ನಡೆಸಿ ಜೈಲ್ ಬರೋ ಚಳುವಳಿ ಯಶಸ್ವಿಗೊಳಿಸಲಾಗುವುದೆಂದು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಪಿ. ಜಗನ್ನಾಥ್, ಕೃಷಿ ಕಾರ್ಮಿಕರ ಸಂಘದ ಕಾ|| ವೆಂಕಟಾಚಲಯ್ಯನವರು ಹಾಗೂ ಜಿ. ಎಂ. ವೆಂಕಟೇಶ್. ಎಂ. ಮುನಿದೊಡ್ಡಯ್ಯನವರುಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತುಮಕೂರು ಜಿಲ್ಲಾ ರೈತ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘಗಳ ತುಮಕೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ಜಿಲ್ಲೆಯ ರೈತ ಪ್ರತಿನಿಧಿಗಳು ಮತ್ತು ಹಿತೈಷಿಗಳ ಜಿಲ್ಲಾ ಸಮಾವೇಶ ಆಗಸ್ಟ್ 21 ರಂದು ತುಮಕೂರು ನಗರದ ಪುರಭವನದಲ್ಲಿ ಕಾ|| ಕೆ.ಆರ್. ನಾಯಕ್ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಮಾವೇಶವನ್ನುದ್ದೇಶಿಸಿ ರೈತ ನಾಯಕ ಕಾ|| ಎಚ್. ಸಿ. ಚನ್ನಪ್ಪ, ಬಿ. ಡಿ. ರಾಮಯ್ಯ, ದಸ್ತಗೀರ್, ಜಗದೀಶ್, ಎನ್. ಶಿವಣ್ಣ ಮತ್ತು ನಾಗರತ್ನಯ್ಯ ರವರುಗಳು ಮಾತನಾಡಿ ಸೆಪ್ಟೆಂಬರ್ ಚಳುವಳಿಯ ಕುರಿತು ವಿವರವನ್ನು ನೀಡಿದರು. ಜಿಲ್ಲೆಯಾದ್ಯಂತ ಯಶಸ್ವಿಗೊಳಿಸಲು ಕರೆ ನೀಡಿದರು.

ಕಾ|| ರಾಜೇಂದ್ರ ಸಂಗಡಿಗರ ಕ್ರಾಂತಿ ಗೀತೆಯೊಂದಿಗೆ ಪ್ರಾರಂಭವಾದ ಸಮಾವೇಶವನ್ನು ಕಾ|| ಟಿ. ಕೆ. ಗೋವಿಂದ ರಾಜುರವರು ಸ್ವಾಗತಿಸಿದರು.

ರೈತ ಚಳುವಳಿ ಬೆಂಬಲಿಸಿ ಬೀಡಿ ಕಾರ್ಮಿಕರ ಸಂಘ, ಸಿ.ಐ.ಟಿ.ಯು. ಆಟೋ ಸಂಘ, ವಿದ್ಯಾರ್ಥಿ-ಯುವ ಸಂಘಟನೆಗಳ ನಾಯಕರು ಮಾತನಾಡಿದರು.

ಸರ್ಕಾರದ ಜಮೀನು ಒತ್ತುವರಿ ಮತ್ತು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಪ್ಲಾಂಟರ್‌ಗಳು ಶ್ರೀಮಂತ ರೈತರಿಂದ ಭೂಮಿ ಬಿಡಿಸಿ ಭೂಮಿ ಇಲ್ಲದ ಬಡ ರೈತರಿಗೆ ಹರಿಜನ-ಗಿರಿಜನರಿಗೆ ಭೂಮಿ ಹಂಚಬೇಕು ಸಾಗುವಳಿ ಮಾಡುತ್ತಿರುವ ರೈತರ ಭೂಮಿ ಖಾಯಂಗೊಳಿಸಿ ಹಕ್ಕು ಪತ್ರ ನೀಡಬೇಕು ಎಂಬ ನಿರ್ಣಯವನ್ನು ಕಾ|| ಹೆಚ್. ಸಿ. ಚನ್ನಪ್ಪ ನವರು ಮಂಡಿಸಿದರು.

ಪಾವಗಡ ತಾಲೋಕಿನ ನಿಡಗಲ್ಲು ಹೋಬಳಿ ಕೋಟಗುಡ್ಡ ಗ್ರಾಮದ ಕೊರಚರ ರಾಮಯ್ಯನೆಂಬ ದಲಿತನನ್ನು ಮಂಡಲ ಪಂಚಾಯಿತಿ ಪ್ರಧಾನ ಮತ್ತಿತರರ ದೌರ್ಜನ್ಯಕ್ಕೆ ಒಳಗಾಗಿ ಪೋಲಿಸರ ಸುಳ್ಳು ದೂರಿನ ಮೇಲೆ ಬಂಧಿಸಲ್ಪಟ್ಟು ದುರ್ಮರಣಕ್ಕೀಡಾದ ಅಮಾನುಷ ಕೃತ್ಯ ಖಂಡಿಸಿ ವಿಚಾರಣೆ ನಡೆಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಕಾ|| ಟಿ. ಕೆ. ಗೋವಿಂದರಾಜು ಮಂಡಿಸಿದರು.

ಜಿಲ್ಲೆಯ ವಿವಿಧ ತಾಲ್ಲೋಕು ಕೇಂದ್ರಗಳಲ್ಲಿ ಸತ್ಯಾಗ್ರಹ-ಪಿಕೆಟಿಂಗ್ ನಡೆಸಲು ನಿರ್ಧರಿಸಿವೆ. ಸೆಪ್ಟೆಂಬರ್ 1 ರಂದು ಗುಬ್ಬಿ, ಕುಣಿಗಲ್, ಚಿಕ್ಕನಾಯಕನಹಳ್ಳಿ 2 ರಂದು ಪಾವಗಡ, ತುರುವೇಕೆರೆ, ಗುಬ್ಬಿ, 3 ರಂದು ತಿಪಟೂರು, ಪಾವಗಡ 5, ತುಮಕೂರು 6 ರಂದು ಶಿರಾಗಳಲ್ಲಿ ಪಿಕೆಟಿಂಗ್ ಚಳುವಳಿ ನಡೆಸಲಾಗುವುದೆಂದು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ವಿಧಾನಸೌಧದ ಮುಂದೆ ಸವದತ್ತಿ ರೈತರ ಧರಣಿ

ಆಗಸ್ಟ್ 20 ರಂದು ನಡೆದ ಸವದತ್ತಿ ತಾಲ್ಲೋಕು ರೈತ ಸಂಘದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಸೆಪ್ಟೆಂಬರ್ ಚಳುವಳಿ ಕುರಿತು ಚರ್ಚಿಸಿತು. ಸೆಪ್ಟೆಂಬರ್ 1 ರಿಂದ 3 ರವರೆಗೆ ಸವದತ್ತಿ ತಾಲ್ಲೋಕು ಕಛೇರಿ ಮುಂದೆ ಧರಣಿಗಳಲ್ಲಿ ಕ್ರಮವಾಗಿ ಮಲ್ಲೂರ, ಮುದವಳ್ಳಿ, ಮುದ್ಲೂರುಗಳ ರೈತರು ಭಾಗವಹಿಸಲಿದ್ದಾರೆ. 5 ರಿಂದ 7 ರವರೆಗೆ ಸವದತ್ತಿಯ ಪ್ರವಾಸಿಮಂದಿರ ಮುನವಳ್ಳಿ, ಹೂಲಿಕಟ್ಟಿ ಕ್ರಾಸ್, ದಾಂಬಾದ್, ಗೋಕಾಕ್, ರಾಮದುರ್ಗ ರಸ್ತೆಗಳನ್ನು ಬಂದ್ ಮಾಡಲಾಗುವುದು. ಸೆಪ್ಟೆಂಬರ್ 8 ರಿಂದ 10 ರವರೆಗೆ ಸೌದತ್ತಿ ತಾಲ್ಲೋಕು ಕಛೇರಿ ಪಿಕೆಟಿಂಗ್ ರೈತರು ಸಾಗುವಳಿ ಮಾಡುವ ಭೂಮಿಯಲ್ಲಿ ಅರಣ್ಯ ಇಲಾಖೆ ಬೆಳೆಸಿರುವ ನೀಲಗಿರಿ ಸಸಿಯನ್ನು ಕೀಳುವುದು ಸೆಪ್ಟೆಂಬರ್ 15 ರಂದು ರಾಜ್ಯದ ರಾಜಧಾನಿ ಬೆಂಗಳೂರಿಗೆ ತೆರಳಿ ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹ ನಡೆಸುವುದೆಂದು ತೀರ್ಮಾನಿಸಿದೆ.

ಈ ಚಳುವಳಿ ನಂತರ ಜಿಲ್ಲೆಯ ರೈತರ ಸಮಾವೇಶವೊಂದನ್ನು ಸಂಘಟಿಸಲು ನಿರ್ಧರಿಸಲಾಗಿದೆ ಎಂದು ಅಧ್ಯಕ್ಷ ಕಾ|| ಮುನಗೋಳಿ ಸಹಕಾರ್ಯದರ್ಶಿಗಳಾದ ತೊರಗಲ್ಲ, ಶಂಭು ಸೊನ್ನದ, ಎಲ್.ಎಸ್ ನಾಯಕ್‌ರವರು ತಿಳಿಸಿದ್ದಾರೆ.

ಬಿಜಾಪುರ

ಸೆಪ್ಟೆಂಬರ್ 1 ರಿಂದ 3ರ ವರೆವಿಗೆ ಜಿಲ್ಲಾ ತಾಲ್ಲೋಕು ಕಛೇರಿಗಳ ಎದುರು ಧರಣಿ ಸತ್ಯಾಗ್ರಹ ನಡೆಸಲಾಗುವುದು. ಜಿಲ್ಲೆ ವಿವಿಧ ತಾಲ್ಲೋಕುಗಳಲ್ಲಿ ಸೆಪ್ಟೆಂಬರ್ 5 ರಿಂದ 10 ರ ವರೆವಿಗೆ ರಸ್ತೆ ರೋಖೋ, ಕಛೇರಿ ಘೇರಾವೋ ಹಾಗು ಜೈಲು ತುಂಬುವ ಚಳುವಳಿಯನ್ನು ನಡೆಸಲಾಗುವುದು. ಸೆಪ್ಟೆಂಬರ್ 5 ರಿಂದ ಕ್ರಮವಾಗಿ ಬಸವನ ಬಾಗೇವಾಡಿ, ಇಂಡಿ, ಸಿಂದಗಿ, ಜಮಖಂಡಿ, ಬೀಳಗಿ, ಬಿಜಾಪುರಗಳಲ್ಲಿ ಈ ಚಳುವಳಿಯನ್ನು ಯಶಸ್ವಿಗೊಳಿಸಲು ಭರದಿಂದ ಸಿದ್ಧತೆಗಳು ನಡೆಯುತ್ತಿರುವುದಾಗಿ ರೈತಸಂಘ, ಕೃಷಿ ಕೂಲಿಗಾರರ ಸಂಘ, ಡಿ.ವೈ.ಎಫ್.ಐ., ಎಸ್.ಎಫ್.ಐ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳು ಜಂಟಿಯಾಗಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿವೆ.

ಸಿ. ಐ. ಟಿ. ಯು. ಸುದ್ದಿಗಳು

ಐಕ್ಯ ಹೋರಾಟಕ್ಕೆ ಹೆಂಚು ಕಾರ್ಮಿಕ ಸಮಾವೇಶದ ಕರೆ

ಉತ್ತರ ಕನ್ನಡ ಜಿಲ್ಲಾ ಕಾರ್ಮಿಕರ ಸಮಾವೇಶ ಆಗಸ್ಟ್ 22 ರಂದು ಅಂಕೋಲದ ಸಮಾಜ ಮಂದಿರದಲ್ಲಿ ಕಾ|| ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು.

ಸಮಾವೇಶವನ್ನುದ್ದೇಶಿಸಿ ಕಾ|| ಎಂ. ಎಸ್. ಧಾರೇಶ್ವರ್, ಎಸ್. ಎಫ್. ಐ. ಮುಖಂಡ ಶಾಂತರಾಮ ನಾಯಕ್, ಸಿ. ನಾರಾಯಣ, ಹರೀಶ್‌ನಾಯ್ಕ. ಎಸ್. ವಿ. ಪಿಕಳೆಯವರುಗಳು ಮಾತನಾಡಿ ಹಂಚಿನ ಕಾರ್ಮಿಕರು ಐಕ್ಯವಾಗಿ ಹೋರಾಟವನ್ನು ನಡೆಸಬೇಕೆಂದು ಕರೆ ನೀಡಿದರು.

ಕನಿಷ್ಠ ಕೂಲಿ ಹಾಗೂ ಬೆಲೆ ಏರಿಕೆಗೆ ತಕ್ಕಂತೆ ತುಟ್ಟಿಭತ್ಯೆಗಾಗಿ ನಡೆದ ರಾಜ್ಯ ಮಟ್ಟದ ಹೋರಾಟ ದ. ಕ. ಜಿಲ್ಲೆಯ 7 ಸಾವಿರ ಹಂಚು ಕಾರ್ಮಿಕರ ಹೋರಾಟದ ಕುರಿತು ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕಾ|| ಕೆ. ಶಂಕರ್‌ರವರು ಮಾತನಾಡಿದರು.

ತುಟ್ಟಿಭತ್ಯೆ ಪಡೆಯಲು ಹಾಗೂ ಕೋರ್ಟಿನ ಆಜ್ಞೆಯಂತೆ ಕಡಿಮೆ ಇರುವ ಮೂಲ ವೇತನವನ್ನು ಭರ್ತಿ ಮಾಡಬೇಕೆಂದು 1987 ಮಾರ್ಚ್ 13 ರಿಂದ ಈವರೆಗಿನ ಬಾಕಿಯನ್ನು ಮಾಲೀಕರು ಕೊಡಬೇಕೆಂದು ಈ ಕುರಿತು ಅಧಿಕಾರಿಗಳು ಗಮನ ಹರಿಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು.

ಉ. ಕ. ಜಿಲ್ಲೆಯ ಸಂಚಾಲಕರಾಗಿ ಕಾ||ಹರೀಶ್‌ನಾಯ್ಕ ಸಹಸಂಚಾಲಕರಾಗಿ ಕಾ||ಬೀಸಣ್ಣ, ವಿನಾಯಕರನ್ನೊಳಗೊಂಡ 19 ಮಂದಿ ಸಮಿತಿಯನ್ನು ಸಮಾವೇಶ ಆಯ್ಕೆ ಮಾಡಿತು.

ಪ್ಲೈವುಡ್ ವರ್ಕರ್ಸ್ ಯೂನಿಯನ್ ಮಹಾಸಭೆ

ದೇಶ ಇಂದು ಎದುರಿಸುತ್ತಿರುವ ಗಂಭೀರ ಪರಿಸ್ಥಿತಿ ಮನಗಂಡು ರಾಜೀವ್ ಗಾಂಧಿ ಜನವಿರೋಧಿ ಭ್ರಷ್ಟ ಸರ್ಕಾರಕ್ಕೆ ಎದುರಾಗಿ ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಪರ್ಯಾಯವನ್ನು ಕಟ್ಟಿ ಬೆಳೆಸುವಲ್ಲಿ ಪ್ಲೈವುಡ್ ಕಾರ್ಮಿಕರು ಸಕ್ರಿಯವಾಗಿ ಪಾಲ್ಗೊಳ್ಳಲು ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಕಾ|| ಕೆ. ಮೊಸಬ್ಬರವರು ಕರೆ ನೀಡಿದರು. ಅವರು ಯೂನಿಯನ್ನಿನ 7 ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸಂಘದ ಪ್ರ. ಕಾರ್ಯದರ್ಶಿ ಕಾ|| ಕೆ. ಶಂಕರ್‌ರವರು ವರದಿ ಹಾಗೂ ಲೆಕ್ಕಪತ್ರ ಮಂಡಿಸಿದರು. ರೈತ ಸಂಘದ ಕಾ|| ಗೊಡ್ವಿನ್, ಸಿ.ಪಿ.ಐ.(ಎಂ) ಉಡುಪಿ ತಾಲೋಕು ಸಮಿತಿ ಕಾರ್ಯದರ್ಶಿ ಕಾ|| ದೇವಿಡ್‌ಕರ್ಕಡ, ಯೂನಿಯನ್ ಕೋಶಾಧಿಕಾರಿ ಕಾ|| ಸಿ. ನಾರಾಯಣ, ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡರವರು ಶುಭ ಕೋರಿ ಮಾತನಾಡಿ ಪ್ಲೈವುಡ್ ಕಾರ್ಮಿಕರು ರಾಜ್ಯ ಮಟ್ಟದಲ್ಲಿ ನಡೆಸಿದ ಹೋರಾಟಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ರೈತ-ಕೃಷಿ ಕೂಲಿಗಾರರ ಹೋರಾಟ ಬೆಂಬಲಿಸುವ, ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ವಿರೋಧಿಸುವ ಪ್ಲೈವುಡ್ ಕಾರ್ಮಿಕರಿಗೆ ಇ.ಎಸ್.ಐ. ಅವ್ಯವಸ್ಥೆ ಸರಿಪಡಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸಭೆ-ಅಂಗೀಕರಿಸಿತು.

ನೂತನ ಸಾಲಿಗೆ ಕಾ|| ಕೆ. ಶಂಕರ್ (ಅಧ್ಯಕ್ಷ) ಕೆ. ಕೆ.ಫ್ರೋತಸ್(ಉಪಾಧ್ಯಕ್ಷ) ಎಚ್. ವಿಠಲ್ (ಕಾರ್ಯದರ್ಶಿ) ಎಸ್. ಶ್ರೀಧರನ್ (ಜತೆಕಾರ್ಯದರ್ಶಿ) ಶಂಕರ ಶೆಟ್ಟಿಗಾರ (ಖಜಾಂಚಿ) ರವರನ್ನು ಆಯ್ಕೆ ಮಾಡಲಾಯಿತು. 10 ಮಂದಿ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಟೂರಿಸ್ಟ್ ಚಾಲಕರ ಸಭೆ

ಟೂರಿಸ್ಟ್ ಚಾಲಕರು ಕಾರ್ಮಿಕ ವರ್ಗದ ಒಂದು ಅಂಗವಾಗಿದ್ದು ಸಮಾಜದ ಕುಂದು ಕೊರತೆಗಳ ಕುರಿತು ಪ್ರಜ್ಞಾವಂತರಾಗಿ ಸಮಾಜ ಬದಲಾವಣೆಗೆ ದುಡಿಯಬೇಕೆಂದು ಸಿ.ಐ.ಟಿ.ಯು ದ.ಕ. ಜಿಲ್ಲಾಧ್ಯಕ್ಷ ಕಾ|| ಕೆ. ಮೊಸಬ್ಬ ಕರೆ ನೀಡಿದ್ದಾರೆ.

ಅವರು ಆಗಸ್ಟ್ 25ರಂದು ಬಂಟ್ವಾಳದಲ್ಲಿ ನಡೆದ ಟೂರಿಸ್ಟ್ ಮತ್ತು ವ್ಯಾನ್ ಚಾಲಕರ ಮಹಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಕಾ|| ಬಿ. ವಾಸುಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮೋಟಾರ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾ|| ಪಿ. ಉಮೇಶ್ ಮುಖ್ಯ ಅತಿಥಿಗಳಾಗಿ ಮಾತನಾಡಿ ಟೂರಿಸ್ಟ್ ಚಾಲಕರ ಸೇವೆಯನ್ನು ಸರ್ಕಾರ ಪರಿಗಣಿಸಬೇಕೆಂದು ಒತ್ತಾಯಿಸಿದರು. ಕಾ||ಜೆ. ಕೃಷ್ಣಪ್ಪ (ಸಂಚಾಲಕ) ಇಬ್ರಾಹಿಂ ಮತ್ತು ಆನಂದ ಭಂಡಾರಿ (ಸಹ ಸಂಚಾಲಕರು) ಯರನ್ನೊಳಗೊಂಡ ಕಾರ್ಯಕಾರಿ ಸಮಿತಿ ಆರಿಸಲಾಯಿತು. ಸೆಪ್ಟೆಂಬರ್ ರೈತ ಚಳುವಳಿಗೆ ಬೆಂಬಲಿಸಿ ನಿರ್ಣಯ ಸ್ವೀಕರಿಸಲಾಯಿತು.

ಅಂಗನವಾಡಿ ಕಾರ್ಯಕರ್ತೆ ಮೇಲೆ ಅತ್ಯಾಚಾರ ಖಂಡಿಸಿ ರ‍್ಯಾಲಿ

ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೋಕು ಹಿಕ್ಕಣಗುತ್ತಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಕುಮಾರಿ ಲಲಿತಾ ವಠಾರರವರ ಮೇಲೆ ನಡೆದ ಅತ್ಯಾಚಾರ ಪ್ರತಿಭಟಿಸಿ ಬಾಗಲಕೋಟೆ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಕಾರ್ಯಕರ್ತೆಯರು ದೇವರ ಹಿಪ್ಪರಗಿಯಲ್ಲಿ ಜುಲೈ 30ರಂದು ಬೃಹತ್ ಮೆರವಣಿಗೆ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಭಾಗವಹಿಸಿತು. ಆಪಾದಿತರಿಗೆ ಉಗ್ರ ಶಿಕ್ಷೆಯಾಗಬೇಕೆಂದು ಒತ್ತಾಯಿಸಿ ಮಂಡಲ ಪ್ರಧಾನರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಈ ಸಭೆಯನ್ನುದ್ದೇಶಿಸಿ ಅಂಗನವಾಡಿ ಕಾರ್ಯಕರ್ತೆಯರ ಬಾಗಲಕೋಟೆ ಸಂಘದ ಅಧ್ಯಕ್ಷ ಎಚ್. ಜಿ. ದಾಸರ, ಪ್ರಧಾನ ಕಾರ್ಯದರ್ಶಿ ಎಂ.ಡಿ. ಖಿಲಾಸಿ ಕಾರ್ಯಕರ್ತೆ ಶ್ರೀಮತಿ ಸರೋಜಿನಿ ಇಳಗೇರ ಪ್ರಾಂತ ರೈತ ಸಂಘದ ಶ್ರೀ ಮಾಳಸಿದ್ದ. ನಾಯಿಕೊಡಿಯವರುಗಳು ಮಾತನಾಡಿದರು.

ನೆಲ್ಸನ್ ಮಾಂಡೆಲಾ ಬಿಡುಗಡೆಗೆ ಒತ್ತಾಯಿಸಿ ರ‍್ಯಾಲಿ

ಕರ್ನಾಟಕ ರಾಜ್ಯ ಶಾಂತಿ ಮತ್ತು ಸೌಹಾರ್ದತಾ ಸಮಿತಿ ಕರೆಯಂತೆ ಬಿಜಾಪುರ ಜಿಲ್ಲೆ ಬಾಗಲಕೋಟೆ ಸಾಮಾಜಿಕ ಸಾಂಸ್ಕೃತಿಕ ವೇದಿಕೆ (ಫೋಕಸ್) ಆಗಸ್ಟ್ 15 ರಂದ ದ. ಆಫ್ರಿಕಾ ಜನತೆಯ ನಾಯಕ ನೆಲ್ಸನ್ ಮಾಂಡೆಲಾರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ನಗರದಲ್ಲಿ ಮೆರವಣಿಗೆ ನಡೆಸಿ ವಲ್ಲಬಾಯಿ ಚೌಕದಲ್ಲಿ ಸಭೆ ನಡೆಸಲಾಯಿತು.

ಕಾರ್ಮಿಕ ನಾಯಕರಾದ ಕಾ|| ಡಿ. ಎಂ. ಖಿಲಾಸಿ, ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಎಚ್.ಜಿ. ದಾಸರ, ಶ್ರೀ ಯು. ವಿ. ಜೆರೆ, ವಿದ್ಯಾರ್ಥಿ ನಾಯಕ ಬೂಸಾರೆಯವರುಗಳು ಉಪಸ್ಥಿತರಿದ್ದರು. ಡಿ. ಎಂ. ಖಿಲಾಸಿಯವರು ಮಾತನಾಡಿ ನೆಲ್ಸನ್ ಮಾಂಡೆಲಾರ ಜೀವನ ಚರಿತ್ರೆ ಕುರಿತು ವಿವರಿಸಿ ಮಾಂಡೆಲಾರನ್ನು ಬೇಷರತ್ತಾಗಿ ಬಿಡುಗಡೆ ಮಾಡುವಂತೆ ದ. ಆಫ್ರಿಕಾದ ಬೋಥ ಸರ್ಕಾರವನ್ನು ಒತ್ತಾಯಿಸಿದರು. ವೇದಿಕೆಯ ಗೋಪಾಲ ಪರ್ವತಿಯವರು ಮಾತನಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ರ‍್ಯಾಲಿ ಸಭೆಯಲ್ಲಿ ಭಾಗವಹಿಸಿದ್ದರು.

ಬೀಡಿ ಯೂನಿಯನ್ ಸಭೆಗಳು

ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನ್ ಆಶ್ರಯದಲ್ಲಿ ಆಗಸ್ಟ್ 3ರಂದು ಗಂಜಿ ಮಠ ಮೂರಾ ಹಾಗೂ ಗಂಜಿ ಮಠ ಸೈಟ್‌ಗಳಲ್ಲಿ ಸಭೆಗಳನ್ನು ನಡೆಸಲಾಯಿತು. ದ.ಕ. ಜಿಲ್ಲೆ ಬೀಡಿ ವರ್ಕರ್ಸ್ ಫೆಡರೇಷನ್ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಬೀಡಿ ಮಜೂರರು ತಮ್ಮ ಶೋಷಣೆ ವಿರುದ್ಧ ವಿಶಾಲ ಸಂಘಟನೆ ಬೆಳೆಸಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಎರಡು ಸಭೆಗಳಲ್ಲಿ ಕಾ|| ಶ್ರೀನಿವಾಸ್ ಅಧ್ಯಕ್ಷತೆ ವಹಿಸಿ ಎಂ. ಹೊನ್ನಯ್ಯ ಸ್ವಾಗತಿಸಿದರು.

ಮಳಲಿ ಶಾಲಾ ವಠಾರದಲ್ಲಿ ಆಗಸ್ಟ್ 21 ರಂದು ನಡೆದ ಸಭೆಯಲ್ಲಿ ಕಾ|| ಕೆ. ಗಂಗಯ್ಯ ಅಮೀನ್ ಮಾತನಾಡಿ ಅವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿದರು. ಕಾ|| ಎಂ. ಹರಿಚಂದ್ರ ಧನ್ಯವಾದವಿತ್ತರು.

ಇರಾನ್-ಇರಾಕ್ ಯುದ್ಧ ವಿರಾಮ

ಆಗಸ್ಟ 20, 1988 ಬೆಳಗ್ಗೆ 6.30. ಇರಾನ್-ಇರಾಕ್ ಗಡಿಯ ಎಲ್ಲಾ ಪ್ರಮುಖ ಯುದ್ಧಕ್ಷೇತ್ರಗಳಲ್ಲಿಗುಂಡುಹಾರಾಟದ ಆರ್ಭಟ ನಿಂತು ವಿಶ್ವಸಂಸ್ಥೆ ಮಧ್ಯಸ್ಥಿಕೆಯ ಯುದ್ಧ ವಿರಾಮ ಜ್ಯಾರಿಗೆ ಬಂತು. ಇದು ಕೆಲವು ದಿನಗಳ ಮೊದಲೇ ಭಾರತವೂ ಸೇರಿದಂತೆ ಹಲವಾರು ದೇಶಗಳ ಸೈನಿಕರಿಂದ ಕೂಡಿದ 350 ಸದಸ್ಯರ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ ಯುದ್ಧವಿರಾಮದ ನಿರೀಕ್ಷಣೆಗೆ ಸಿದ್ಧವಾಗಿ ನಿಂತಿತ್ತು.

ಇಲ್ಲಿ ವಿಡಂಬನೆಯ ಅಂಶವೊಂದಿದೆ. ಸೆಪ್ಟೆಂಬರ್ 22, 1980 ರಂದು ಈ ಯುದ್ಧ ಆರಂಭವಾದಾಗ ಇರಾನ್-ಇರಾಕ್‌ಗಳ ಗಡಿರೇಖೆಯಲ್ಲಿ ಆರಂಭವಾಯಿತೋ, ಎಂಟು ವರ್ಷಗಳ ನಂತರ ಈಗ ವಿಶ್ವಸಂಸ್ಥೆಯ ಉಸ್ತುವಾರಿ ಪಡೆ ಅದೇ ಗಡಿರೇಖೆಯ ಅತ್ತ-ಇತ್ತ ಯುದ್ಧವಿರಾಮದ ನಿರೀಕ್ಷಣೆ ನಡೆಸುತ್ತಿದೆ. ಅಂದರೆ ಎಂಟು ವರ್ಷಗಳ ಅಪಾಯ ಕಷ್ಟನಷ್ಟಗಳ ನಂತರವೂ ಸ್ಥಿತಿಯಲ್ಲಿ ಕಿಂಚಿತ್ತೂ ಬದಲಾವಣೆ ಸಾಧ್ಯವಾಗಲಿಲ್ಲ.

ಈ ಯುದ್ಧದಲ್ಲಾದ ಕಷ್ಟ-ನಷ್ಟ ಅಪಾರವಷ್ಟೇ ಅಲ್ಲ, ಈ ಶತಮಾನದಲ್ಲೇ ಇಷ್ಟೊಂದು ವಿನಾಶ ಕಂಡ ಯುದ್ಧ ಬೇರೆ ಇಲ್ಲವಂತೆ. ಸುಮಾರು ಹತ್ತು ಲಕ್ಷ ಜನ ನಾಶವಾದರು. ಸುಮಾರು ಇಷ್ಟೇ ಇರಾನಿಯನ್ನರು, 3 ಲಕ್ಷ ಇರಾಕಿಗಳು ಅಂಗವಿಕಲರಾದರು. ನೂರಾರು ನಗರಗಳು, ಪಟ್ಟಣಗಳು ನೆಲಸಮವಾದವು. 500 ಶತಕೋಟಿ ಡಾಲರುಗಳಷ್ಟು ಆಸ್ತಿ ನಾಶವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಎರಡೂ ದೇಶಗಳು ಆರ್ಥಿಕ ದಾರಿದ್ರ್ಯ ಎದುರಿಸಬೇಕಾಗಿ ಬಂದಿದೆ.

ಇರಾನ್ ಮತ್ತು ಇರಾಕ್ ನಡುವೆ ಯುದ್ಧದ ಆರಂಭವನ್ನು ಈ ಶತಮಾನದ ಆದಿಭಾಗದಲ್ಲೇ ಕಾಣಬಹುದು. ಸಾಮ್ರಾಜ್ಯಶಾಹಿಗಳು ವಿಶ್ವವನ್ನು ತಮ್ಮ ವ್ಯಾಪಾರೀ ವಲಯಗಳನ್ನಾಗಿಸಲು ನಡೆಸಿದ ಪ್ರಯತ್ನದ ಭಾಗ ಇದಾಗಿತ್ತು. 1937 ರಲ್ಲಿ ಈಗ ವಿವಾದ ಮೂಲವಾಗಿರುವ ಶತ್-ಅಲ್ ಅರಬ್ ಜಲ ಮಾರ್ಗದ ಪೂರ್ವತಟ ಪ್ರದೇಶವನ್ನು ಇರಾಕ್‌ಗೆ ನೀಡಲಾಯಿತು. 1967 ರಲ್ಲಿ ಇರಾನ್ ಸಹ ಇರಾಕ್ ಪಡೆದ ಈ ಹಕ್ಕನ್ನು ರದ್ದು ಮಾಡಿದೆ. 1975 ರಲ್ಲಿ ಈ ಜಲ ಮಾರ್ಗದ ಮಧ್ಯರೇಖೆಯನ್ನು ಎರಡು ದೇಶಗಳ ನಡುವಿನ ಗಡಿಯಾಗಿ ಪರಿಗಣಿಸಬೇಕೆಂದು ಒಪ್ಪಂದವಾದರೂ ಇರಾನ್‌ನ ಶಹಾ ಇದಕ್ಕೆಂದೂ ಬದ್ಧವಾಗಿರಲಿಲ್ಲ. ಆಗಲೇ ಎರಡು ದೇಶಗಳ ನಡುವಿನ ಸಂಬಂಧ ಹದಗೆಡಲಾರಂಭಿಸಿತು.

1980ರ ಏಪ್ರಿಲ್‌ನಲ್ಲಿ ಇರಾನೀ ವಿದೇಶಾಂಗ ಮಂತ್ರಿ ಇರಾಕ್‌ನ ಬಾತಿಸ್ಟ್ ಸರ್ಕಾರವನ್ನು ಪದಚ್ಯುತಗೊಳಿಸಬೇಕೆಂದು ಕರೆ ನೀಡಿದರು. ಪ್ರತೀಕಾರವಾಗಿ ಇರಾಕ್ 30 ಸಾವಿರ ಇರಾನಿಗಳನ್ನು ಇರಾಕ್‌ನಿಂದ ಗಡೀಪಾರು ಮಾಡಿತು. ಜೂನ್ ತಿಂಗಳ ಗಡಿ ಕಲಹದ ನಂತರ ಪರಿಸ್ಥಿತಿ ಹದಗೆಟ್ಟಿತು. ಸೆಪ್ಟೆಂಬರ್ 22 ರಂದು ಇರಾಕೀ ಪಡೆಗಳು ಇರಾನೀ ಪ್ರದೇಶದೊಳಗೆ ಆಕ್ರಮಣ ನಡೆಸಿದವು. ಜೂನ್ 1982 ರ ಹೊತ್ತಿಗೆ ಇರಾನೀ ಪಡೆಗಳು ಇರಾಕೀ ಪಡೆಗಳನ್ನು ಮತ್ತೆ ಗಡಿಯತ್ತ ತಳ್ಳಿದವು. 1984ರ ಹೊತ್ತಿಗೆ ಇರಾನ್ ಇರಾಕಿನ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಸಮರ್ಥವಾಯಿತು.

ಬಹುಶಃ ಯುದ್ಧವನ್ನು ನಿಲ್ಲಿಸಿ ವಿಜಯದ ಲಾಭ ಪಡೆದು ಶಾಂತಿ ಸಂಧಾನ ನಡೆಸಲು ಇರಾನ್‌ಗೆ ಇದು ಅತ್ಯಂತ ಸೂಕ್ತ ಸಮಯವಾಗಿತ್ತು. ಆದರೆ ಇರಾನ್‌ನ ಖೊಮೇನಿ ಇರಾಕೀ ಪ್ರದೇಶಗಳತ್ತ ತನ್ನ ಸಾಮ್ರಾಜ್ಯ ವಿಸ್ತರಿಸಬಯಸಿದರು. ಬಹುಶಃ ಇರಾಕಿನ 60 ಶೇಕಡಾ ಶಿಯಾ ಮುಸ್ಲಿಮರು ತನ್ನ ಕರೆಗೆ ಓಗೊಟ್ಟು ಇರಾಕಿನ ಬಾತಿಸ್ಟ್ ಸರ್ಕಾರವನ್ನು ಉರುಳಿಸಿ ಅಲ್ಲಿಯೂ ಇಸ್ಲಾಮೀ ಗಣತಂತ್ರ ಸ್ಥಾಪಿಸಬಹುದೆಂದು ಅವರ ಲೆಕ್ಕಾಚಾರವಿದ್ದಿರಬೇಕು. ಆದರೆ ಅದು ತಲೆಕೆಳಗಾಯಿತು. ಅದೇ ರೀತಿ ಇರಾನ್‌ನ ಖುರ್ದಿಸ್ತಾನ್ ಪ್ರಾಂತ್ಯದ ಅರಬ್ ಬಹು ಸಂಖ್ಯಾತರು ಇರಾನಿನ ವಿರುದ್ಧ ದಂಗೆಯೇಳಬಹುದೆಂಬ ಇರಾಕೀ ಆಳರಸರ ನಿರೀಕ್ಷೆಯೂ ಫಲಿಸಲಿಲ್ಲ. ಯುದ್ಧ ಮುಂದುವರೆಯಿತು. ಈ ಘಟ್ಟದಲ್ಲೇ ಟ್ಯಾಂಕರ್ ಹಡಗು ಯುದ್ಧ ಆರಂಭವಾಯಿತು.

ಈ ಘಟ್ಟದಲ್ಲೇ ಅಮೇರಿಕ ತನ್ನ ಭಯಾನಕ ನಾವಿಕ ಪಡೆಯನ್ನು ಪರ್ಶಿಯಾ ಕೊಲ್ಲಿಗೆ ತಂದು ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳುವಂತಾಯಿತು. ಪರಸ್ಪರರ ಪ್ರದೇಶಗಳ ಆಕ್ರಮಣ, ನಗರಗಳ ಮೇಲೆ ಕ್ಷಿಪಣಿಗಳ, ಶೆಲ್‌ಗಳ ದಾಳಿ ಇತ್ಯಾದಿಗಳ ಮೂಲಕ ಯುದ್ಧ ಮುಂದುವರೆಯಿತು.

ಇಸ್ಲಾಮಿಕ್ ಕ್ರಾಂತಿಯ ನಂತರ ಭೂಸುಧಾರಣೆ, ರಾಷ್ಟ್ರೀಕರಣ ಇತ್ಯಾದಿಗಳನ್ನು ನಡೆಸಲು ಹಿಂಜರಿದು, ಖೊಮೇನಿಯ ಮತ ಸಿದ್ಧಾಂತ ಆಧಾರಿತ ಪ್ರಭುತ್ವ ಉಳ್ಳವರ ಪಕ್ಷವನ್ನೇ ವಹಿಸಿದ್ದರಿಂದ ಇರಾನಿನಲ್ಲಿ ಪರಿಸ್ಥಿತಿ ಹದಗೆಡಲಾರಂಭಿಸಿತು. ಖೊಮೇನಿ ತಾನು ಬದುಕಿರುವವರೆಗೆ ಶಾಂತಿ ಸಾಧ್ಯವೇ ಇಲ್ಲವೆಂದರು. ಇರಾಕ್‌ನ ಸದ್ದಾಮ್ ಹುಸೇನ್ ಕೂಡಾ ಮುಖಾಮುಖಿ ಮಾತುಕತೆಯ ಶರತ್ತಿಲ್ಲದೆ ಯುದ್ಧ ನಿಲ್ಲಿಸಲು ಸಾಧ್ಯವಿಲ್ಲ ಎಂದರು.

1987 ರಲ್ಲಿ ವಿಶ್ವಸಂಸ್ಥೆ ಒಂದು ಠರಾವು ಅಂಗೀಕರಿಸಿ(ಠರಾವು ಸಂ. 598) ಕಲಹ ನಿಲ್ಲಿಸಿ ಪಡೆಗಳನ್ನು ಅಂತರ್‍ರಾಷ್ಟ್ರೀಯ ಗಡಿಗಳಿಗೆ ವಾಪಾಸು ಪಡೆಯಬೇಕೆಂದು ಕರೆನೀಡಿತು. ಖೊಮೇನಿ ಯುದ್ಧ ಮುಂದುವರೆಸುವ ಪಟ್ಟು ಹಿಡಿದರೂ, ವಯಸ್ಸು ಹಾಗೂ ಅನಾರೋಗ್ಯದಿಂದಾಗಿ ಆತನ ಪ್ರಭಾವ ಇಳಿಮುಖವಾಗುತ್ತಾ ಬರುತ್ತಿದ್ದಾಗ ಇಂದಿನ ಮುಖಂಡತ್ವ ವಿಶ್ವಸಂಸ್ಥೆಯ ಠರಾವನ್ನು ಸ್ವೀಕರಿಸುವ ಬಗ್ಗೆ ಯೋಚಿಸಲಾರಂಭಿಸಿತು. ಅತ್ತ ಇರಾಕ್‌ನ ಸದ್ದಾಂ ಹುಸೇನ್ ಕೂಡಾ ಮುಖಾಮುಖಿ ಮಾತುಕತೆಯ ಪೂರ್ವ ಶರತ್ತನ್ನು ಬಿಡಲೊಪ್ಪಿದರು. ಇದರ ಫಲವಾಗಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಯವರ ಮಧ್ಯಸ್ಥಿಕೆಯಲ್ಲಿ ಯುದ್ಧ ವಿರಾಮದ ಮಾತುಕತೆ ಸಫಲವಾಗುವಂತಾಯಿತು. ಈಗ ಮುಖಾಮುಖಿ ಮಾತುಕತೆಗಳೂ ಆರಂಭವಾಗಿವೆ.

ಯುದ್ಧದಿಂದ ಎರಡೂ ದೇಶಗಳ ಜನ ಎಷ್ಟು ಬೇಸತ್ತಿದ್ದರೆಂಬುದನ್ನು ಯುದ್ಧ ವಿರಾಮದ ಬಗ್ಗೆ ಒಪ್ಪಂದವಾದಾಗ ಎರಡೂ ದೇಶಗಳಲ್ಲಿ ಕಂಡುಬಂದ ಅಮಿತೋತ್ಸಾಹವೇ ಸಾಕ್ಷಿ.

ಆದರೂ ಸಮಸ್ಯೆ ಇನ್ನೂ ಪೂರ್ಣ ಪರಿಹಾರವಾಗಿಲ್ಲ. ಈ ಸಮಸ್ಯೆ ಸೃಷ್ಟಿಸಿದ ಸಾಮ್ರಾಜ್ಯಶಾಹಿಯ ಹೊಸ ಪಿತೂರಿಗಳ ಬಗ್ಗೆಯೂ ಜಾಗರೂಕರಾಗಿರುವುದು ಅಗತ್ಯ. ಇರಾನ್-ಇರಾಕ್ ಯುದ್ಧ ಈ ಸಾಮ್ರಾಜ್ಯಶಾಹಿಗಳಿಗೆ ಹೇಗೆ ವರಪ್ರಸಾದವಾಗಿತ್ತೆಂಬುದನ್ನು ಇರಾನ್ ಗೇಟ್ ಹಗರಣ ತೋರಿಸಿಕೊಟ್ಟಿದೆ. ಈಗ ಯುದ್ಧ ಮುಗಿಯುವ ಲಕ್ಷಣ ಕಾಣುತ್ತಿರುವಾಗಲೂ ತಮ್ಮ ಕೊಳ್ಳೆಗೆ ಹೊಸ ಅವಕಾಶಕ್ಕಾಗಿ ಸಾಮ್ರಾಜ್ಯಶಾಹಿಗಳು ಕಾಯುತ್ತಿದ್ದಾರೆ. ತಮ್ಮ ಆರ್ಥಿಕ ವ್ಯವಸ್ಥೆಗಳನ್ನು ಸುಧಾರಿಸಿಕೊಳ್ಳಲು ಇರಾನಿಗೆ 70 ಶತಕೋಟಿ ಡಾಲರುಗಳ ಹಾಗೂ ಇರಾಕಿಗೆ 30 ಶತಕೋಟಿ ಡಾಲರುಗಳ ಅಗತ್ಯವಿದೆಯೆಂಬ ಅಂದಾಜು ಸಾಮ್ರಾಜ್ಯಶಾಹಿಗಳ ಬಾಯಿಯಲ್ಲಿ ನೀರೂರಿಸುತ್ತಿದೆ. ಯುದ್ಧವಾಗಲಿ, ಶಾಂತಿಯಾಗಲಿ ಸಾಮ್ರಾಜ್ಯಶಾಹಿಗೆ ಬೇಕಾಗಿರುವುದು ಆರ್ಥಿಕ ಲಾಭ.

ಕಾ॥ ಎಲ್. ಡಬ್ಲ್ಯೂ. ಪಂಡಿತಾಗೆ ಶ್ರದ್ಧಾಂಜಲಿ

ಇತ್ತೀಚೆಗೆ ಸಭೆ ಸೇರಿದ್ದ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಸಿಲೋನ್ ಕಾರ್ಮಿಕ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕಾ॥ ಎಲ್ ಡಬ್ಲ್ಯೂ. ಪಂಡಿತಾರವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಆತ ಶ್ರೀಲಂಕಾ ಹಾಗೂ ತಮಿಳು ಜನತೆಯ ಒಗ್ಗಟ್ಟಿಗಾಗಿ ದುಡಿದ ಹಾಗೂ ಮಡಿದ ಧೀರ ಮುಖಂಡ ಎಂದು ಶ್ರದ್ಧಾಂಜಲಿ ಅರ್ಪಿಸಿತು. ಕಾಂ. ಪಂಡಿತಾರವರನ್ನು ಸಂಕುಚಿತವಾದೀ ಶಕ್ತಿಗಳ ಏಜೆಂಟರು ಜೂನ್ 26 ರಂದು ಕೊಲೆಗೈದಿದ್ದರು.

ಶಿವಸೇನೆ-ಕಾಂಗ್ರೆ-ಬಿ.ಜೆ.ಪಿ. ಕೂಟದ ಅತ್ಯಾಚಾರ

ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ಸಾವಲಿ, ಖಿಚಗಾಂವ್, ಮೌಸಾ, ಉಸಗಾಂವ್ ಮೊದಲಾದೆಡೆ ಶಿವಸೇನೆ, ಕಾಂಗ್ರೆ ಮತ್ತು ಬಿ.ಜೆ.ಪಿ. ಯ ಧರ್ಮಾಂಧರು ಹರಿಜನರ ಮೇಲೆ ಸತತ ಅತ್ಯಾಚಾರ ನಡೆಸುತ್ತಿರುವ ಸಂಗತಿ ಇತ್ತೀಚೆಗೆ ಮುಂಬೈಯ "ಧರ್ಮಾಂಧತಾ ವಿರೋಧಿ ಮಹಿಳಾ ಕೃತಿ ಸಮಿತಿ"ಯ ಮೂಲಕ ಬೆಳಕಿಗೆ ಬಂತು.

ಡಾ. ಅಂಬೇಡ್ಕರ್‌ರ "ಹಿಂದೂ ಧರ್ಮದ ಒಗಟುಗಳು" ಕೃತಿಯ ಮೇಲಿನ ವಿವಾದ ಆರಂಭವಾದಂದಿನಿಂದ ಈ ಪ್ರದೇಶದಲ್ಲಿ ಶಿವಸೇನೆ ದಲಿತರ (ನವ ಬೌದ್ಧರ) ವಿರುದ್ಧ ದ್ವೇಷ ಕೆರಳಿಸಿಕೊಳ್ಳುವ ಯೋಜನೆ ನಡೆಸುತ್ತಿತ್ತು. ಮಾರ್ಚ್‌ನಲ್ಲಿ ಈ ಪ್ರದೇಶದಲ್ಲಿ ಮಾಡಿದ ಭಾಷಣವೊಂದರಲ್ಲಿ ಮುಂಬೈಯ ಮಾಜೀ ಮೇಯರ್, ಶಿವಸೇನೆಯ ಮುಖಂಡ ಛಗನ್ ಭುಜಬಲ್ "ಈ ಮಹಾರರು ಬಹಳ ಕೊಬ್ಬಿಹೋಗಿದ್ದಾರೆ. ಅವರನ್ನು ಲಂಕೆಗೆ ಓಡಿಸಿ, ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಿ" ಎಂದು ವಿಷ ಕಾರಿದ್ದರು.

ಈ ವರ್ಷದ ಅಂಬೇಡ್ಕರ್ ಜಯಂತಿಯ ದಿನದಿಂದ ಈ ಪ್ರದೇಶದ ಹಲವು ಹಳ್ಳಿಗಳಲ್ಲಿ ನವಬೌದ್ಧರ ಮೇಲೆ ಪೂರ್ವ ಯೋಜಿತ ಅಮಾನುಷ ಹಲ್ಲೆಗಳು ಆರಂಭವಾದವು. ಉಚ್ಚ ಜಾತಿಯ ಮಹಿಳೆಯರು ನವಬೌದ್ಧ ಮಹಾರ್ ಮಹಿಳೆಯರನ್ನು ಬಲಾತ್ಕಾರದಿಂದ ನಗ್ನಗೊಳಿಸಿ ಹಳ್ಳಿಯಲ್ಲಿ ಮೆರವಣಿಗೆ ನಡೆಸುವಂತೆ ಮಾಡಿದರು. ಒಂದು ರೀತಿಯ ಸಾಮಾಜಿಕ ಬಹಿಷ್ಕಾರವನ್ನೂ ಹಾಕಲಾಯಿತು. ದಲಿತ ಹುಡುಗರನ್ನು ಸುಳ್ಳು ಆಪಾದನೆಗಳ ಮೇಲೆ ಬಂಧಿಸಲಾಯಿತು. ಬೋಪಿರ್ ಮತ್ತಿತರ ಕೆಳಜಾತಿಗಳ ಹಾಗೂ ಬುಡಕಟ್ಟು ಜನಗಳನ್ನು ಕೃಷಿ ಕಾರ್ಮಿಕರ ಬೇಡಿಕೆಗಳ ಹೆಸರಿನಲ್ಲಿ ಮಹಾರ್ ದಲಿತರ ವಿರುದ್ಧ ಎತ್ತಿ ಕಟ್ಟಲಾಯಿತು.

ದಲಿತ ಜನ ಅಲ್ಲಿ ತೀವ್ರ ಭಯದ ನೆರಳಲ್ಲಿ ವಾಸಿಸುತ್ತಿದ್ದಾರೆ. ಯಾಕೆಂದರೆ ಈ ಹಲ್ಲೆಗಳ ಪೂರ್ವ ಸೂಚನೆಯಿದ್ದರೂ ಪೋಲಿಸರು ಮತ್ತು ಆಡಳಿತ ಉಚ್ಚ ಜಾತಿಗಳ ಪಕ್ಷವನ್ನೇ ವಹಿಸುತ್ತಿವೆ.

ಮುಂಬೈಯ ಧರ್ಮಾಂಧತಾ ವಿರೋಧಿ ಸಮಿತಿಯ ನಿಯೋಗದ ಭೇಟಿ ಮತ್ತೆ ಅಲ್ಲಿ ಧೈರ್ಯ ಮೂಡಿಸಿದೆ.

ಪ್ಯಾಲೆಸ್ಟೈನ್ ಬೇಡಿಕೆಗೆ ಜೋರ್ಡಾನ್ ಮನ್ನಣೆ

ಪಶ್ಚಿಮ ತಟದ ಮೇಲಿನ ತನ್ನ ದಾವೆಯನ್ನು ಪ್ಯಾಲೆಸ್ಟೈನಿಯನ್ನರಿಗೆ ಬಿಟ್ಟು ಕೊಡುವುದಾಗಿ ಜೋರ್ಡಾನ್‌ನ ದೊರೆ ಹುಸೇನ್ ಘೋಷಿಸಿದ್ದಾರೆ. ಈ ಮೂಲಕ ಪ್ಯಾಲೆಸ್ಟೈನಿಯನ್ನರಿಗೆ ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸುವ, ತಮ್ಮ ಪ್ರಭುತ್ವವನ್ನು ಪಡೆಯುವ ಹಕ್ಕು ಇದೆಯೆಂಬುದನ್ನು ಈಗ ಜೋರ್ಡಾನ್ ಒಪ್ಪಿಕೊಂಡಂತಾಗಿದೆ. ಇದನ್ನು ಪ್ಯಾಲೆಸ್ಟೈನ್ ವಿಮೋಚನಾ ರಂಗ ಸ್ವಾಗತಿಸಿದೆ. ಕಳೆದ ಒಂಭತ್ತು ತಿಂಗಳಿಂದ ನಡೆಯುತ್ತಿರುವ ಪ್ಯಾಲೆಸ್ಟೀನಿಯನ್ನರ ಬಂಡಾಯ ಕಂಡು ದೊರೆ ಹುಸೇನ್ ಕೊನೆಗೂ ಈ ನಿರ್ಧಾರಕ್ಕೆ ಬಂದಂತೆ ಕಾಣುತ್ತದೆ. ಈ ಮೂಲಕ ಇಸ್ರೇಲ್ ಮತ್ತು ಜೋರ್ಡಾನ್ ನಡುವೆ ವ್ಯವಹಾರ ಕುದುರಿಸಿ ಪ್ಯಾಲೆಸ್ಟೈನ್‌ರನ್ನು ವಂಚಿಸುವ ಅಮೇರಿಕನ್ನರ ಯೋಚನೆಗೆ ಧಕ್ಕೆ ಬಂದಂತಾಗಿದೆ.

ಲೆನಿನ್‌ಗ್ರಾಡ್ ತರಬೇತಿಯೇ ನನಗೆ ಆಧಾರ

—ಮಕಾರೋವಾ

ನತಾಲ್ಯಾ ಮಕಾರೋವಾ ಲೆನಿನ್‌ಗ್ರಾಡ್‌ನ ಪ್ರಖ್ಯಾತ ಕಿರೋವ್ ಬ್ಯಾಲೆ ತಂಡದ ಬ್ಯಾಲೆ ಕಲಾಗಾರ್ತಿ. 18 ವರ್ಷಗಳ ಹಿಂದೆ ಈ ತಂಡ ಬ್ರಿಟನ್ನಿನ ಪ್ರವಾಸಕ್ಕೆ ಹೋಗಿದ್ದಾಗ ಆಕೆ ತಂಡದಿಂದ ತಪ್ಪಿಸಿಕೊಂಡು ದೇಶ ಬಿಟ್ಟು ಅಲ್ಲೇ ಇರಲಾರಂಭಿಸಿದಳು. ಇತ್ತೀಚೆಗೆ ಕಿರೋವ್ ಬ್ಯಾಲೆ ತಂಡ ಲಂಡನ್ನಿಗೆ ಹೋಗಿದ್ದಾಗ ಆಕೆ ಅದರ ಕಾರ್ಯಕ್ರಮವೊಂದರಲ್ಲಿ ಮತ್ತೊಮ್ಮೆ ಭಾಗ ವಹಿಸಿದಳು. ಈ ಸಂದರ್ಭದಲ್ಲಿ "ಈ 18 ವರ್ಷಗಳಲ್ಲಿ ಹೇಗಿತ್ತು ನಿಮ್ಮ ಜೀವನ ?" ಎಂದು ಪತ್ರಕರ್ತರು ಕೇಳಿದಾಗ ಆಕೆ ನೀಡಿದ ಉತ್ತರ ಹೀಗಿತ್ತು—"ಕೆಲವೊಮ್ಮೆ ಬಹಳ ಕಷ್ಟಕರವಾಗಿತ್ತು—ವೃತ್ತಿಯ ದೃಷ್ಟಿಯಿಂದ ಕೂಡಾ. ಇಲ್ಲಿ ಬದುಕು ಮತ್ತು ಕೆಲಸ, ಕರ್ತವ್ಯ ಮತ್ತು ಜವಾಬ್ದಾರಿ ಭಿನ್ನವಾಗಿವೆ. ಸೋವಿಯತ್ ಒಕ್ಕೂಟದಲ್ಲಿ ಎಷ್ಟೊಂದು ಮಂದಿ ನಮ್ಮ ಬಗ್ಗೆ ಕಾಳಜಿ ವಹಿಸುತ್ತಾರೆ. ಇಲ್ಲಿ ಏಕಾಂಗಿಯಾಗಿಯೇ ಸಂಘರ್ಷ ಮಾಡಿ ಬದುಕುಳಿಯಬೇಕು. ಲೆನಿನ್‌ಗ್ರಾಡ್‌ನ ತರಬೇತಿಯಿಲ್ಲದಿದ್ದರೆ ನಾನು ಯಶಸ್ವಿಯಾಗುವುದು ಎಂದೂ ಸಾಧ್ಯವಿರಲಿಲ್ಲ."

ಸಿ.ಪಿ.ಐ. (ಎಂ) ತ್ರಿಪುರಾ ಕಾರ್ಯದರ್ಶಿ ಮಂಡಳಿ ಹೇಳಿಕೆ

ಸೇನೆಯನ್ನು ಕೂಡಲೇ ಹಿಂತೆಗೆದುಕೊಳ್ಳಿ

ಟಿ.ಎನ್.ವಿ. ಸಮಸ್ಯೆಗೆ ಸಂಬಂಧಿಸಿದಂತೆ ಇತ್ತೀಚೆಗೆ ತಾನೇ ನವದೆಹಲಿಯಲ್ಲಿ ಕೇಂದ್ರ ಸರ್ಕಾರ-ರಾಜ್ಯ ಸರ್ಕಾರ ಹಾಗೂ ಟಿಎನ್‌ವಿ ನಡುವೆ ಆದ ಒಪ್ಪಂದ ಸರಿಯಾದ ಹೆಜ್ಜೆಯಾಗಿದ್ದು, ಇದನ್ನು ಈ ಹಿಂದೆಯೇ ಸಿಪಿಐ(ಎಂ) ಮತ್ತು ಎಡರಂಗ ಸರ್ಕಾರ ಒತ್ತಿ ಹೇಳಿತ್ತು.

ಆದರೆ ಈ ಒಪ್ಪಂದದ ಸಂದರ್ಭದಲ್ಲಿ ತ್ರಿಪುರಾದ ಜನತೆ ಹಾಗೂ ವಿರೋಧ ಪಕ್ಷಗಳನ್ನು ಗಣನೆಗೇ ತೆಗೆದುಕೊಳ್ಳದಿರುವುದು ಕಾಂಗ್ರೆ ಸರ್ಕಾರ ಹಾಗೂ ಟಿ.ಎನ್.ವಿ. ಭಯೋತ್ಪಾದಕರ ಮಧ್ಯೆ ಇರುವ ಹತ್ತಿರದ ಸಂಬಂಧದ ಗುಮಾನಿಯನ್ನು ಮತ್ತೊಮ್ಮೆ ಬಲಪಡಿಸಿದೆ.

ಎಡರಂಗ ಸರ್ಕಾರವನ್ನು ಉರುಳಿಸುವ ನಿಟ್ಟಿನಲ್ಲಿ ಟಿ.ಯು.ಜೆ.ಎಸ್. ನಿಂದ ಪ್ರೇರೇಪಿತವಾಗಿ ಟಿ.ಎನ್.ವಿ. ಸಾಮೂಹಿಕ ಹತ್ಯೆ ಹಾಗೂ ಭಯೋತ್ಪಾದಕತೆಯಲ್ಲಿ ತೊಡಗಿದ್ದನ್ನು ಇಲ್ಲಿ ಸ್ಮರಿಸಬಹುದು. ಕಾಂಗ್ರೆನ ಮಿತ್ರನಂತೆ ವರ್ತಿಸುತ್ತಿದ್ದ ಟಿ.ಯು.ಜೆ.ಎಸ್. ನಾಯಕತ್ವ ಸಾಮೂಹಿಕ ಹತ್ಯೆಗಳಲ್ಲಿ ತೊಡಗಿದ್ದಲ್ಲದೆ ರಾಜೀವ್ ಗಾಂಧಿಯವರು ಚುನಾವಣೆಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಇನ್ನಿಲ್ಲದ ಹೇಳಿಕೆಗಳನ್ನು ಕೊಡುತ್ತಾ ಇದೇ ಚುನಾವಣೆಯನ್ನು ಬುಡಮೇಲು ಮಾಡುವುದಕ್ಕಾಗಿ ಸರ್ವಾಧಿಕಾರಿ ರೀತಿಯಲ್ಲಿ ಸೇನೆಯನ್ನು ಬಳಸಿದರು. ಆದರೆ ಈ ಆರು ತಿಂಗಳಲ್ಲಿ ಸೇನೆ ಟಿ.ಎನ್.ವಿ.ಯವರನ್ನು ಮುಟ್ಟಿಯೇ ಇಲ್ಲದಂತೆ ವರ್ತಿಸುತ್ತಿದೆ.

ತ್ರಿಪುರದಲ್ಲಿ ಎಡರಂಗ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಟಿ.ಎನ್.ವಿ. ಯನ್ನೊಳಗೊಂಡಂತೆ ಎಲ್ಲಾ ಭಯೋತ್ಪಾದಕರೊಂದಿಗೆ ರಾಜಕೀಯ ಒಪ್ಪಂದಕ್ಕೆ ಬರಲು ನಡೆಸಿದ ಪ್ರಯತ್ನವಾಗಿ ಬಿನ್ನನಾಥ ಜಮಾಥಿಯಾ ನೇತೃತ್ವದಲ್ಲಿ ಭಯೋತ್ಪಾದಕರ ಒಂದು ಗುಂಪು ಶಸ್ತ್ರಗಳನ್ನು ಒಪ್ಪಿಸಿದ್ದರು. ಇದಲ್ಲದೆ ಎಡರಂಗ ಸರ್ಕಾರ ಭಯೋತ್ಪಾದಕತೆಯನ್ನು ಮೆಟ್ಟಿಹಾಕಲು ಎಲ್ಲಾ ವಿರೋಧ ಪಕ್ಷಗಳ ಸಹಾಯ ಸಲಹೆಗಳನ್ನು ಕೋರಿತ್ತು. ಬ್ಲಾಕ್ ಹಂತದಲ್ಲಿ ಬುಡಕಟ್ಟುಗಳ ಸಮಾವೇಶ ನಡೆಸಿ 'ಸ್ವತಂತ್ರ ತ್ರಿಪುರಾ' ಘೋಷಣೆಯನ್ನು ಬಯಲು ಮಾಡಿತ್ತು. ಎಡರಂಗದ ಈ ಎಲ್ಲಾ ಪ್ರಯತ್ನಗಳನ್ನು ಮುರಿಯಲು ಕಾಂಗ್ರೆ ಹಾಗೂ ಟಿ.ಯು. ಜೆ.ಎಸ್. ಆಗ ಪ್ರಯತ್ನಿಸಿತ್ತು.

ಆದರೆ ಇದೀಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಟಿ.ಎನ್.ವಿ. ಭಯೋತ್ಪಾದಕರು ಕಾನೂನು ವ್ಯವಸ್ಥೆಗೆ ಆತಂಕಕಾರಿಯಲ್ಲ ಎಂದು ಹೇಳುತ್ತಿರುವಾಗ ನಾವು ಗಲಭೆ ಪೀಡಿತ ಪ್ರದೇಶಗಳಲ್ಲಿ ನೇಮಿಸಿರುವ ಸೇನೆಗಳನ್ನು ಕೂಡಲೆ ವಾಪಸ್ ಕರೆಸಿಕೊಳ್ಳಬೇಕೆಂದು ಬೇಷರತ್ತಾಗಿ ಒತ್ತಾಯಿಸುತ್ತೇವೆ.

ಈ ಹಿನ್ನೆಲೆಯಲ್ಲಿ ಸಾಮರಸ್ಯದ ವಾತಾವರಣ ಉಂಟಾಗಲು ರಾಜ್ಯ ಸರ್ಕಾರವು ತ್ರಿಪುರಾ ವಿಧಾನ ಸಭೆಯ ಅಧಿವೇಶನವನ್ನು ತತ್‌ಕ್ಷಣದಲ್ಲಿ ನಡೆಸಿ ಒಪ್ಪಂದವನ್ನು ಚರ್ಚೆಗೆ ತೆರೆದಿಟ್ಟು ಒಪ್ಪಿಗೆ ಪಡೆಯಲು ಆಗ್ರಹಿಸುತ್ತದೆ.

ಪಂಜಾಬಿನ ಹುತಾತ್ಮರು

ಇತ್ತೀಚೆಗೆ ಸಭೆ ಸೇರಿದ್ದ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಇತ್ತೀಚೆಗೆ ಪಂಜಾಬಿನ ಹುತಾತ್ಮರ ಪದವಿಗೇರಿದ ಸಂಗಾತಿಗಳಿಗೆ ಹಾಗೂ ಹಿತೈಷಿಗಳಿಗೆ ತನ್ನ ಶ್ರದ್ಧಾಂಜಲಿ ಅರ್ಪಿಸಿತು. ಏಪ್ರಿಲ್ 30 ರಂದು ಕೊಲೆಯಾದ ಅಮೃತಸರ ಜಿಲ್ಲೆಯ ಜನಪ್ರಿಯ ರೈತಮುಖಂಡ ಹಾಗೂ ಸಿ. ಪಿ. ಐ. (ಎಂ) ಕಾರ್ಯಕರ್ತ ಕಾಮ್ರೇಡ್ ಸೂಜಾಸಿಂಗ್ ನಾಲರ್, 25 ವರ್ಷಗಳ ಪ್ರಜಾಪ್ರಭುತ್ವ ಆಂದೋಲನದಲ್ಲಿ ದುಡಿದ ಮಾಜಿ ಸಿ.ಪಿ.ಐ.(ಎಂ) ಎಂ.ಎಲ್.ಎ., ಜಾಲಂದರ್ ಜಿಲ್ಲೆಯ ಕೃಷಿ ಕಾರ್ಮಿಕರ ಸಂಘದ ಮುಖಂಡ ಕಾಮ್ರೇಡ್ ಹರಬಂಸ್ ಸಿಂಗ್ ಚೀಮಾ (ಮೇ 13 ರಂದು ಹುತಾತ್ಮರಾದರು) ಹಾಗೂ ಜುಲೈ 22ರಂದು ಜಾಲಂದರ್ ಜಿಲ್ಲೆಯಲ್ಲಿ ಹುತಾತ್ಮರಾದ ಪಕ್ಷದ ಹಿತೈಷಿಗಳಾದ ಕಾಮ್ರೇಡ್ ಬಲವಿಂದರ್ ಸಿಂಗ್ ಹಾಗೂ ಕೇವಲ್ ಸಿಂಗ್‌ರವರಿಗೆ ಕೇಂದ್ರ ಸಮಿತಿ ತನ್ನ ನೆನಕೆ ಸಲ್ಲಿಸಿತು.

KRNW/BGS-312 MAG (2) PRB DECR 319/78-79

ರಾಷ್ಟ್ರೀಯ ರಂಗದ ಮುಖಂಡರು ಜಾಗರೂಕರಾಗಿರಬೇಕು

(1ನೇ ಪುಟದಿಂದ)

ಪ್ರಮುಖ ಮುಖಂಡರು ಮುಂದಿನ ಚುನಾವಣೆಗಳನ್ನು ಯಾವ ಪರಿಸ್ಥಿತಿಯಲ್ಲಿ ಎದುರಿಸಬೇಕಾಗುತ್ತದೆ, ಕಾಂಗ್ರೆಸ್ (ಐ) ನ್ನು ಯಾವ ಪ್ರಮುಖ ಪ್ರಶ್ನೆಗಳ ಮೇಲೆ ಸೋಲಿಸಬೇಕು ಎಂಬುದನ್ನು ನಿಜವಾಗಿಯೂ ಅರಿತಿದ್ದಾರೆಯೇ ಎಂಬ ಸಂಶಯ ಬರುತ್ತದೆ.

ಮುಂಬರುವ ಚುನಾವಣೆಗೂ ಹಿಂದಿನ ಚುನಾವಣೆಗಳಿಗೂ ವ್ಯತ್ಯಾಸವೇ ಇಲ್ಲ; ಸಂಖ್ಯೆಗಳನ್ನು ಕೂಡಿಸಿದರಷ್ಟೇ ಸಾಕು, ಚುನಾವಣೆ ಗೆಲ್ಲಬಹುದು ಎಂಬ ದೃಷ್ಟಿಕೋನ ಕಾಂಗ್ರೆಸ್ (ಐ) ಗೇ ನೆರವು ನೀಡಬಹುದಷ್ಟೇ. ರಾಜಕೀಯದಲ್ಲಿ ಕೆಲವೊಮ್ಮೆ ಸಂಖ್ಯೆಗಳನ್ನು ಕೂಡುವುದೆಂದರೆ ಕಳೆದಂತೆಯೂ ಆಗುತ್ತದೆ ಎಂಬುದನ್ನು ಗಮನದಲ್ಲಿಡಬೇಕು.

ಇದುವರೆಗೆ ಜಾತ್ಯತೀತ ಪಕ್ಷಗಳು ಬಿ.ಜೆ.ಪಿ.ಯನ್ನು ದೂರವಿಟ್ಟು ರಾಷ್ಟ್ರೀಯ ರಂಗದ ಬಗ್ಗೆ ಪ್ರಗತಿಪರ ವಲಯಗಳಲ್ಲಿ ಆಶಾಭಾವನೆ ಉಂಟಾಗುವಂತೆ ಮಾಡಿದೆ. ಇದರಿಂದ ಬಿ.ಜೆ.ಪಿ, ಗೆ ತನ್ನ ಕೋಮು ರಾಜಕೀಯಕ್ಕೆ ಪೂರ್ಣ ಪ್ರಯೋಜನ ಪಡೆಯಲಾಗಲಿಲ್ಲವಲ್ಲಾ ಎಂದು ತೀವ್ರ ನಿರಾಸೆಯಾಗಿರುವುದು ಅದರ ಒಬ್ಬ ಪ್ರಧಾನ ಕಾರ್ಯದರ್ಶಿಗಳ ಆಕ್ರೋಶದಿಂದ, ಅವರು ಹಾಕಿರುವ ಬೆದರಿಕೆಯಿಂದ ಸ್ಪಷ್ಟವಾಗುತ್ತದೆ.

ಆದರೆ ಈಗಿರುವ ಪ್ರಶ್ನೆ—ವಿರೋಧ ಪಕ್ಷಗಳು ಈ ಬೆದರಿಕೆಗೆ ಬಗ್ಗುತ್ತವೆಯೋ ಅಥವಾ ಎಲ್ಲಾ ಕೋಮುಶಕ್ತಿಗಳನ್ನು ಮೂಲೆಗೆ ತಳ್ಳಿ, ದೇಶದ ಐಕ್ಯತೆಯ ಬಗ್ಗೆ ರಾಷ್ಟ್ರೀಯ ಭಾವನೆಯನ್ನು ಕ್ರೋಢೀಕರಿಸಲು ಮುಂದಾಗುತ್ತವೆಯೋ ಎನ್ನುವುದು.

ಕೆಲವು ಮುಖಂಡರ ಹೇಳಿಕೆಗಳನ್ನು ನೋಡಿದರೆ ಅವರು 'ತುಸು ತಾಳ್ಮೆಯಿಂದಿರಿ' ಎಂದು ಬಿ.ಜೆ.ಪಿ.ಯನ್ನು ಸಂತೈಸುತ್ತಿರುವಂತೆ ಕಾಣುತ್ತಿದೆ. ಅಲಹಾಬಾದ್ ಚುನಾವಣೆಯಲ್ಲಿಯೂ ಈ ದೌರ್ಬಲ್ಯ ಕಂಡು ಬಂದಿತ್ತು. ಅದು ಕೆಲವು ಮುಖಂಡರ ಜಾತ್ಯತೀತತೆಯ ಇಮೇಜ್‌ಗೆ ಧಕ್ಕೆ ತಂದಿತ್ತು. ಅವರ ನೀತಿವಂತಿಕೆಯ ಬಗ್ಗೆ ಸಂಶಯ ಮೂಡಿಸಿತ್ತು. ಈ ದೌರ್ಬಲ್ಯ ಇನ್ನೊಮ್ಮೆ ಕಾಣಿಸಿಕೊಂಡರೆ ಅದು ಕಾಂಗ್ರೆಸ್ (ಐ) ವಿರುದ್ಧ ಚುನಾವಣಾ ಹೋರಾಟದಲ್ಲೂ ಅನಾಹುತ ಉಂಟು ಮಾಡಬಹುದು.

ಪಂಜಾಬ್‌ನ ಘಟನೆಗಳು, ಪ್ರತ್ಯೇಕತಾವಾದಿ ಶಕ್ತಿಗಳ ಹಲ್ಲೆಗಳು, ಮತ್ತೆ ಮತ್ತೆ ಮರುಕಳಿಸುವ ಬರ್ಬರ ಕೋಮು ದಂಗೆಗಳು ಅವುಗಳಲ್ಲಿ ಮುಸ್ಲಿಮ್ ಅಲ್ಪ ಸಂಖ್ಯಾತರೇ ಹೆಚ್ಚು ಸಂಕಷ್ಟ ಕೊಳಗಾಗುತ್ತಿರುವುದು ಇಡೀ ದೇಶವನ್ನು, ವಿಶೇಷವಾಗಿ ಹಿಂದೀ ಪ್ರದೇಶಗಳನ್ನು ತಟ್ಟಿದೆ ಎಂಬ ಸಂಗತಿಯನ್ನು ಮರೆಯುವುದೆಂದರೆ ವಿರೋಧ ಪಕ್ಷಗಳ ಮುಖಂಡರು ತಾವೇ ತಮ್ಮ ಕೊರಳಿಗೆ ಉರುಲು ಹಾಕಿಕೊಂಡಂತೆ. ಬಿ.ಜೆ.ಪಿ. ಯನ್ನು ಸಂತುಷ್ಟಗೊಳಿಸುವ ಯಾವುದೇ ಸಮಯ ಸಾಧಕತೆ ಕೋಮುವಾದಿಯಲ್ಲದ ರಾಷ್ಟ್ರೀಯವಾದೀ ಮತಗಳನ್ನು ತಿರುಗಿಸಿ ಕಾಂಗ್ರೆಸ್ (ಐ)ಗೆ ನೆರವಾಗುತ್ತದೆ.

ಚುನಾವಣಾ ಹೋರಾಟ ರಾಷ್ಟ್ರೀಯ ಐಕ್ಯತೆಯ ವೇದಿಕೆಯಿಂದ ನಡೆಯದಿದ್ದರೆ, ಅಲ್ಪ ಸಂಖ್ಯಾಂತರ ಹಿತಾಸಕ್ತಿಗಳನ್ನು ನಾವು ಕಾಪಾಡುತ್ತೇವೆ: ಬಹು ಸಂಖ್ಯಾತ ಕೋಮುವಾದಿಗಳ ಹಲ್ಲೆಗಳಿಂದ ರಕ್ಷಣೆ ನೀಡುತ್ತೇವೆ ಎಂಬ ಭರವಸೆ ನೀಡಿದ್ದಿದ್ದರೆ ಈ ಹೋರಾಟದ ಉದ್ದೇಶವೇ ನೀರು ಪಾಲಾದಂತೆ. ಆಗ 1977 ರ ಪಾಠ ಮರುಕಳಿಸಲು ಹಿಂದಿನಂತೆ ಎರಡು ವರ್ಷಗಳೂ ಬೇಕಾಗಲಿಕ್ಕಿಲ್ಲ.

ವಿರೋಧ ಪಕ್ಷಗಳ ಮತ್ತು ಕೋಮು ಶಕ್ತಿಗಳ ಒಂದು ಕೂಟವನ್ನು ಎಡ ಪಕ್ಷಗಳು ಅಥವಾ ನಿರಂತರವಾಗಿ ಜಾತ್ಯತೀತತೆಯನು ಎತ್ತಿ ಹಿಡಿಯುತ್ತಾ ಬಂದ ಯಾವುದೇ ಸಂಘಟನೆ ಹೇಗೆ ತಾನೇ ಬೆಂಬಲಿಸಲು ಸಾಧ್ಯ ?

ಕಾಂಗ್ರೆಸ್ (ಐ) ಮತಗಳು ಬಹಳಷ್ಟು ವಿರೋಧಪಕ್ಷಗಳತ್ತ ತಿರುಗುತ್ತವೆ ಎಂಬುದರ ಮೇಲಿದೆ ಜನಮೋರ್ಚಾದ ಮುಖಂಡರ ಲೆಕ್ಕಾಚಾರ. ಅವರ ನಿರೀಕ್ಷೆಯೂ ಸರಿಯೇ. ರಾಜೀವಗಾಂಧಿ ಸರ್ಕಾರ ರಾಷ್ಟ್ರೀಯ ಅನೈಕ್ಯತೆ ಮತ್ತು ವಿಘಟನೆಯ ಸರ್ಕಾರ. ಅದು ದೇಶದ ಐಕ್ಯತೆಯನ್ನು ರಕ್ಷಿಸಲಾರದು ಎಂದು ರಾಷ್ಟ್ರೀಯ ವಾದಿಗಳ ಒಂದು ದೊಡ್ಡ ವಿಭಾಗಕ್ಕೆ ಅರಿವಾಗಿದೆ. ಆದರೆ ಬಿ.ಜೆ.ಪಿ.ಯೊಂದಿಗೆ ಸಖ್ಯ ಈ ದೊಡ್ಡ ವಿಭಾಗವನ್ನು ವಿರೋಧ ಪಕ್ಷಗಳಿಂದ ಖಂಡಿತವಾಗಿ ದೂರತಳ್ಳುವ ಕ್ರಮ. ಜನಮೋರ್ಚಾ ಮುಖಂಡರಿಗಾದರೂ ಇದು ತಿಳಿದಿರಬೇಕು. ಆದರೆ ಚುನಾವಣೆ ಗೆಲ್ಲಲು ಯಾವುದೇ ಮಾರ್ಗವು ತಪ್ಪಲ್ಲ ಎಂದು ಅವರು ಭಾವಿಸುವುದಾದರೆ ಯಾವ ರೀತಿಯಲ್ಲೂ ಅವರನ್ನು ಉಳಿಸಲು ಸಾಧ್ಯವಿಲ್ಲ.

ವಿರೋಧ ಪಕ್ಷಗಳ ಮುಖಂಡರು ಈಗೇನಾಗುತ್ತಿದೆ, ಚುನಾವಣೆ ಸಮೀಪಿಸಿದಂತೆ ಏನಾಗಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈಗಾಗಲೇ ಜನರಮಧ್ಯೆ ತನ್ನ ಹೆಸರನ್ನು ಸರಿಪಡಿಸಿಕೊಳ್ಳಲು, ಕಾಂಗ್ರೆಸ್(ಐ) ತೀವ್ರ ಪ್ರಯತ್ನ ಆರಂಭಿಸಿದೆ. ಹರಿಜನ-ಗಿರಿಜನ ಕಲ್ಯಾಣದ ಮೇಲೆ ವಿಶೇಷ ಖರ್ಚು, ಬಡತನ ಪರಿಹಾರ ಕಾರ್ಯಕ್ರಮದ ಘೋಷಣೆ, ಇಂದಿರಾಗಾಂಧಿಯವರ ಕೊಲೆಯ ನಂತರ ರಾಜೀವಗಾಂಧಿಯನ್ನು ಅಧಿಕಾರಕ್ಕೆ ತರುವಲ್ಲಿ ದೊಡ್ಡ ಪಾಲು ವಹಿಸಿದ ಮಹಿಳೆಯರ ಮತಗಳನ್ನು ಮತ್ತೊಮ್ಮೆ ಗಿಟ್ಟಿಸಲು ಮಹಿಳಾ ಅಭಿವೃದ್ಧಿಯ ಯೋಜನೆ ಇತ್ಯಾದಿಗಳಷ್ಟೇ ಅಲ್ಲ, ತಾನು ಕೋಮು ಹಿತಾಸಕ್ತಿಗಳಲ್ಲಿ ಸಮನ್ವಯ ತರಬಲ್ಲೆ ಎಂದು ತೋರಿಸುವ ಪ್ರಯತ್ನಗಳನ್ನು ಅದು ನಡೆಸುತ್ತಿದೆ. ಚುನಾವಣೆ ಸಮೀಪಿಸಿದಂತೆ ಇಂತಹ ಪ್ರಯತ್ನಗಳು ಇನ್ನಷ್ಟು ತೀವ್ರಗೊಳ್ಳುತ್ತವೆ.

ಇಂತಹ ಸನ್ನಿವೇಶದಲ್ಲಿ ವಿರೋಧ ಪಕ್ಷಗಳು ಬಿ.ಜೆ.ಪಿ. ಮತ್ತಿತರ ಕೋಮುಶಕ್ತಿಗಳ ಪಕ್ಷ ವಹಿಸುತ್ತವೆ, ಅಥವಾ ಅವುಗಳೊಂದಿಗೆ ಸಖ್ಯತೆ ಬೆಳೆಸಿವೆ ಎನ್ನುವಂತಾದರೆ ರಾಷ್ಟ್ರೀಯವಾದೀ ಮತವನ್ನು ಅವರು ತಾವಾಗಿಯೇ ಕಾಂಗ್ರೆಸ್ (ಐ) ಗೆ ಉಡುಗೊರೆಯಿತ್ತಂತಾಗುತ್ತದೆ.

ಕಾಂಗ್ರೆಸ್(ಐ)ನ್ನು ಸೋಲಿಸಲು ಮತ್ತು ವಿಭಜನಕಾರೀ ಹಾಗೂ ಕೋಮುಶಕ್ತಿಗಳನ್ನು ದೂರಮಾಡಲು ತಾವು ಖಂಡಿತಾ ಬದ್ಧ ಎನ್ನುವ ವಿರೋಧ ಪಕ್ಷಗಳ ಕೂಟವನ್ನು ಮಾತ್ರವೇ ಎಡಪಕ್ಷಗಳು ಬೆಂಬಲಿಸಲು, ಅದರೊಡನೆ ಸಖ್ಯ ಬೆಳೆಸಲು ಸಾಧ್ಯ.

ಈಗಾಗಲೇ ರಾಷ್ಟ್ರೀಯ ರಂಗದ ಮುಖಂಡರು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು, ಪಾಲನ್ನು ನಿರ್ಧರಿಸಿಕೊಳ್ಳುವಲ್ಲಿ ಬಹಳ ಸಮಯ ಕಳೆದು, ಇತ್ತೀಚಿನ ಚುನಾವಣೆಗಳು ಹುಟ್ಟಿಸಿದ ಉತ್ಸಾಹವನ್ನು ವ್ಯರ್ಥಗೊಳಿಸಿದ್ದಾರೆ; ಜನರನ್ನು ಮರೆತು ಈ ಉತ್ಸಾಹ ತಣ್ಣಗಾಗುವಂತೆ ಮಾಡಿದ್ದಾರೆ. ಆದರೂ ಇದನ್ನು ಸರಿಪಡಿಸಿಕೊಳ್ಳಲು ಇನ್ನೂ ಸಮಯವಿದೆ. ಜನ ಆಗಲೇ ಮುನ್ನಡೆಯುತ್ತಿದ್ದಾರೆ.

ಡಿಸೆಂಬರ್ 9ರ ಪ್ರದರ್ಶನ ಮತ್ತು ಮಾರ್ಚ್ 15 ಬಂದ್‌ನ ನಂತರ ಈಗ ಸೆಪ್ಟೆಂಬರ್‌ನ ಪೂರ್ವಾರ್ಧದಲ್ಲಿ ದೇಶಾದ್ಯಂತ ರೈತರ ಹಾಗೂ ಕೃಷಿ ಕೂಲಿಗಾರರ ಬೃಹತ್ ಸಾಮೂಹಿಕ ಕಾರ್ಯಾಚರಣೆಗಳ ಮೂಲಕ ಎಡಪಕ್ಷಗಳು ಮೂರನೇ ಬಾರಿಗೆ ಜನಸಮೂಹಗಳನ್ನು ಅಣಿನೆರೆಸುವಲ್ಲಿ ಮುಂದಡಿಯಿಡುತ್ತಿದ್ದಾರೆ. ವಿರೋಧ ಪಕ್ಷಗಳ ಹಾಗೂ ರಾಷ್ಟ್ರೀಯರಂಗದ ಮುಖಂಡರು ಕಾಂಗ್ರೆಸ್(ಐ) ದುರಾಡಳಿತದ ವಿರುದ್ಧ ಜನರನ್ನು ಒಗ್ಗಟ್ಟಾಗಿಸುವ ಬಗ್ಗೆ ಗಂಭೀರವಾಗಿ ಯೋಚಿಸುತ್ತಿದ್ದರೆ ಅವರು ರೈತರು ಹಾಗೂ ಕೃಷಿ ಕಾರ್ಮಿಕರ ಈ ಚಳುವಳಿಗೆ ಮತ್ತು ಅವರ ಬೇಡಿಕೆಗಳಿಗೆ ಪೂರ್ಣ ಬೆಂಬಲ ನೀಡಬೇಕು.

ಪರಸ್ಪರರ ಮೇಲೆ ಬೈಗುಳ ವಿಶೇಷಣಗಳನ್ನು ಸುರಿಯುವುದು ಅಥವಾ ಬಿ.ಜೆ.ಪಿ.ಯ ಬೆದರಿಕೆಗೆ ತಲೆ ಬಾಗುವುದಕ್ಕಿಂತ ಇದು ಒಂದು ವಿಶ್ವಾಸಾರ್ಹ ರಂಗ ಕಟ್ಟುವಲ್ಲಿ ಎಷ್ಟೋ ಪಾಲು ಹೆಚ್ಚು ಪರಿಣಾಮಕಾರಿಯಾದ ಮಾರ್ಗ.

ಪಕ್ಷದ 13 ನೇ ಅಧಿವೇಶನ

(1ನೇ ಪುಟದಿಂದ)

ತಯಾರಿಸಲ್ಪಟ್ಟು ಅವುಗಳ ಆಧಾರದಲ್ಲಿ ಚರ್ಚೆ ನಡೆದು ಸಮಿತಿಗಳು ರಚಿಸಲ್ಪಡಬೇಕಾಗಿದೆ. ಮೇಲಿನ ಸಮ್ಮೇಳನಗಳಿಗೆ ಪ್ರತಿನಿಧಿಗಳನ್ನು ಆರಿಸಬೇಕಾಗಿದೆ.

"ಪ್ರಜಾಪ್ರಭುತ್ವ ಕೇಂದ್ರೀಕರಣ"ದ ಸಂಘಟನಾ ತತ್ವದ ಆಧಾರ ಸಂಘಟನಾ ಸೂತ್ರನಾಗಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ "ಈ ಸಮ್ಮೇಳನಗಳ ಕೊನೆಯಲ್ಲಿ ಇಡೀ ದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿ, ರಾಜಕೀಯ ಪರಿಸ್ಥಿತಿ ಜನರನ್ನು ಭಾದಿಸುತ್ತಿರುವ ವಿವಿಧ ಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿ, ಉಳಿಗಮಾನ್ಯ ಮತ್ತು ಅರೆಉಳಿಗಮಾನ್ಯ ಹಾಗೂ ಸಾಮ್ರಾಜ್ಯಶಾಹಿ ಮೌಲ್ಯಗಳು ಯಾವುವು, ಅವುಗಳ ವಿರುದ್ಧ ದೇಶದ ವಿವಿದೆಡೆಗಳಲ್ಲಿ ಪಕ್ಷದ ಘಟಕಗಳು ಹೇಗೆ ಹೋರಾಡಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತವು ಪ್ರಭಾವಿತವಾಗುವಂತೆ ಮಾಡಲಾಗುತ್ತಿದೆ, ಜನತೆಯ ವಿವಿಧ ವಿಭಾಗಗಳ ಮಧ್ಯೆ ಸಾಮೂಹಿಕ ಸಂಘಟನೆಗಳು ಹೇಗೆ ಆಯಾಯ ವಿಭಾಗಗಳ ಸಮಸ್ಯೆಗಳನ್ನು ರಾಷ್ಟ್ರೀಯ ಪ್ರಶ್ನೆಗಳನ್ನು ಎತ್ತಿ ಹೋರಾಡುತ್ತಿವೆ,ಈ ಚಳವಳಿಗೆಲ್ಲಾ ಸೂತ್ರಪ್ರಾಯವಾಗಿ ಪಕ್ಷದ ಘಟಕಗಳು ಸಮಾಜದ ವಿವಿದೆಡೆಗಳಲ್ಲಿ ವಿವಿಧ ಜನವಿಭಾಗಗಳಲ್ಲಿ ವಿವಿಧ ಸ್ತರಗಳಲ್ಲಿ ಹೇಗೆ ಕೆಲಸ ಮಾಡುತ್ತಿವೆ. ಈ ಕೆಲಸ ಕಾರ್ಯಗಳಲ್ಲಿ, ಅವುಗಳನ್ನು ನಡೆಸಿಕೊಂಡು ಹೋಗುವಾಗ ಬರುವ ತಪ್ಪುಗಳು-ದೋಷಗಳು ಯಾವುವು, ಪಕ್ಷದ ಕೇಂದ್ರದ 1976 ರಲ್ಲಿ ಕ್ರೋಢೀಕರಿಸಿ ನವೀಕರಿಸಿದ ದಸ್ತಾವೇಜುಗಳ "ತಿಳುವಳಿಕೆ"ಯ ಆಧಾರದಲ್ಲಿ ಅವುಗಳನ್ನು ಹೋಗಲಾಡಿಸಲು ಯಾವಕ್ರಮಗಳನ್ನುವಹಿಸಲಾಗುತ್ತಿವೆ ಇವೆಲ್ಲಾ ಚರ್ಚಿಸಲ್ಪಟ್ಟು, ಈ ಚರ್ಚೆಯ ಫಲವಾಗಿ ಬರುವ ಅನುಭವವನ್ನು ಕೇಂದ್ರೀಕರಿಸಬೇಕಾಗಿದೆ. ಈ ವಿಮರ್ಶೆಯು ಪಕ್ಷದ 12 ನೇ ಅಧಿವೇಶನದ ನಿರ್ದೇಶನಗಳ ಹಿನ್ನೆಲೆಯಲ್ಲಿ ಎಡಪಕ್ಷಗಳ ಪತಾಕೆಯನ್ನು ಬೆಳೆಸಬೇಕು, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಸ್ವತಂತ್ರವಾಗಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಾಚರಣೆ ಮಾಡಬೇಕು ಮತ್ತು ಎಡ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಮತ್ತು ಶಕ್ತಿಗಳ ಪರ್ಯಾಯವನ್ನು ಕಟ್ಟಬೇಕು-ನಡೆಯಬೇಕಾಗಿದೆ.

ಪಕ್ಷದ ಸರಿಯಾದ ತಿಳುವಳಿಕೆಯ ಆಧಾರದಲ್ಲಿ ಕೆಲಸ ಮಾಡುತ್ತಾ ಬಂದುದರ ಫಲವಾಗಿ ಇಂದು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ಪ್ರಬಲ ಪಕ್ಷವನ್ನು ಎಡ, ಜಾತ್ಯತೀತ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟಿ ಬೆಳೆಸಲು ಸಾಧ್ಯವಾಗಿದೆ ಎಂಬುದು ಸರ್ವವಿದಿತವಾಗಿದೆ. ಹಾಗೆಯೇ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಪಕ್ಷವು ಸಾಮೂಹಿಕವಾಗಿಯೂ ಕ್ರಾಂತಿಕಾರಿಯಾಗಿಯೂ ಸದೃಢವಾಗಿಯೂ ವಿಶಾಲವಾಗಿಯೂ ಬೆಳೆಯುತ್ತಿರುವುದನ್ನು ನಾವು ಕಾಣುತ್ತೇವೆ. ಪಂಜಾಬ್ ಮತ್ತು ಅಸ್ಸಾಂಗಳಲ್ಲಿ ಪ್ರತ್ಯೇಕತಾವಾದಿಗಳ ಮತ್ತು ಛಿದ್ರಕಾರಿಗಳ ಅತ್ಯಧಿಕ ಒತ್ತಡ ಮತ್ತು ಧಾಳಿಗಳನ್ನು ಎದುರಿಸಿ ಆ ರಾಜ್ಯಗಳಲ್ಲಿ ನಮ್ಮ ಪಕ್ಷವು ಪ್ರಬಲವಾದ ಹೆಜ್ಜೆಗಳನ್ನು ಮುಂದಿಡುವುದನ್ನು ನಾವು ಕಾಣುತ್ತೇವೆ.

ನಮ್ಮ ಪಕ್ಷದ ಕಾರ್ಯಕ್ರಮ ಮತ್ತು ನಿಲುವುಗಳ ಆಧಾರದಲ್ಲಿ ಇದು ಸಾಧ್ಯವಾದರೆ ಕರ್ನಾಟಕದಲ್ಲಿ ಕೂಡ ಇಂತಹ ಮುನ್ನಡೆ ಹಾಗೂ ಬೆಳವಣಿಗೆ ಸಾಧ್ಯವಾಗಬೇಕಲ್ಲವೇ ?

ಈ ಮೂರು ವರ್ಷಗಳಲ್ಲಿ 1986 ರಿಂದ 1988 ರ ವರೆಗೆ ರಾಜ್ಯದಲ್ಲಿ ವಿವಿಧೆಡೆಗಳಲ್ಲಿ, ವಿವಿಧ ಜನ ವಿಭಾಗಗಳ ಮಧ್ಯೆ, ರಾಜ್ಯದ ರಾಜಕೀಯದಲ್ಲಿ, ಜನತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದರಲ್ಲಿ ನಮ್ಮ ಪಕ್ಷದ ಘಟಕಗಳು ಮತ್ತು ಸಮಿತಿಗಳು ಹಾಗೂ ಸಾಮೂಹಿಕ ಸಂಘಟನೆಗಳು ಎಷ್ಟು ಮುಂದಕ್ಕೆ ಅಡಿಯಿಟ್ಟಿವೆ ಎಂಬುದನ್ನು ನಾವು ಈ ಸಮ್ಮೇಳನದ ವೇಳೆ ಯಥಾರ್ಥವಾದ ಅಂದಾಜುಗಳನ್ನು ಮಾಡಲು ಸಾಧ್ಯವಾಗಬೇಕು.

ಕೆಲವೆಡೆ ಹಿನ್ನಡೆಯಾಗಿರುವುದು ಏಕೆ ? ಎಂಬುದನ್ನು ನಾವು ತಿಳಿದಿರಬೇಕು. ಇಡೀ ರಾಜ್ಯದಲ್ಲಿ ಸಾಕಷ್ಟು ತೀವ್ರವಾಗಿ ಮುನ್ನಡೆ ಸಾಧಿಸಬೇಕಾದರೆ ನಾವು ನಮ್ಮ ಕೆಲಸದ ಶೈಲಿಯಲ್ಲಿ ಯಾವಪ್ರಮುಖ ಬದಲಾವಣೆಗಳನ್ನು ಮಾಡಬೇಕಿದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಕೆಲವು ಅವಶ್ಯಕ ತೀರ್ಮಾನಗಳನ್ನು ಕೈಗೊಳ್ಳಬೇಕಿದೆ.

ಅದೇ ವೇಳೆ ಈ ಸಮ್ಮೇಳನಗಳು ರಾಜ್ಯದ ಜನವಿಭಾಗಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಭಾಗಿಗಳಾಗುವಂತೆ ಮಾಡಲು ಎಲ್ಲಾ ಶಾಖೆಗಳೂ, ಕಾರ್ಯಕರ್ತರು ಮತ್ತು ಮುಂದಾಳುಗಳು ವಿಶೇಷ ಗಮನ ಕೊಡಬೇಕಾಗಿದೆ.

ಈ ಸಮ್ಮೇಳನಗಳು ಯಶಸ್ವಿಯಾಗುವುವು ಹಾಗೂ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಚಳುವಳಿಯು ಹುಲುಸಾಗಿ ಬೆಳೆಯುವುದು ಖಂಡಿತ ಎಂಬ ವಿಶ್ವಾಸ ನಮಗಿದೆ.

ಆಂಧ್ರ ಬಂದ್‌ಗೆ ಕರೆ

(1ನೇ ಪುಟದಿಂದ)

ತುರ್ತು ಪರಿಸ್ಥಿತಿ ಹೇರಿಕೆ ನೀತಿಯ ಬಗ್ಗೆ ಕೂಡ ತಮ್ಮ ತೀವ್ರ ಕಾಳಜಿ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಮನವಿ ನೀಡಿ ಪ್ರತಿಭಟನೆ ಮಾಡಿದ ಕೆಲ ದಿನಗಳ ನಂತರ ಇದೇ ರಾಜ್ಯದ್ಯಂತ ರೈಲ್ ರೋಖೋ ಮಾಡಿ ಲಕ್ಷ ಲಕ್ಷ ಜನರನ್ನು 5 ಬೇಡಿಕೆಗಳ ಮೇಲೆ ಬೀದಿಗಿಳಿಸಿತು ವಾಮರಂಗ.

ಈಗ ಆಂಧ್ರ ಪ್ರದೇಶದಲ್ಲಿ ದೆಹಲಿಯಲ್ಲಿ ಆಂಧ್ರ ಜನರ ಪ್ರತಿನಿಧಿಗಳ ಮೇಲೆ ಧಾಳಿ ನಡೆದ ನಂತರ ಇಡೀ ಆಂಧ್ರ ಪ್ರದೇಶದಲ್ಲಿ ಬಂದ್ ಆಚರಿಸಲು ತೆಲುಗು ದೇಶಂ ಹಾಗೂ ಅದರ ಮಿತ್ರ ಪಕ್ಷಗಳು ನಿರ್ಧರಿಸಿವೆ. ತೆಲುಗು ಭಾಷಿಕರ ಅಭಿವೃದ್ಧಿಯ ಬೇಡಿಕೆಗಳಿಗಷ್ಟೇ ಇದು ಸೀಮಿತವಾದರೂ ಈ ಚಳುವಳಿ ಸಮೂಹ ಚಳುವಳಿಯಾಗಿ ಬೆಳೆಯುವ ಸಾಧ್ಯತೆಗಳನ್ನು ಪೂರ್ಣವಾಗಿ ಉಪಯೋಗಿಸಬೇಕಾಗಿದೆ ಮತ್ತು ಕೇಂದ್ರೀಕರಣ ಮತ್ತು ಹೊಸ ಆರ್ಥಿಕ ನೀತಿಯ ವಿರುದ್ಧದ ಚಳುವಳಿಯಾಗಿ ರೂಪುಗೊಳ್ಳಲಿದೆ.

ವಿರೋಧ ಪಕ್ಷಗಳು ಸರ್ಕಾರಗಳನ್ನು ನಡೆಸುತ್ತಿರುವ ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆ ಪಕ್ಷ ಆ ಸರ್ಕಾರಗಳಿಗೆ ಕಾನೂನು ಸಮಸ್ಯೆಯನ್ನೊಡ್ಡಿ ಆ ಸರ್ಕಾರಗಳ ವಿರುದ್ಧ ದುಷ್ಟ ಕ್ರಮಕೈಗೊಳ್ಳಲು ಕೇಂದ್ರ ಸರಕಾರಕ್ಕೆ ಅವಕಾಶ ನೀಡುವ ಕ್ರಮಗಳನ್ನೇ ಕೈಗೊಂಡಿದೆ.

ತೆಲುಗುದೇಶಂ ಪಕ್ಷ ನಿರಂತರವಾಗಿ ಕೇಂದ್ರದ ನೀತಿಯ ಬಗ್ಗೆ ಕಾಂಗ್ರೆ ಬಗ್ಗೆ ಸಾಮೂಹಿಕ ಚಳುವಳಿ ನಡೆಸಲಿಲ್ಲ. ಇದರಿಂದಾಗಿ ಕಾಂಗ್ರೆ ಪಕ್ಷದ ಶಾಸಕರು ರಾಯಲ ಸೀಮಾ ಮತ್ತು ತೆಲಂಗಾಣಗಳ ಅಭಿವೃದ್ಧಿಯಲ್ಲಿ ಅಸಮಾನತೆಯ ಹಳೆಯ ಪ್ರಶ್ನೆಯನ್ನೇ ಎಬ್ಬಿಸಿ ಒಂದು ಪ್ರದೇಶದ ಜನರನ್ನು ಮತ್ತೊಂದು ಪ್ರದೇಶದ ಜನರ ವಿರುದ್ಧ ರೊಚ್ಚಿಗೆಬ್ಬಿಸುವ ಕೆಲಸ ಮಾಡಲು ಅವಕಾಶ ಮಾಡಿ ಕೊಟ್ಟಿತು.

ಕಾಂಗ್ರೆ ಶಾಸಕರು ಶಾಸನ ಸಭೆಯಲ್ಲಿಯೇ ನಿರಶನ ಹೂಡಿದ ನಂತರವಾದರೂ ರಾಜ್ಯದ ಅಭಿವೃದ್ಧಿಯ ಹಿಂದುಳಿಕೆಗೆ, ರಾಯಲ ಸೀಮಾದ ಹಿಂದುಳಿಕೆಗೆ ಕೂಡ ಈಗ ಚಳುವಳಿ ಹೂಡಿದ ಕಾಂಗ್ರೆ ಪಕ್ಷವೇ ಕಾರಣ ಎಂದು ತೋರಿಸಿಕೊಡಲು ಮುಂದೆ ಬಂದದ್ದು ಜನರೆಲ್ಲರ ಗಮನವನ್ನು ಕೇಂದ್ರದ ದುಷ್ಕಾರ್ಯಗಳ ಬಗ್ಗೆ ಸೆಳೆದದ್ದು ಸ್ವಾಗತಾರ್ಹ. ಇದನ್ನು ಆಂಧ್ರದ ಜನ ಸಮೂಹಗಳ ಮುಂದೆ ಕೊಂಡೊಯ್ದು ಬೃಹತ್ ಪ್ರಶ್ನೆಯಾಗಿಸಲು ಆಂಧ್ರದ ವಿರೋಧ ಪಕ್ಷಗಳು ಪ್ರಯತ್ನಿಸುತ್ತವೆಂದು ಎಲ್ಲರ ನಿರೀಕ್ಷೆಯಾಗಿದೆ.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sulthanpet, Bangalore-560053. Editorial and Managerial Office : L-56, K. V. Temple Street, Sulthanpet, B-53, Phone : 75331.
Editor : P. Ramachandra Rao, Managing Editor : N. K. Upadhayaya. Janagere Mudrana, Bangalore-21.